ಸಾಹಿತ್ಯ ದಾಸೋಹ – 241

ಸಂಚಿಕೆ 65 – ಅಕ್ಟೋಬರ್ 2025   13.09.2025ರ ದಾಸೋಹದ ಬರಹಗಳ ಸಂಕಲನ



ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ

ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಪುಟ ತೆರೆಯುವ ಮುನ್ನ...

ನಮ್ಮ ಮಾತು

ಆತ್ಮೀಯರೆ,

೧೩ನೆಯ ಸೆಪ್ಟೆಂಬರ್ ೨೦೨೫ರಂದು ಶ್ರೀಮತಿ ಸ್ನೇಹಾ ಶಶಿಧರ ಅವರ ಅಧ್ಯಕ್ಷತೆಯಲ್ಲಿ ನಡೆದ ೨೪೧ನೆಯ ದಾಸೋಹದಲ್ಲಿ ೧೯ ಲೇಖಕರು ಭಾಗವಹಿಸಿ ಒಟ್ಟು ೨೨ ಸ್ವರಚಿತ ಬರಹಗಳನ್ನು ಪ್ರಸ್ತುತ ಪಡಿಸಿದ್ದರು. ಈ ಎಲ್ಲ ಬರಹಗಳು ಹಾಗೂ ಅವುಗಳ ಬಗ್ಗೆ ಅಧ್ಯಕ್ಷರ ಅವಲೋಕನಗಳನ್ನೊಳಗೊಂಡ ಸಂಚಿಕೆ ಇಲ್ಲಿದೆ.

ಈ ಬಾರಿಯ 'ತಿಂಗಳ ಬೆಳಕು' ಸರಣಿಯ ೧೯ನೆಯ ಕಾರ್ಯಕ್ರಮದಲ್ಲಿ ಡಾ. ಕೆ.ರಾಜಕುಮಾರ್ ಅವರು 'ಕನ್ನಡ ಅರಿವು ಮತ್ತು ಅಭಿಯಾನ' ಎಂಬ ವಿಷಯದ ಬಗ್ಗೆ ಸಾಕಷ್ಟು ಮಾಹಿತಿಪೂರ್ಣ ಉಪನ್ಯಾಸವನ್ನು ನೀಡಿದರು. ಈ ಕಾರ್ಯಕ್ರಮದ ವರದಿ, ಸಾಹಿತ್ಯ ದಾಸೋಹದ ವರದಿ ಹಾಗೂ ನಮ್ಮ 'ಕವಿ ಮನ' ಅಂಕಣದಲ್ಲಿ ಪ್ರಸ್ತುತಪಡಿಸಲಾದ ನಾಲ್ಕು ಕವನಗಳನ್ನೂ ಈ ಸಂಚಿಕೆ ಒಳಗೊಂಡಿದೆ.

ದಾಸೋಹದ ಅಧ್ಯಕ್ಷತೆವಹಿಸಿ, ದಾಸೋಹದಲ್ಲಿ ಓದಲಾದ ಎಲ್ಲ ಪ್ರಸ್ತುತಿಗಳನ್ನು ಅವಲೋಕಿಸಿದ ಶ್ರೀಮತಿ ಸ್ನೇಹಾ ಶಶಿಧರ್ ಅವರಿಗೂ, ವೀಕ್ಷಕರಿಗೂ, ಬರಹಗಾರರಿಗೂ, ವರದಿಗಾರರಿಗೂ ಮತ್ತು ಅಂತರ್ಜಾಲ ಮುಖೇನ ನಡೆದ ನಮ್ಮ ಎಲ್ಲ ಕಾರ್ಯಕ್ರಮಗಳಿಗೆ ತಾಂತ್ರಿಕ ನೆರವು ನೀಡಿದ ಎಲ್ಲ ಸದಸ್ಯರಿಗೂ ನಮ್ಮ ವಂದನೆಗಳು.

ಈ ಸಂಚಿಕೆಯ ಬಗೆಗಿನ ತಮ್ಮ ಅನಿಸಿಕೆಗಳಿಗೆ ಸ್ವಾಗತ.

ವಂದನೆಗಳೊಂದಿಗೆ,

ಸಂಚಾಲಕ ಸಮಿತಿ
ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

11.10.2025

ದಾಸೋಹದ ಪುಟಗಳಲ್ಲಿ...

ಮುಖಚಿತ್ರ – ಚನ್ನಪಟ್ಟಣದ ಬೊಂಬೆ ಜೋಡಿ (ಚಿತ್ರ ಕೃಪೆ: ಅಂತರ್ಜಾಲ)

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಾಹಿತ್ಯ ದಾಸೋಹ – 241

ಕಾರ್ಯಕ್ರಮ ವರದಿ: ರಾಧಿಕಾ ವಿ. ಗುಜ್ಜರ್

13ನೆಯ ಸೆಪ್ಟೆಂಬರ್ 2025ರಂದು ಶನಿವಾರ ಇಳಿ ಮಧ್ಯಾಹ್ನ 3.30ಕ್ಕೆ ನಿಗದಿಯಾಗಿದ್ದ ಸೆಪ್ಟೆಂಬರ್ ತಿಂಗಳ ಹಾಗೂ 241ನೆಯ ಸಾಹಿತ್ಯ ದಾಸೋಹ ಕಾರ್ಯಕ್ರಮವು ಗೂಗಲ್ ಮೀಟ್ ಅಂತರ್ಜಾಲ ಮುಖೇನ ಸಮಯಕ್ಕೆ ಸರಿಯಾಗಿ ಆರಂಭವಾಯಿತು.

ಶ್ರೀ ಕೆ.ಎನ್.ಮಹಾಬಲ ಅವರು ಸಭೆಯ ಸಂಚಾಲಕತ್ವ ವಹಿಸಿ, ಔಪಚಾರಿಕ ಸ್ವಾಗತದ ಮೂಲಕ ಶುಭಾರಂಭ ಘೋಷಿಸಿದರು.

ಶ್ರೀಮತಿ ಮಾನಸ.ಕೆ.ಕೆ. ಅವರು ಸಭಾಧ್ಯಕ್ಷರು, ಸಂಚಾಲಕ ಮಂಡಳಿ ಮತ್ತು ಸಭೆಯ ಎಲ್ಲರಿಗೂ ಸ್ವಾಗತ ಕೋರಿ, ಇಂದಿನ ಸಭೆಯ ಅಧ್ಯಕ್ಷರಾದ ಶ್ರೀಮತಿ ಸ್ನೇಹಾ ಶಶಿಧರ್ ಅವರನ್ನು ಪರಿಚಯಿಸಿದರು.

ಸಂಚಾಲಕ ಸಮಿತಿಯ ಪರವಾಗಿ ಶ್ರೀ ಕೆ.ಎನ್.ಮಹಾಬಲ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿ,

- ನಗೆಬ್ರಹ್ಮ ಶ್ರೀ ಎಂ.ಎಸ್.ನರಸಿಂಹಮೂರ್ತಿ ಅವರ ಅಧ್ಯಕ್ಷತೆಯಲ್ಲಿ ನಡೆಯಲಿರುವ ದಸರಾ ಕವಿಗೋಷ್ಠಿಯಲ್ಲಿ ಭಾಗವಹಿಸುತ್ತಿರುವ ವೇದಿಕೆಯ ಪ್ರಮುಖ ಕವಿಗಳಾದ ಶ್ರೀ ಬೆಂ.ಶ್ರೀ.ರವೀಂದ್ರ, ಡಾ.ಗೋವಿಂದ ಹೆಗಡೆ, ಶ್ರೀ ಪತ್ತಂಗಿ ಮುರಳಿ, ಶ್ರೀಮತಿ ಗಿರಿಜಾರಾಜ್ ಹಾಗೂ ಮತ್ತೊಂದು ದಸರಾ ವೇದಿಕೆಯ ಕವನ ವಾಚನದಲ್ಲಿ ಭಾಗವಹಿಸುತ್ತಿರುವ ವೇದಿಕೆಯ ಸೃಜನಶೀಲ ಬರಹಗಾರ್ತಿಯಾದ ಶ್ರೀಮತಿ ಶುಭಶ್ರೀ ಪ್ರಸಾದ್ ಅವರಿಗೆ ಶುಭ ಹಾರೈಕೆಗಳನ್ನು ತಿಳಿಸಿದರು.
- ತಮ್ಮ "ಪಾರೋತಿಯ ಶಿವ" ಕತೆಗಾಗಿ ಕಲೇಸಂನ "ನಿರುಪಮಾ ದತ್ತಿ ನಿಧಿ ಪ್ರಶಸ್ತಿ" ಪಡೆದಿರುವ ಶ್ರೀಮತಿ ಗಿರಿಜಾ ರಾಜ್ ಅವರನ್ನು ಅಭಿನಂದಿಸಿದರು.
- ಶ್ರಾವಣ ಮಕ್ಕಳ ಸಣ್ಣ ಕಥಾಸಂಕಲನದ ಮುದ್ರಣ ಕಾರ್ಯವು ಭರದಿಂದ ಸಾಗುತ್ತಿರುವುದಾಗಿ ತಿಳಿಸಿದರು.



ನಂತರ ದಾಸೋಹದಲ್ಲಿ ಲೇಖನಗಳನ್ನು ಪ್ರಸ್ತುತಪಡಿಸಲು ನೋಂದಾಯಿಸಿದ್ದ ವೇದಿಕೆಯ ಇಪ್ಪತ್ತೊಂದು ಸದಸ್ಯರ ಪೈಕಿ ಹತ್ತೊಂಬತ್ತು ಸದಸ್ಯರಿಂದ ಸ್ವರಚಿತ ಬರಹಗಳ ವಾಚನವು ಆರಂಭವಾಯಿತು.

ಪ್ರಸ್ತುತಿಗಳು ಮುಗಿದ ನಂತರ ಸಾಹಿತ್ಯ ದಾಸೋಹ-241ರ ಅಧ್ಯಕ್ಷರಾದ ಶ್ರೀಮತಿ ಸ್ನೇಹಾ ಶಶಿಧರ್ ಅವರು ತಮ್ಮ ಅಧ್ಯಕ್ಷೀಯ ಸ್ಪಂದನೆಯನ್ನು ದಾಖಲಿಸಿದರು. ಪ್ರಥಮವಾಗಿ ಅವರು ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನವನ್ನು

ಅಭಿನಂದಿಸಿ, 241ನೇ ದಾಸೋಹಕ್ಕೆ ತಮ್ಮನ್ನು ಅಧ್ಯಕ್ಷೆಯನ್ನಾಗಿ ಆಯ್ಕೆ ಮಾಡಿದುದರ ಕುರಿತು ಧನ್ಯವಾದಗಳನ್ನು ವ್ಯಕ್ತಪಡಿಸಿದರು. ಒಂದೊಂದು ಪ್ರಸ್ತುತಿಯನ್ನೂ ವಿವರಣಾತ್ಮಕವಾಗಿ ವಿವರಿಸಿ ಅದರ ಹರಳುಗಟ್ಟಿಸಿದ ತಿರುಳನ್ನು ಅತ್ಯಂತ ಸಮರ್ಪವಾಗಿ, ಚಿಕ್ಕ ಚೊಕ್ಕ ರೀತಿಯಲ್ಲಿ ಮಂಡಿಸಿದರು. ಸಾಹಿತ್ಯ ಕ್ಷೇತ್ರದಲ್ಲಿ ನಾನು ಇನ್ನೂ ಬೆಳೆಯಬೇಕಿರುವ ಹೊಸಬಳು ಎನ್ನುತ್ತಲೇ ಪ್ರೌಢ ಅನಿಸಿಕೆಗಳನ್ನು ದಾಖಲಿಸಿ ಅಧ್ಯಕ್ಷೀಯ ಸ್ಥಾನಕ್ಕೆ ತುಂಬು ನ್ಯಾಯವನ್ನೊದಗಿಸಿದರು.

ಅಂತಿಮವಾಗಿ ಶ್ರೀ ಕೆ.ಎನ್.ಮಹಾಬಲ ಅವರು ವಂದನಾರ್ಪಣೆಯನ್ನು ಸಲ್ಲಿಸುವ ಮೂಲಕ ಸೆಪ್ಟೆಂಬರ್ ತಿಂಗಳ ನೋಡಿಯೋ ಸಾಹಿತ್ಯ ದಾಸೋಹವು ಸಮಾಪ್ತವಾಯಿತು.

ಸಾಹಿತ್ಯ ದಾಸೋಹದ ಸಂಚಾಲಕತ್ವ : ಶ್ರೀ ಕೆ.ಎನ್.ಮಹಾಬಲ
ಜಿ ಮೀಟ್ ಆತಿಥ್ಯ : ಶ್ರೀಮತಿ ರಾಧಿಕಾ ವಿ. ಗುಜ್ಜರ್
ವಿಡಿಯೋ ಸಂಸ್ಕರಣೆ : ಶ್ರೀ ಗುರುರಾಜ ಶಾಸ್ತ್ರಿ
ಪಿಡಿಎಫ್ ಸಂಚಿಕೆ ರಚನೆ : ಶ್ರೀ ಶೃಂಗೇಶ್ವರ ಶರ್ಮ ಎಸ್.

***

ತಿಂಗಳ ಬೆಳಕು - 19

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಕನ್ನಡದ ಅರಿವು ಮತ್ತು ಅಭಿಮಾನ

ಉಪನ್ಯಾಸಕರು: ಶ್ರೀ ಕೆ. ರಾಜಕುಮಾರ್

ವರದಿ: ಹು.ವಾ. ಶ್ರೀಪ್ರಕಾಶ್

27ನೆಯ ಸೆಪ್ಟೆಂಬರ್ 2025ರ ಶನಿವಾರ ಸಂಜೆ 5 5:30ಕ್ಕೆ ಕಾರ್ಯಕ್ರಮ ಆರಂಭವಾಯಿತು. ಆರಂಭದಲ್ಲಿ 'ತಿಂಗಳ ಬೆಳಕು' ಸಂಚಾಲಕ ಶ್ರೀ ರವಿ ಕುಸುಬಿಯವರು ಪ್ರಾಸ್ತಾವಿಕ ಮಾತುಗಳನ್ನಾಡಿ ಎಲ್ಲರನ್ನೂ ಸ್ವಾಗತಿಸಿದರು.

ಶ್ರೀ ಕೆ.ಎನ್. ಮಹಾಬಲರವರು ಉಪನ್ಯಾಸಕರಾದ ಶ್ರೀ ಕೆ ರಾಜಕುಮಾರ ಅವರನ್ನು ಪರಿಚಯಿಸಿ, ಕನ್ನಡಪರ ಚಳವಳಿ ಮಾತ್ರವಲ್ಲದೆ ಕನ್ನಡ ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದಂತೆ ಶ್ರೀ ರಾಜಕುಮಾರರ ಸಾಧನೆಯನ್ನು ವಿವರಿಸಿದರು.

ನಂತರ ರಾಜಕುಮಾರರವರು 'ಕನ್ನಡದ ಅರಿವು ಮತ್ತು ಅಭಿಮಾನ' ಎಂಬ ಬಗ್ಗೆ ಅತ್ಯಂತ ಉತ್ತಮ ಉಪನ್ಯಾಸವನ್ನು ಸುಮಾರು ಒಂದು ಗಂಟೆ ಕಾಲ ನೀಡಿದರು. ಅವರ ಉಪನ್ಯಾಸದ ಮುಖ್ಯ ಅಂಶಗಳು ಇಲ್ಲಿವೆ:

ಕನ್ನಡ ಭಾಷೆಗೆ ಸುಮಾರು 2000 ವರ್ಷಗಳ ಸುದೀರ್ಘವಾದ ಶ್ರೀಮಂತವಾದ ಇತಿಹಾಸವಿದೆ. ಕನ್ನಡ ಈ ನೆಲದ ಸೊಗಡು ಹಾಗೂ ಅಂತಸ್ಸತ್ವ. ಕನ್ನಡದ ಬಗ್ಗೆ ನಮ್ಮ ಅಭಿಮಾನ ಜಾಗೃತವಾಗಬೇಕಾದರೆ ಅದು ಕ್ರಿಯಾಶೀಲವಾಗಬೇಕು. ಕನ್ನಡ ಕೋಟಿ ಕೋಟಿ ಜನರ ಕೊರಳ ಧ್ವನಿಯಾಗಿರುವುದರಿಂದ ಮತ್ತು ಅದು ಈ ನೆಲದ ಜೊತೆಗೆ ಅವಿನಾಭಾವ ಸಂಬಂಧ ಬೆಸೆದು ಕೊಂಡಿರುವುದರಿಂದ ನಮ್ಮಲ್ಲಿ ಕನ್ನಡದ ಬಗ್ಗೆ ಅಭಿಮಾನ ಇರಬೇಕು. ಅಭಿಮಾನ ಮೂಡಬೇಕಾದರೆ ನಾವು ಕನ್ನಡದ ಅರಿವನ್ನು ವಿಸ್ತರಿಸಿಕೊಳ್ಳಬೇಕು. ಎಲ್ಲಿ ನಮ್ಮ ಅರಿವಿನಲ್ಲಿ ಕೊರತೆ, ಲೋಪ ಇರುತ್ತದೋ ಅದನ್ನು ತಿದ್ದಿಕೊಳ್ಳಬೇಕಾದ ಅಗತ್ಯವಿದೆ. ಈ ಉಪನ್ಯಾಸದಲ್ಲಿ ಕನ್ನಡದಲ್ಲಿ ಏನೆಲ್ಲ ಕೆಲಸ ಆಗಿದೆ ಎಷ್ಟು ಎತ್ತರದಲ್ಲಿ ನಾವು ಇದ್ದೇವೆ ಎಂಬುದನ್ನು ಮನಗಾಣಿಸುವ ವಿನಮ್ರ ಪ್ರಯತ್ನ ಮಾಡುತ್ತೇನೆ. ಈ ವಿಷಯದ ಬಗ್ಗೆ ನಾಡಿನ ಹಲವಾರು ಕಡೆ ಉಪನ್ಯಾಸ ಮಾಡಿದ್ದು ಈಗ 21ನೇ ವರ್ಷದಲ್ಲಿ ಅಡಿ ಇರಿಸಿದ್ದು, ಈ ದಿನ ನಿಮಗೆಲ್ಲ ತಿಳಿಸುವ ಭಾಗ್ಯ ನನ್ನದಾಗಿದೆ.



ಕನ್ನಡ ಎಂದರೆ ಏನು ಎಂಬ ಪ್ರಶ್ನೆ ಇಟ್ಟಾಗ ಅದೊಂದು ನುಡಿ, ನಮ್ಮ ರಾಜ್ಯದ ಆಡಳಿತ ಭಾಷೆ ಎನ್ನುತ್ತೇವೆ. ಕುವೆಂಪು ಅವರು ಕನ್ನಡ ಎಂದರೆ ತಾಯಿ ಕಣಾ ಶಕ್ತಿ ಕಣಾ ದೇವಿ ಕಣಾ ಎಂದು ತಾಯಿಗೆ ಶಕ್ತಿಗೆ ದೇವಿಗೆ ಹೋಲಿಸುತ್ತಾರೆ .ಇದಕ್ಕೆ ಪ್ರತ್ಯುತ್ತರವಾಗಿ ಅಡಿಗರು ಕನ್ನಡ ಎಂದರೆ ತಾಯಿಯೇ ದೇವಿಯೇ ನಾನು ನೀನು ಅವರು ಎನ್ನುತ್ತಾರೆ. ಕುವೆಂಪುರವರ ವ್ಯಾಖ್ಯಾನ ಭಾವನಿಷ್ಠವಾಗಿದ್ದರೆ ಅಡಿಗರ ವ್ಯಾಖ್ಯಾನ ಜನಪರವಾಗಿದೆ. ಈ ಎರಡರ ಹದವಾದ ಮಿಶ್ರಣ ಅಗತ್ಯ ಅಲ್ಲಿ ಭಾವ ನಿಷ್ಠೆಯೂ ಬೇಕು, ಜನಪರವಾದ ವಸ್ತುನಿಷ್ಠೆಯೂ ಇರಬೇಕು. ಕನ್ನಡವನ್ನು ಹಿಂದೆ ಅನೇಕ ನೆಲೆಗಳಲ್ಲಿ

ಬಳಸುತ್ತಾ ಇದ್ದೆವು. ಕನ್ನಡ ಅಂದರೆ ಒಂದು ಭಾಷೆಯನ್ನು ಮಾತನಾಡುವ ಪ್ರದೇಶದ ಹೆಸರು ಕೂಡ ಆಗಿತ್ತು ಆ ಭಾಷೆಯನ್ನು ಮಾತನಾಡುವ ಸಮುದಾಯಕ್ಕೂ ಕನ್ನಡ ಎನ್ನುತ್ತಿದ್ದರು. ಪ್ರತ್ಯೇಕವಾಗಿ ಈಗ ಕನ್ನಡ, ಕನ್ನಡಿಗ, ಕರ್ನಾಟಕ ಅಂತ ನಾವು ಹೇಳುತ್ತೇವೆ. ಕನ್ನಡ ನಮಗೆ ಮೂರಕ್ಷರದ ಅದ್ಭುತ ಮಂತ್ರ. ಕರ್ನಾಟಕವೆಂದರೆ ಪರಿಮಳಯುಕ್ತ ನಾಡು. ಶ್ರೀಗಂಧದ ನಾಲ್ಕು ಬಗೆಯ ತಳಿಗಳು ಬೆಳೆಯುವುದರಿಂದ ಕ ಮತ್ತು ನಾಡು ಕರ್ನಾಟಕ ಎನ್ನುತ್ತಾರೆ. ಶ್ರೀಗಂಧ ಕೇವಲ ಪಶ್ಚಿಮ ಘಟ್ಟದಲ್ಲಿ ಬೆಳೆಯುವಂತಹದು .ಆದ್ದರಿಂದ ಇದಕ್ಕೆ ಭಾವನಾರ್ಥಕ ಅರ್ಥ ಕೊಟ್ಟಿದ್ದರೂ ಇದು ಸಮಂಜಸವೆನಿಸಲಾರದು. ಕಪ್ಪು ಮಣ್ಣಿನ ಪ್ರದೇಶ ಅಂತಲೂ ಹೇಳುತ್ತಾರೆ. ಉತ್ತರ ಕರ್ನಾಟಕದ ಕಡೆ ಕಪ್ಪು ಮಣ್ಣು, ದಕ್ಷಿಣ ಕರ್ನಾಟಕದಲ್ಲಿ ಕೆಂಪು ಮಣ್ಣು ಇದೆ. ಇದು ಕೂಡ ಆಂಶಿಕ ಸತ್ಯ. ಹಾಗಾಗಿ ಇದು ಸರಿಯಾದ ವ್ಯಾಖ್ಯಾನವಲ್ಲ. ಕರ್ನಾಟಕವೆಂದರೆ ಎತ್ತರವಾದ ಪ್ರದೇಶ. ದಕ್ಷಿಣ ಪ್ರಸ್ಥಭೂಮಿಯಲ್ಲಿ ಕರ್ನಾಟಕ ಎತ್ತರದಲ್ಲಿ ನೆಲೆಗೊಂಡಿದೆ. ಈ ವ್ಯಾಖ್ಯಾನ ಒಪ್ಪಿಗೆಯಾಗಿದೆ. ಭೌಗೋಳಿಕವಾಗಿ ಮಾತ್ರವಲ್ಲದೆ ಸಾಹಿತ್ಯ ಸಂಗೀತ ಕಲೆ ಈ ಎಲ್ಲ ವಿಚಾರಗಳಲ್ಲೂ ಕರ್ನಾಟಕ ಎತ್ತರದಲ್ಲಿದೆ. ನಮ್ಮ ಪ್ರದೇಶ ಎತ್ತರದಲ್ಲಿರುವುದರಿಂದ ಇಲ್ಲಿ ಹುಟ್ಟುವ ನದಿಗಳೆಲ್ಲ ಬೇರೆ ರಾಜ್ಯಕ್ಕೆ ಹೋಗುತ್ತವೆ.

ಕ್ರಿಸ್ತ ಶಕ 450ನೇ ಇಸ್ವಿಯಲ್ಲಿ ಹಲ್ಮಿಡಿಯಲ್ಲಿ ಕನ್ನಡದ ಶಿಲಾಶಾಸನ ಸಿಕ್ಕಿತು. ಆ ಶಾಸನದ ಭಾಷೆ ಪೂರ್ವದ ಹಳೆಗನ್ನಡ. ಈಗ ಆ ಶಾಸನವನ್ನು ಬೆಂಗಳೂರಿನ ಕಸ್ತೂರಿಬಾ ರಸ್ತೆಯಲ್ಲಿರುವ ಕರ್ನಾಟಕ ರಾಜ್ಯ ಪ್ರಾಚ್ಯ ವಸ್ತು ಸಂಗ್ರಹಾಲಯದಲ್ಲಿ ಇಟ್ಟಿದ್ದಾರೆ ಈ ರೀತಿಯ ಪ್ರಾಚೀನತೆ ಜಗತ್ತಿನ ಕೆಲವೇ ಭಾಷೆಗಳಿಗಿರುವುದು. ಜಗತ್ತಿನಲ್ಲಿ ಕನ್ನಡ ಭಾಷೆಯನ್ನು ಪ್ರಾಚೀನ ಭಾಷೆ ಎಂದು ಯುನೆಸ್ಕೋ ಸಂಸ್ಥೆ ಮಾನ್ಯ ಮಾಡಿದೆ. ಚೈನೀಸ್, ಲ್ಯಾಟಿನ್, ಅರೇಬಿಕ್, ಪರ್ಷಿಯನ್, ಸಂಸ್ಕೃತ, ಹೀಬ್ರು, ಗ್ರೀಕ್, ಈ ಏಳು ಭಾಷೆಗಳನ್ನು ಪ್ರಾಚೀನ ಭಾಷೆ ಎಂದು ಮಾನ್ಯ ಮಾಡಿದೆ. ಭಾರತ ಸರ್ಕಾರ ತಮಿಳು, ಕನ್ನಡ, ತೆಲುಗು, ಮಲಯಾಳಂ, ಒರಿಯಾ ಭಾಷೆಗಳನ್ನು ಹಿಂದೆಯೇ ಮಾನ್ಯ ಮಾಡಿತ್ತು. ಇತ್ತೀಚೆಗೆ ಮರಾಠಿ, ಅಸ್ಸಾಮಿ ಇತ್ಯಾದಿ ಐದು ಭಾಷೆಗಳನ್ನು ಈ ಪಟ್ಟಿಗೆ ಸೇರಿಸಿತು. ಕನ್ನಡ ಒಂದು ಪ್ರಾಚೀನ ಭಾಷೆ ಎಂಬುದು ಹೆಮ್ಮೆಯ ಸಂಗತಿ. ಕನ್ನಡ ಶಾಸ್ತ್ರೀಯ ಭಾಷೆ ಎಂದು ಹೆಮ್ಮೆ ಪಡಬಹುದು. ನಮ್ಮ ಆತ್ಮವಿಶ್ವಾಸ ಪ್ರಜ್ವಲಿಸಲು ನಮ್ಮ ನುಡಿಯ ಬಗ್ಗೆ ನಾವು ಹೆಮ್ಮೆ ತಾಳಲು ಇದು ಕೂಡ ಒಂದು ಕಾರಣ.

ಕನ್ನಡ ಬಹುಭಾಷಾ ಪರಿಸರದಲ್ಲಿ ಆಡಳಿತ ಭಾಷೆ. ಅದು ತನ್ನ ಸೋಪಜ್ಞತೆ ಉಳಿಸಿಕೊಂಡಿದೆ ಎಂಬುದು ಹೆಮ್ಮೆಯ ಸಂಗತಿ. ಕನ್ನಡ ಅಳಿವಿನ ಅಂಚಿನಲ್ಲಿದೆ ಎಂದು ಕೆಲವರು ಮಾತನಾಡುವರು. ಇದು ಮೃತ ಭಾಷೆಯಲ್ಲ, ಅಮೃತ ಭಾಷೆ. ಕರ್ನಾಟಕದ ಈಗಿನ ಜನಸಂಖ್ಯೆ ಸುಮಾರು ಏಳು ಕೋಟಿ ಐದು ಲಕ್ಷ. ಕರ್ನಾಟಕದ ವಿಸ್ತೀರ್ಣ 191791 ಚದರ ಕಿಲೋಮೀಟರ್. ಇದರ ವಿಶೇಷವೇನೆಂದರೆ ಒಂದು ಕ್ಷಣ ಇದನ್ನು ಪ್ರತ್ಯೇಕ ರಾಷ್ಟ್ರ ಎಂದು ಭಾವಿಸಿದರೆ ಜಗತ್ತಿನ 193 ದೇಶಗಳ ಪಟ್ಟಿಯಲ್ಲಿ ವಿಸ್ತೀರ್ಣದಲ್ಲಿ ಇದಕ್ಕೆ 91ನೇ ಸ್ಥಾನ ಇದ್ದು, 102 ದೇಶಗಳು ಕೆಳಗಡೆ ಬರುತ್ತವೆ. ಜನಸಂಖ್ಯೆಯಲ್ಲಿ ಕೇವಲ 20 ದೇಶಗಳಲ್ಲಿ ಏಳು ಕೋಟಿಗಿಂತ ಹೆಚ್ಚು ಜನರಿದ್ದಾರೆ. ಆದ್ದರಿಂದ ಕರ್ನಾಟಕ ಒಂದು ತುಂಡು ತುಣುಕು ಎಂದು ಭಾವಿಸಬಾರದು. .ಭಾಷೆ ಮುಂದಕ್ಕೆ ಸಾಗುತ್ತಿರುತ್ತದೆ. ಜಾಗತೀಕರಣವಾದ ಅಂದರೆ 30 ವರ್ಷದ ಹಿಂದೆ ಕೇವಲ 50–55 ಕನ್ನಡ ಚಿತ್ರಗಳು ತಯಾರಾಗುತ್ತಿತ್ತು. ಈಗ ಕನ್ನಡದಲ್ಲಿ 150 ಚಿತ್ರಗಳು ನಿರ್ಮಾಣವಾಗುತ್ತಿದೆ. 1991ರಲ್ಲಿ ಬೆಂಗಳೂರು ದೂರದರ್ಶನ ಮಾತ್ರ ಇತ್ತು. ಈಗ 10 ಕನ್ನಡ ಸುದ್ದಿ ವಾಹಿನಿಗಳಿವೆ. ಆಪ್ ನಲ್ಲಿ 40 ಚಾನೆಲ್ ನೋಡಬಹುದು. ಇದಲ್ಲದೆ ಹಲವು ಸ್ಥಳೀಯ ಚಾನೆಲ್‌ಗಳೂ ಇವೆ. ಮೊದಲು ಕರ್ನಾಟಕದಲ್ಲಿ ಕೇವಲ ಆರು ಆಕಾಶವಾಣಿ ಕೇಂದ್ರಗಳಿದ್ದವು. ಈಗ 20 ಕೇಂದ್ರಗಳಾಗಿವೆ. ಜೊತೆಗೆ 10 ಖಾಸಗಿ ಆಕಾಶವಾಣಿ ಕೇಂದ್ರಗಳಿವೆ. ಹಿಂದೆ ಕೆಲವೇ ಕನ್ನಡ ಪತ್ರಿಕೆಗಳಿದ್ದವು, ಇಂದು ಹಲವಾರು ಇವೆ. ಓದುಗರು ಹೆಚ್ಚಿದ್ದಾರೆ. ಪತ್ರಿಕೆಗಳ ಪ್ರಚಾರ ಸಂಖ್ಯೆ ಜಾಸ್ತಿಯಾಗಿದೆ. ಕನ್ನಡ ಅವಸಾನದ ಅಂಚಿನಲ್ಲಿದೆ ಎನ್ನುವುದು ಕಪೋಲ ಕಲ್ಪಿತ. ಆದರೆ ಕನ್ನಡಕ್ಕೆ ಅಡ್ಡಿ ಅಡಚಣೆಗಳಿವೆ, ಕನ್ನಡಕ್ಕೆ ಸಮಸ್ಯೆಗಳಿವೆ. ಅವೆಲ್ಲವೂ ನಿವಾರಿಸಿಕೊಳ್ಳಬಹುದಾಗಿದ್ದು, ನಮ್ಮ ಜನ ನಾಡು ನುಡಿಯ ಬಗ್ಗೆ ಒಂದಷ್ಟು ಅಭಿಮಾನವನ್ನು ಇಟ್ಟುಕೊಂಡರೆ ಸಮಸ್ಯೆ ಪರಿಹಾರವಾಗುವುದು.

ಪ್ರಾಥಮಿಕ ಶಿಕ್ಷಣ ಕನ್ನಡದಲ್ಲಿ ಆಗಬೇಕು. ಕನ್ನಡ ಶಿಕ್ಷಣ ಮಾಧ್ಯಮವಾಗಬೇಕು. ಸಂವಿಧಾನಕ್ಕೆ ತಿದ್ದುಪಡಿ ಮಾಡಿ ಈ ದೇಶದ ಎಲ್ಲ ರಾಜ್ಯಗಳಲ್ಲೂ ಆಯಾ ರಾಜ್ಯದ ಭಾಷೆ, ಮಾತೃಭಾಷೆಯಲ್ಲಿ ಬೋಧಿಸುವಂತಾಗಬೇಕು. ಇಂಗ್ಲೀಷ್ ಅಂತಾರಾಷ್ಟ್ರೀಯ

ಭಾಷೆ ಅಂತ ಕರೆಯುತ್ತೇವೆ. ಇದು ಸುಳ್ಳು. ಶೇಕಡ 85ರಷ್ಟು ಇಂಗ್ಲಿಷ್ ಮಾತನಾಡುವವರು ಇರುವ ಅಮೆರಿಕದಲ್ಲೂ ಇಂಗ್ಲಿಷ್ ಇತ್ತೀಚಿನವರೆಗೂ ಆಡಳಿತ ಭಾಷೆಯಾಗಿರಲಿಲ್ಲ. ಈಗ ಆಗಿದೆ. ಇಂಗ್ಲಿಷಿಗೆ 800 ವರ್ಷಗಳ ಇತಿಹಾಸವೂ ಇಲ್ಲ. ಸಾವಿರ ವರ್ಷದ ಹಿಂದೆಯೇ ಪಂಪ 'ನೆನೆಯುವುದೆನ್ನ ಮನಂ ಬನವಾಸಿ ದೇಶಮಂ' ಎಂದು ಮಹಾಕಾವ್ಯ ಬರೆದ. ಕವಿರಾಜಮಾರ್ಗ ಕನ್ನಡದ ಮೊದಲ ಕೃತಿ. ಕಾವೇರಿಯಿಂದ ನರ್ಮದೆವರಿಗೂ ಕನ್ನಡ ನಾಡು ಇತ್ತು. ಕನ್ನಡ ಭವ್ಯ ಪರಂಪರೆ ಹೊಂದಿದ ನಾಡು. ಈಗ ಆತ್ಮವಿಶ್ವಾಸದಲ್ಲಿ ಕೊರತೆ ಉಂಟಾಗಿದೆ. ಅಭಿಮಾನ ಕಾಪಾಡಿಕೊಳ್ಳಬೇಕು.

ಇಂಗ್ಲಿಷ್ ಭಾಷೆಯಲ್ಲಿ 26 ಅಕ್ಷರಗಳು. ಕನ್ನಡದಲ್ಲಿ 49 ಅಕ್ಷರಗಳಿದ್ದು ನಮ್ಮ ಲಿಪಿಯನ್ನು ನಿಖರವಾಗಿ ತಾರ್ಕಿಕವಾಗಿ ಮಾಡಿಕೊಂಡಿದ್ದೇವೆ. ಕನ್ನಡವನ್ನು ಬರೆದಂತೆ ಓದಬಹುದು. ಇಂಗ್ಲಿಷ್ ರೋಮನ್ ಲಿಪಿಯಲ್ಲಿದೆ. ಕನ್ನಡಕ್ಕೆ ತನ್ನದೇ ಆದ ಸ್ವಂತ ಲಿಪಿ, ಅಂಕೆಗಳು ಇವೆ. ಭಾರತದ ರಾಷ್ಟ್ರಭಾಷೆ ಹಿಂದಿ ಅಲ್ಲ. ಹಿಂದಿ ಕೇಂದ್ರ ಸರ್ಕಾರದ ಆಡಳಿತ ಭಾಷೆಯಷ್ಟೆ. ಹಿಂದಿಯೇತರ ರಾಜ್ಯಗಳಲ್ಲಿ ವ್ಯವಹರಿಸಲು ಇಂಗ್ಲೀಷ್ ಬಳಸಬೇಕು. ಇಂಗ್ಲೀಷ್ ಸಂಪರ್ಕ ಭಾಷೆ. ಹಿಂದಿಯೊಂದಿಗೆ ಯಾವುದೇ ನಂಟು ಇಲ್ಲದಿದ್ದರೂ ಸರಕಾರ ಹಿಂದಿ ಹೇರುವ ಪ್ರಯತ್ನ ಮಾಡುತ್ತಿದೆ. ತ್ರಿಭಾಷಾ ಸೂತ್ರವನ್ನು ನಾವು ತಿರಸ್ಕರಿಸಬೇಕು. ಕರ್ನಾಟಕದಲ್ಲಿ ಕನ್ನಡ ಆಡಳಿತ ಭಾಷೆ. ಶಾಲೆಯಲ್ಲಿ ದ್ವಿಭಾಷಾ ಶಿಕ್ಷಣ ಇರಬೇಕು, ಉತ್ತರ ಭಾರತದಿಂದ ಇಲ್ಲಿಗೆ ಜನ ಬರುತ್ತಾರೆಂದು ನಾವು ಹಿಂದಿ ಕಲಿಯಬೇಕಾಗಿಲ್ಲ, ಕನ್ನಡ ಎಂದರೆ ಕೇವಲ ಸಾಹಿತ್ಯ ಅಥವಾ ಚಲನಚಿತ್ರ ದೊಂದಿಗೆ ಸಮೀಕರಿಸಬಾರದು. ಸಾಹಿತ್ಯ ಬದುಕು ಆಗಲಾರದು. ಬದುಕಿನ ಪರಿಧಿಯಲ್ಲಿ ಬರುವ ಸಂಗತಿ ಭಾಷೆ. ಕನ್ನಡದ ಬಗ್ಗೆ ಹೇಳುವಾಗ ಎಂಟು ಜ್ಞಾನಪೀಠ ಪ್ರಶಸ್ತಿ ಬಂದಿದೆ ಎಂದು ಮಾತ್ರ ಹೇಳುತ್ತೇವೆ. ಡಿವಿಜಿಯವರಿಗೂ ಬರಬೇಕಾಗಿತ್ತು. ಒಂದು ಮತದಿಂದ ಅವರಿಗೆ ಅನ್ಯಾಯವಾಯ್ತು.

ಶೇಕಡ 66ರಷ್ಟು ಕನ್ನಡ ಮಾತೃಭಾಷೆ ಆಗಿರುವವರು ಕರ್ನಾಟಕದಲ್ಲಿದ್ದಾರೆ. ಕನ್ನಡಕ್ಕೆ 70 ವರ್ಷದಲ್ಲಿ 68 ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ಬಂದಿವೆ. ಅಲ್ಲದೆ ಸರಸ್ವತಿ ಸಮ್ಮಾನ್, ಕಬೀರ್ ಸಮ್ಮಾನ್, ತುಳಸಿದಾಸ್, ಗೋಯೆಂಕಾ, ರಾಜಾಜಿ, ಕುಮಾರನ್ ಆಶಾನ್ ಪ್ರಶಸ್ತಿಗಳನ್ನೂ ಕನ್ನಡಿಗರು ಪಡೆದುಕೊಂಡಿದ್ದಾರೆ. ಕರ್ನಾಟಕ ಸಂಗೀತ ಹುಟ್ಟಿದ್ದು ಕರ್ನಾಟಕದಲ್ಲಿ. ಉತ್ತರ ಕರ್ನಾಟಕದಲ್ಲಿ ಹಿಂದೂಸ್ತಾನಿ ಸಾಧನೆ ಮಾಡಿದವರು ಇದ್ದಾರೆ. ಕೆಲವರು ರವೀಂದ್ರ ಸಂಗೀತ ಮೈಗೂಡಿಸಿಕೊಂಡಿದ್ದಾರೆ. .ಎರಡೂ ಬಗೆಯ ಸಂಗೀತ ಪ್ರಕಾರ ಪೋಷಿಸುತ್ತ ಬಂದಿರುವ ಏಕೈಕ ಭೂ ಭಾಗ ಕರ್ನಾಟಕ.

ಯುನೆಸ್ಕೋ ಹೆರಿಟೇಜ್ ಪಟ್ಟಿಯಲ್ಲಿ ಹಂಪೆ, ಪಟ್ಟದಕಲ್ಲು, ಬೇಲೂರು, ಹಳೇಬೀಡು, ಸೋಮನಾಥಪುರ, ಪಶ್ಚಿಮ ಘಟ್ಟಗಳು ಇವೆ ಈ ವಿಶ್ವ ಪರಂಪರೆ ಪಟ್ಟಿಯಲ್ಲಿ ಶ್ರವಣಬೆಳಗೊಳ ಸೇರಲು ಕಾಯುತ್ತಿದೆ. ಭೌಗೋಳಿಕ ಸೂಚ್ಯಂಕ ಪಡೆದಿರುವ 40ಕ್ಕೂ ಹೆಚ್ಚು ಪದಾರ್ಥಗಳು ನಮ್ಮದಾಗಿವೆ. ಬೆಂಗಳೂರಿನ ಗುಲಾಬಿ, ಈರುಳ್ಳಿ, ಮೈಸೂರಿನ ಬದನೆ, ವೀಳ್ಯದೆಲೆ, ಮಲ್ಲಿಗೆ, ಬ್ಯಾಡಗಿ ಮೆಣಸು – ಹೀಗೆ ದೊಡ್ಡ ಪಟ್ಟಿಯೇ ಇದೆ. ತಾಂತ್ರಿಕ ಸಾಧನೆಗಳಲ್ಲಿ ನಾವು ಬಹಳ ಮುಂದುವರಿದಿದ್ದೇವೆ. ಮೊದಲು ಏಕೀಕರಣವಾದದ್ದು 1956ರಲ್ಲಿ. ಆಡಳಿತ ಭಾಷೆ ಕನ್ನಡ ಆದದ್ದು 1963ರಲ್ಲಿ. ಬೆರಳಚ್ಚು ಯಂತ್ರ ಇಲ್ಲದಿದ್ದಕ್ಕೆ ಏಳು ವರ್ಷ ಮುಂದೂಡಲ್ಪಟ್ಟಿತ್ತು. ಈಗ ಕನ್ನಡ ವಿದ್ಯುನ್ಮಾನ ತಂತ್ರಜ್ಞಾನ ಕ್ಷೇತ್ರದಲ್ಲಿ ಮುಂದುವರೆದು ಬೇಕಾದ ಎಲ್ಲವನ್ನೂ ಹೊಂದಿದೆ, ಕನ್ನಡವನ್ನು ನಮ್ಮ ಕಾರ್ಖಾನೆಗಳ ಉತ್ಪನ್ನಗಳ ಮೇಲೆ ಬಳಸುತ್ತಾ ಇರಲಿಲ್ಲ. ಈಗ ಎಲ್ಲ ಉತ್ಪನ್ನಗಳ ಮೇಲೆ ಕನ್ನಡದಲ್ಲಿ ಬರೆಯುವ ಹಾಗೆ ಮಾಡಲಾಗಿದೆ. ಭಾರತೀಯ ಭಾಷಾ ಸಂಸ್ಥಾನ ಈ ಕೆಲಸ ಮಾಡಿದೆ (ಐಎಎಸ್ ಸಿ).

ಕನ್ನಡದಲ್ಲಿ ಬರೆದ ಲಿಪಿಗೆ ಧ್ವನಿ ರೂಪ ಕೊಡುವ ವ್ಯವಸ್ಥೆಯೂ ನಮ್ಮಲ್ಲಿದೆ. ತಾಂತ್ರಿಕ ಸಾಧನೆಗಳಲ್ಲಿ ಕನ್ನಡವನ್ನು ಯಶಸ್ವಿಯಾಗಿ ಬಳಸುತ್ತಿದ್ದೇವೆ. ಹಲವು ವಿಷಯಗಳ ಬಗ್ಗೆ ಪದಕೋಶಗಳು ಬಂದಿವೆ .ಬ್ಯಾಂಕಿಂಗ್ ನಿಘಂಟು ಪ್ರಾಚಾರ್ಯ ಎಚ್ಚೆಸ್ಕೆ ಮತ್ತು ಸಮನ್ವಯ ಸಮಿತಿಯವರು ಹೊರತಂದರು. ಈಗ ದಿನನಿತ್ಯ ಬದುಕಲ್ಲಿ ಬೇಕಾದ ಎಲ್ಲಾ ಪೂರಕ ಸಾಮಗ್ರಿಗಳೂ ಕನ್ನಡದಲ್ಲಿ ಬರುತ್ತಿವೆ.

ಆಡಳಿತದಲ್ಲಿ ಅತಿ ಹೆಚ್ಚು ನೆಲದ ಭಾಷೆ ಬಳಸುತ್ತಿರುವುದು ಕರ್ನಾಟಕ. ಇಲ್ಲಿ ಕನ್ನಡ ಹೋರಾಟ, ಚಳವಳಿಗಾರರಿಂದ ಜಾಗೃತಿ ಮೂಡಿದೆ. ಪಾಟೀಲ ಪುಟ್ಟಪ್ಪನವರು ಕಾವಲು ಸಮಿತಿ ಅಧ್ಯಕ್ಷರಾಗಿದ್ದಾಗ ಆಡಳಿತದಲ್ಲಿ ಕನ್ನಡ ತರಲು ಶ್ರಮಿಸಿದ ಫಲ ಇದು. ಕನ್ನಡವನ್ನು ವ್ಯವಹಾರದಲ್ಲಿ ಬಳಸದೆ ಹೃದಯದಲ್ಲಿದೆ ಎಂದರೆ ಸಾಲದು. ಇತಿಹಾಸದ ಪುಟ ತೆರೆದು ನೋಡಿದರೆ ಒಂದು ಸಾವಿರ ವರ್ಷಗಳ ಕಾಲ ವೈಭವದಿಂದ ಆಳಿದ ರಾಜವಂಶಗಳು ಎಲ್ಲಾದರೂ ಇದ್ದರೆ ಅದು ಕರ್ನಾಟಕದಲ್ಲಿ ಮಾತ್ರ. ಮಯೂರವರ್ಮನಿಂದ ಆರಂಭವಾಗಿ ಕೃಷ್ಣದೇವರಾಯನ ಕಾಲದವರೆಗಿನ ನಮ್ಮ ಚರಿತ್ರೆ ಕೇವಲ ದಾಖಲೆ ಅಲ್ಲ.

ಕನ್ನಡ ಅಂದರೆ ಈ ನೆಲದ ಆಹಾರ ಉಡುಗೆ ತೊಡುಗೆಯೂ ಹೌದು. ಪದ್ಮಶ್ರೀ ರಾಗಿ ಲಕ್ಷ್ಮಣಯ್ಯ ಎಂಬವರು ರಾಗಿಯ 14 ಬಗೆಯ ತಳಿಗಳನ್ನು ಸಂಶೋಧಿಸಿದ್ದಾರೆ. ಅತ್ಯಂತ ಉತ್ಕೃಷ್ಟ ಜೈವಿಕ ಮೌಲ್ಯ ಪಡೆದಿರುವ ಆಹಾರಧಾನ್ಯ ರಾಗಿ. ರಾಗಿ ತಿಂದವ ನಿರೋಗಿ ಎಂಬ ಮಾತಿದೆ.

ಕರ್ನಾಟಕ ಚಿನ್ನದ ನಾಡು ಕೋಲಾರದಲ್ಲಿ ಅತ್ಯಂತ ಮತ್ತು ಉತ್ಕೃಷ್ಟವಾದ ಚಿನ್ನ ಸಿಗುತ್ತಿತ್ತು, ಹಟ್ಟಿಯಲ್ಲಿಯೂ ಸಿಗುತ್ತಿದೆ. ಗದಗದ ಕಪ್ಪತಗುಡ್ಡ ಪ್ರದೇಶದಲ್ಲಿಯೂ ಇದೆ. ಹೀಗೆ ಕರ್ನಾಟಕದ 68 ಪ್ರದೇಶಗಳಲ್ಲಿ ಚಿನ್ನದ ಖನಿ ಇದೆ ಎಂದು ಇತ್ತೀಚೆಗೆ ಭೂವಿಜ್ಞಾನಿಗಳು ಹೇಳಿದ್ದಾರೆ. ಹೀಗೆ ಕರ್ನಾಟಕ ಅಚ್ಚರಿಯ, ವಿಸ್ಮಯದ ಅದ್ಭುತ ನೆಲೆ. ಹಳೇಬೀಡು, ಬೇಲೂರು ಕುಸುರಿ ಶಿಲ್ಪಕಲೆಗೆ ಖ್ಯಾತಿಯಾಗಿದೆ. ಜಗತ್ತಿನಲ್ಲಿ ಅತ್ಯಂತ ಸುಂದರವಾದ ಶಿಲ್ಪಕಲೆ ಬಾದಾಮಿ. ಐಹೊಳೆ, ಪಟ್ಟದಕಲ್ಲು, ಹಂಪೆ ಗಳಲ್ಲಿದೆ. ಇಲ್ಲಿ ಕುಸುರಿ ಮತ್ತು ದೊಡ್ಡ ಪ್ರಮಾಣದ ಶಿಲ್ಪಗಳು ಇವೆ. ಹಂಪೆಯಲ್ಲಿ ಕಲ್ಲಿನಲ್ಲಿ ಸಂಗೀತ ನುಡಿಸುವ ಕಂಬಗಳೂ ಇವೆ.

ನಿಗದಿತ ಸಮಯ ಮೀರುತ್ತಿದ್ದ ಕಾರಣ, ಶ್ರೀ ರಾಜಕುಮಾರ ಅವರು ತಮ್ಮ ಉಪನ್ಯಾಸ ಮೊಟಕುಗೊಳಿಸಿ ಸಂವಾದಕ್ಕೆ ಅನುವು ಮಾಡಿಕೊಟ್ಟು, ಕೇಳುಗರ ಪ್ರಶ್ನೆಗಳಿಗೆ ಉತ್ತರಿಸಿದರು.

ಕನ್ನಡಿಗರು ನಿರಭಿಮಾನಿಗಳು. ಕರ್ನಾಟಕದಲ್ಲಿ ಸುರಕ್ಷಿತತೆ ಇದೆ, ಸಮೃದ್ಧಿ ಇದೆ, ಎಲ್ಲ ಸವಲತ್ತುಗಳೂ ಇವೆ. ತಲಾದಾಯ ಉತ್ತಮವಾಗಿದೆ. ಹಿಂದೆ ಆಳಿದ ರಾಜವಂಶಗಳು ನಾಡು ಹಾಗೂ ಪ್ರಜೆಗಳನ್ನು ಚೆನ್ನಾಗಿ ನೋಡಿಕೊಂಡಿದ್ದಾರೆ. ಹೀಗಾಗಿ ನಮ್ಮವರು ಹೆಚ್ಚು ಕೂಲಿ ಬೇಡುತ್ತಾರೆ. ಆದ್ದರಿಂದ ಹೊರಗಿನವರು ಬರುತ್ತಿದ್ದಾರೆ. ಹೊರಗಿನಿಂದ ಬರುವವರಿಗೆ ಕನ್ನಡ ಕಲಿಸುವ ಕಾರ್ಯ ಆಗಬೇಕು. ಹೊರಗಿನವರು ಬಂದು ಶಾಶ್ವತವಾಗಿ ಇಲ್ಲೇ ಇದ್ದರೂ ಕನ್ನಡದಲ್ಲಿ ಮಾತಾಡುವುದಿಲ್ಲ. ಕಾರಣ ನಮ್ಮವರು ಅವರಿಗೆ ಕಲಿಸುವುದಿಲ್ಲ. ಕನ್ನಡ ಬೋಧಿಸುವವರಿಗೇ ಸರಿಯಾಗಿ ಕನ್ನಡ ಬರುವುದಿಲ್ಲ. ಮಕ್ಕಳಿಗೆ ಕನ್ನಡ ಕಷ್ಟ ಎನ್ನುವುದು ಪ್ರತಿಷ್ಠೆಯ ವಿಷಯ ಎಂಬಂತೆ ಹೆತ್ತವರು ಹೇಳುವುದೂ ಇದೆ. ಜನನಿ ತಾನೇ ಮೊದಲ ಗುರುವು ಎನ್ನುತ್ತಾರೆ. ಮಕ್ಕಳಿಗೆ ತಾಯಿ ಕನ್ನಡ ಕಲಿಸಬೇಕು. ಬದಲಾಗಿ ಎಬಿಸಿಡಿ, ಮಮ್ಮಿ-ಡ್ಯಾಡಿ ಎಂದು ಹೇಳಿಕೊಡುತ್ತಾರೆ. ಜಗತ್ತಿನಲ್ಲಿ ಸಂಬಂಧ ಸೂಚಕ ಪದಗಳು ಕನ್ನಡದಲ್ಲಿ ಬಹಳಷ್ಟು ಇವೆ. ಅವನ್ನು ಬಳಸುವುದಿಲ್ಲ. ಹೀಗಾಗಿ ಔಆವ, ನಾದಿನಿ, ಷಡ್ಡ ಇತ್ಯಾದಿ ಪದಗಳು ಮರೆಯಾಗುತ್ತಿವೆ. ದೋಸೆ ಹಿಟ್ಟಿಗೆ ದೋಸಾ ಅಂತ ಹಾಕ್ತಾರೆ, ಹುಳಿ, ಸಾಂಬಾರ್ ಆಗಿದೆ ತಿಳಿಸಾರು, ರಸಂ ಆಗಿದೆ. ಹೀಗೆ ಕನ್ನಡದಲ್ಲಿ ವಿಫುಲವಾದ ಪದ ಸಂಪತ್ತಿದ್ದರೂ ಅವುಗಳನ್ನು ಬಳಸದೆ ಮರೆಯಾಗುತ್ತಿವೆ. ಕನ್ನಡದ ಬಗ್ಗೆ ಎದೆತಟ್ಟಿ ಹೇಳಿ ಉತ್ಸಾಹ ತರಿಸುವ ಸಂಗತಿಯನ್ನು ಜನರಿಗೆ ತಿಳಿಸಬೇಕಾಗಿದೆ ಎಂದು ಹೇಳಿದರು.

ಒಟ್ಟಾರೆ ಶ್ರೀ ರಾಜಕುಮಾರ ಅವರ ಕನ್ನಡದ ಅರಿವು ಮತ್ತು ಅಭಿಮಾನದ ಬಗೆಗಿನ ಉಪನ್ಯಾಸ ಸಾಕಷ್ಟು ಉಪಯುಕ್ತ ಮಾಹಿತಿಗಳಿಂದ ತುಂಬಿತ್ತು.

ಕೊನೆಯಲ್ಲಿ ಶ್ರೀ ಗುರುರಾಜ ಶಾಸ್ತ್ರಿಯವರ ವಂದನಾರ್ಪಣೆಯೊಂದಿಗೆ ಸೆಪ್ಟೆಂಬರ್ 'ತಿಂಗಳ ಬೆಳಕು' ಮುಕ್ತಾಯವಾಯಿತು.

ಸಂಪೂರ್ಣ ಕಾರ್ಯಕ್ರಮವು ಸಮನ್ವಯ ಸಮಿತಿ ವೇದಿಕೆಯ ಯುಟ್ಯೂಬ್‌ನಲ್ಲಿ ವೀಕ್ಷಣೆಗೆ ಲಭ್ಯವಿದೆ.

***

ಕವಿಮನ

ಆಸರೆಯ ತೀರ

ಮಾಗಿ ಮುಂಜಾವಿನಲ್ಲಿ
ಉತ್ತರ ಬಿಹಾರದಲ್ಲಿ
ಮಧುಬನಿ ಎಂಬೂರಿನಲ್ಲಿ
ಜಗವು ಇನ್ನೂ ಮಲಗಿದೆ

ಭಯದ ನೆರಳು ಆಡುವಲ್ಲಿ
ಹೆಪ್ಪುಗಟ್ಟು ಮೌನದಲ್ಲಿ
ಇಬ್ಬನಿ ತೆರೆ ಸರಿಸಲೆಂದು
ಸೂರ್ಯಕಿರಣ ಹೆಣಗಿದೆ

ಕಸದ ಕುಪ್ಪೆ ರಾಶಿಯಲ್ಲಿ
ಅದೇ ತಾನೇ ಇಳೆಗೆ ಇಳಿದ
ಹಸುಳೆ ಹೆಣ್ಣು ಕೂಗಿದೆ
ಉಸಿರ ಹಿಡಿದು ಅಳುತಿದೆ

ಕರುಳು ಕಿತ್ತ ಅಮ್ಮನೆಲ್ಲೊ
ಹೊತ್ತು ಹಡೆದ ಭಾವವೆಲ್ಲೊ
ದೇಹದಾಸೆ ಕನಸುಗಳಲಿ
ವಿವೇಕ ನಾಶವಾಗಿದೆ

ಕ್ಷುದ್ರ, ಛಿದ್ರ ಮನಸಿನಲ್ಲಿ
ಬೆಳಕನೆಸೆದು, ಕತ್ತಲಲ್ಲಿ
ತಾಯಿತನವು ಒಡೆದಿದೆ
ಕಂದ ನಡುಗಿ ಮಲಗಿದೆ

ಮಧುರ ಭಾವ ಸ್ಪರ್ಶಕಾಗಿ
ಬೆಚ್ಚನೆಯ ಮಡಿಲಿಗಾಗಿ
ಅಳುತಳುತಲೆ ಕೂಗಿದೆ
ಕಂದ ಹಾಲನರಸಿದೆ

ದೂರದೂರಿನಿಂದ ಬಂದ
ದೊಡ್ಡ ಮನಸಿನಿಂದ ನಿಂದ
ಕೈಗಳೆರಡು ಚಾಚಿವೆ
ಮಗುವನಪ್ಪಿ ಹಿಡಿದಿವೆ

ತೊರೆದ ತಾಯ ಜಾಗ ತುಂಬಿ
ಭಾವನೆಗಳ ಭವಿಷ್ಯ ನಂಬಿ
ಆಸರೆಯದು ಹೊಮ್ಮಿದೆ
ಕೂಸು ಬದುಕಿ ಉಳಿದಿದೆ

ಒಂದು ಕುಡಿಯು ತನ್ನದಿರಲು
ಬೇರೊಂದೂ ತನ್ನದಾಗೆ
ಮನಸು ತೃಪ್ತಿ ಪಡೆದಿದೆ
ಮಗುವು ಎದೆಯನಪ್ಪಿದೆ

ಕತ್ತಲುಂಟು ಜಗದಿ ಬಹಳ
ಅಲ್ಲಿ, ಇಲ್ಲಿ ಹಣತೆ ವಿರಳ
ಮಂದಿ ಮನವು ಬೆಳಗಲಿ
ಸುಧರ್ಮ ಕಿರಣ ಹೆಚ್ಚಲಿ

– ಕೆ.ಆರ್.ಎಸ್. ಮೂರ್ತಿ

03.09.2025

ಕವಿಮನ

ಪಲಾಯನ

ಪಲಾಯನ ಪಲಾಯನ ಪಲಾಯನ
ಶ್ಯ.. ಕೂಗಬೇಡ ಸುಮ್ಮನಿರು
ಪಂಚೇಂದ್ರಿಯಗಳ ಪಲಾಯನ
ಇದೇ ಈ ಜಗದ ನಿತ್ಯನಿಯಮ

ಕಣ್ಣು ಮಂಜಾಯಿತೆಂದು ಕೊರಗೇ
ಕಂಡದ್ದೆಲ್ಲ ಕಂಡಾಯಿತಲ್ಲ
ಕಣ್ಣು ಮುಚ್ಚಿದ್ದರೂ ಉಂಡಾಯಿತಲ್ಲ
ಕಣ್ಣೊಳಗೆ ಕೃತಕ ಮಸೂರ ಕುಳಿತಾಯ್ತು
ಇಂದು ಮಾಡು ಶ್ರೀಹರಿಯ ಧ್ಯಾನ
ನಿನಗೆ ದೊರೆಯುವುದು ಸಮಾಧಾನ

ಕಿವಿ ಕೇಳದಿರದುವೆ ವರದಾನ
ಗೌಜುಗದ್ದಲಗಳಿಂದ ಜೋಪಾನ
ಬೇಡದಿಹ ಮಾತುಗಳು ಶೂನ್ಯ
ಆಡಬಾರದ ನುಡಿ ನಿರ್ನಾಮ
ನಿನ್ನ ಪ್ರಪಂಚದಲಿ ದಿವ್ಯಮೌನ
ಇದಲ್ಲವೇ ಪರಮ ಪಾವನ

ನಾಲಗೆಯ ಮಾತು ಅಸ್ಪಷ್ಟ
ಮರೆಯಾಗಿವೆ ಹಲ್ಲುಗಳುದುರಿ
ತಿನ್ನಲು ಬೇಕಾದಷ್ಟು ಇವೆಯಲ್ಲ
ಸಾಕು ಸಾಕು ಜಾಸ್ತಿ ಏಕೆ ಬೇಕು
ನೀ ಬದುಕು ಬಾಯ್ಚಪಲ ಬಿಟ್ಟು
ತಿನ್ನುವುದೇ ಬದುಕಲ್ಲ ಸತ್ಯ ತಿಳಿ

ಸ್ಪರ್ಶ ಮಾಯವೆನೆ ಬೇಸರವೇ
ಮಿಕ್ಕೆಲ್ಲದರ ಜೊತೆ ಹೋಗಲವು
ನನ್ನ ಕೈಯ್ಯೆಂದು ಅಕ್ಕರೆಯಿಲ್ಲ
ಕಾಲು ತುಳಿತ ತಿಳಿಯುವುದಿಲ್ಲ
ಇದೂ ಕೂಡ ವರವೇ ಮನುಜ
ದೇಹ ತ್ಯಜಿಸಲು ದಿನಗಳೆಣಿಸು

ಪ್ರಾಣವಾಯು ಕೊನೆಗುಳಿದಿದೆ
ಅಂಕೆಯಲ್ಲಿದೆ ಉಸಿರಿನ ರಾಟೆ
ಬಾಳನು ಬಗಲಲಿರಿಸಿಕೊಂಡಿದೆ
ಹೆಗಲ ಮೇಲೆ ಹೊತ್ತು ದಣಿದಿದೆ
ದಿನಗಳೆರಡು ತಡೆದೆಯಾದರೆ
ಬಾಳ ಪಯಣ ಅಂತ್ಯವಾಗಲಿದೆ

– ಜಿ.ವಿ. ನಿರ್ಮಲ
10.09.2025

ಕವಿಮನ

ಈ ಸಾವು ನ್ಯಾಯವೇ

ಸಾವಿಗೆ ಸಮಯವಿಲ್ಲ
ಜವರಾಯ ಬಂದಾಗ ಬಾಗಿಲಲಿ ನಿಂತಾಗ
ಆಗ ಬಾ ಈಗ ಬಾ ಎನ್ನಲಾದೀತೆ?

ಮಡದಿ ಮಕ್ಕಳ ಮೋಹದಲಿ
ಕಾರು ಬಂಗಲೆಗಳ ವೈಭೋಗದಲ್ಲಿ
ವರ್ಷಗಳು ದಿನಗಳಾದದ್ದೇ ತಿಳಿಯದು.
ಸಾಲ ವಸೂಲಿಗೆ ಬರುವ ಸಾಹುಕಾರನಂತೆ
ಪಾಪ-ಪುಣ್ಯಗಳ ಲೆಕ್ಕ ಬರೆದಿಟ್ಟ ಯಜಮಾನ
ಅಸಲು ಬಡ್ಡಿ ಸಮೇತ ವಸೂಲಿಗೆ ಬಂದೇಬಿಡುವ
ಸಾವಿಗೆ ಸಮಯವಿಲ್ಲ
ಕರುಣೆ ಮೊದಲೇ ಇಲ್ಲ.

ಭೂಮಿಗೆ ಬರುವುದಷ್ಟೇ ನಮ್ಮ ಭಾಗ್ಯ
ಕೊಡುವುದನ್ನು ಕೊಟ್ಟು, ಬಿಡುವುದನ್ನು ಬಿಟ್ಟು
ಹಗಲಿರಲಿ ಇರುಳಿರಲಿ ಅಳುತಿರಲಿ ನಗುತಿರಲಿ
ಕೊಳೆಯಾದ ಅಂಗಿ ಕಳಚಿಬಿಡುವಂತೆ
ನಿರ್ಗಮಿಸಬೇಕು ದಿಗಂಬರನಾಗಿ ಅನಂತದೆಡೆಗೆ
ಸಾವಿಗೆ ಸಮಯವಿಲ್ಲ,
ನ್ಯಾಯವು ಮೊದಲೇ ಇಲ್ಲ.

ಸಾವಿನರಮನೆಯ ಬಾಗಿಲು ತೆರೆದಾಗ
ಹೂವಿನ ಪಲ್ಲಕ್ಕಿಯಲ್ಲಿ ಮೆರವಣಿಗೆ
ಮುಚ್ಚಿದ ಕಣ್ಣೊಳಗೆ ಬಿಚ್ಚುವುದು
ಬದುಕಿನ ಬಚ್ಚಿಟ್ಟ ಚಿತ್ರಗಳೆಲ್ಲ
ಮೊಗ್ಗು, ಹೀಚು, ದೋರುಗಾಯಿಗಳನ್ನೆಲ್ಲ
ಕಿತ್ತೆಸೆಯುವ ಬಿರುಗಾಳಿ ಎಬ್ಬಿಸಿ
ಚಂಡಮಾರುತದಂತೆ ಕುಣಿದು ಕುಪ್ಪಳಿಸಿ
ವಿನೋದ ನೋಡುವ ಸಾವಿನ ಸರದಾರ
ನಿನಗೆ ಸವಾಲು ಹಾಕಿ ಗೆದ್ದವರ್ಯಾರು?
ಕಟ್ಟಿ ಹಾಕಿಕೊಂಡ ಎಲ್ಲ ಬಂಧನಗಳ ಕಳಚಿ
ಸಾವಿನ ತನಕವಷ್ಟೆ ಬದುಕೆಂಬ ಸತ್ಯದ
ಅರಿವಾಗುವ ಮುನ್ನವೇ ಮುಗಿಸಿ ಪಯಣ
ಹೇಳಲಾಗಲಿಲ್ಲ ಕೊನೆಗೂ ವಿದಾಯ

ಸಾವಿಗೆ ಸಮಯವಿಲ್ಲ
ಕರೆದಾಗ ಹೋಗಲು ಸಿದ್ಧರಾಗಿರಲೇಬೇಕು.

- ನಾಗರತ್ನ ಚಂದ್ರಶೇಖರ್
17.09.2025

ಕವಿಮನ

ಕೃಷ್ಣ ಜನ್ಮಾಷ್ಟಮಿ

ನಿರ್ದಯಿ ನಿಜ, ನಿನ್ನದು ಕಲ್ಲೆದೆಯೋ
ತಣ್ಣನೆಯ ನೆಲದ ಮೇಲೆ ಮಲಗಲು
ನವದಂಪತಿಗಳ ಕಾರಗೃಹ ಸೇರಿಸಿದೆ.
ವಸುದೇವ ದೇವಕಿಯರ ನರಳಿಸಿದೆ

ಮಧುಚಂದ್ರನ ಮಂದಹಾಸ ಸಿಗಲಿಲ್ಲ
ರಾಜ ವೈಭವದ ರಾತ್ರಿಯನು ಕಾಣಲಿಲ್ಲ
ಮದುವೆಯ ಸಂಭ್ರಮವ ನೋಡಲಿಲ್ಲ
ಅಣ್ಣನ ಅಕ್ಕರೆಯನನುಭವಿಸಲಿಲ್ಲ

ಆಕಾಶವಾಣಿಗೇನಿತ್ತು ಅರ್ಜೆಂಟು?
ಕೊಡಬಹುದಿತ್ತಾಮೇಲೆ ಕಂಸನಿಗೆ ವಾರಂಟು!
ಏಳು ಮಕ್ಕಳನುಳಿಸಿ ಬೆಳೆಸಬಹುದಿತ್ತು
ತಾಯ್ತನದ ಸಂತಸ ದೇವಕಿಗಾಗುತ್ತಿತ್ತು

ತಂದೆಯೊಡನೆ ನಲಿಯಬಹುದಿತ್ತು!
ತಾಯ ಪ್ರೀತಿಯನು ಸವಿಯಬಹುದಿತ್ತು!
ರಾಜಭೋಗದಿ ನೀನು ಮೆರೆಯಬಹುದಿತ್ತು!
ಸೋದರಪ್ರೇಮ ದೇವಕಿಗೆ ಸಿಗಬಹುದಿತ್ತು!

ಹೆತ್ತವಳ ಬಿಟ್ಟೆಗೋದೆಯ ಸೇರಿದೆ.
ನಂದಗೋಪನ ಮಗನಾಗಿ ಮೆರೆದೆ
ಕೊಂದದ್ದು ಮಾವನೆಂದಲ್ಲ ಕಂಸನ!
ಕೊಲ್ಲಲೆಂದೇ ಹುಟ್ಟಿದುದು ರಕ್ಕಸನ!

ಶ್ರಾವಣ ಬಹುಳಾಷ್ಟಮಿ ರೋಹಿಣಿಯಲಿ,
ಹುಟ್ಟಿದೆ ನೀನು ನಟ್ಟ ನಡುರಾತ್ರಿಯಲಿ!
ಅಷ್ಟಮಿಯ ತರಲಿಲ್ಲ ಜನ ದೂರಿನಲಿ!
ಮಾವಗಾಗದೆಂದರು ಹುಟ್ಟು ರೋಹಿಣಿಯಲಿ !

ಕೆಟ್ಟ ಹೆಸರ ತರುವೀ ಕೆಲಸ ನಿನಗೇಕೆ ಬೇಕಿತ್ತು ?
ಸೋದರಭಾವದಲೇಕೆ ಕಂಸನನು ಕೊಲ್ಲಬೇಕಿತ್ತು?
ಜಗದಲಿ ಹುಟ್ಟಿದ ಮಾವಂದಿರೆಲ್ಲ ಕೆಟ್ಟವರಲ್ಲ!
ರೋಹಿಣಿಯಲ್ಲಿ ಜನಿಸಿದವರೆಲ್ಲ ಕೃಷ್ಣರಲ್ಲ!

ಸತ್ಯ ಸಂಕಲ್ಪನು ನೀ, ತ್ರಿಕಾಲಗಳ ಹೊತ್ತವನು.
ಅಲ್ಪರು ನಾವು ನಿನ್ನ ಪ್ರಶ್ನಿಸಲು, ಚರ್ಚಿಸಲು.
ಸಂತಸದ ಸಂಭ್ರಮವೆಮಗೆ ನಿನ್ನ ಹುಟ್ಟುಹಬ್ಬಕೆ.
ಹರಸು ನಮ್ಮನ್ನು ಸಂತಸದ ನೆಮ್ಮದಿಯ ಬದುಕಿಗೆ

– ಡಾ ಸತ್ಯವತಿ ಮೂರ್ತಿ
24.09.2025

ಹೀಗೊಂದು ಪ್ರೇಮ ಕಥೆ

- ವಿಠ್ಠಲ. ಇಜೇರಿ

ಇದೊಂದು ಆಸಕ್ತಿಕರವಾದ ಪ್ರೇಮ ಕತೆ.

ಬ್ಲಾಂಡ್‌ಫೋರ್ಡ್ ಎಂಬ ಸೈನ್ಯಾಧಿಕಾರಿ ನ್ಯೂಯಾರ್ಕ್ ರೈಲು ನಿಲ್ದಾಣದ ಹೊರಗಿನ ನಾಲ್ಕನೇ ಗೇಟಿನ ಹೊರಗೆ, ಒಂದೂವರೆ ವರ್ಷದಿಂದ ತನ್ನ ಪತ್ರಮಿತ್ರಳಾದ ಹೊಲ್ಲಿಸ್ ಮೆಯ್ನೆಲ್‌ಗಾಗಿ ಕಾತುರದಿಂದ ಕಾಯುತ್ತಲಿದ್ದ. ಇನ್ನೇನು ಕೆಲವೇ ನಿಮಿಷಗಳಲ್ಲಿ ಆಕೆಯ ರೈಲು, ನಿಲ್ದಾಣಕ್ಕೆ ಬರಲಿದೆ. ಬ್ಲಾಂಡ್‌ಫೋರ್ಡ್ ನೆನಪು ಹದಿನೆಂಟು ತಿಂಗಳ ಹಿಂದೆ ಅಲ್ಲಿಯ ಗ್ರಂಥಾಲಯದಲ್ಲಿ ಹೊಲ್ಲಿಸ್ ಮೆಯ್ನೆಲ್ ಬರೆದ ಕಾದಂಬರಿ ಓದಿ, ಆ ಪುಸ್ತಕದಿಂದಲೇ ವಿಳಾಸ ಬರೆದುಕೊಂಡು ಆಕೆಗೆ ಮೆಚ್ಚುಗೆಯ ಪತ್ರ ಬರೆದಿದ್ದ. ಅನಂತರ ಸೈನ್ಯ ಸೇರಿ ದೂರದ ಪ್ರದೇಶಕ್ಕೆ ಹೋಗಿದ್ದರೂ ಆಕೆಯೊಡನೆ ಸಂಪರ್ಕ ಪತ್ರಮುಖೇನ ಇರಿಸಿಕೊಂಡಿದ್ದ. ಆಕೆಯೂ ಅವನಿಗೆ ಕೃತಜ್ಞತೆಯ ಮೊದಲ ಪತ್ರ ಬರೆದು ನಂತರದ ಪತ್ರಗಳಿಗೂ ಸಂದರ್ಭೋಚಿತ ಉತ್ತರ ಬರೆಯುತ್ತಿದ್ದಳು. ಒಂದುಸಲವಂತೂ ಬ್ಲಾಂಡ್‌ಫೋರ್ಡ್ ವೈರಿ ಸೈನಿಕರ ಮಧ್ಯೆ ಸಿಕ್ಕಿಹಾಕಿಕೊಂಡು ಇನ್ನು ಹೊಲ್ಲಿಸ್ ಕನಸು ಅಂದುಕೊಂಡಿದ್ದ, ಆದರೆ ಅದೃಷ್ಟವಶಾತ್ ಪಾರಾಗಿ ಬಂದು, "ತಾನು ಭಯಗೊಂಡ ಕುರಿತು ಪತ್ರ ಬರೆದಿದ್ದ. ಹೊಲ್ಲಿಸ್ ಅವನಿಗೆ ಚಂದದ ಪತ್ರ ಬರೆದು, "ನಿನಗೆ ಭಯವಾಗುವುದು ಸಹಜ. ಸೈನ್ಯದಲ್ಲಿ ಇದೆಲ್ಲ ಮಾಮೂಲು. ಆದರೆ ದಿಟ್ಟತನದಿಂದ ಪಾರಾಗಿ ಬಂದಿರುವೆಯಲ್ಲ, ಅದು ಮುಖ್ಯ, ನಿನ್ನ ಧೈರ್ಯ ಮೆಚ್ಚಿಕೊಂಡಿದ್ದೇನೆ" ಎಂದು ಬರೆದಿದ್ದಳು.

ದಿನಗಳೆದಂತೆ ಬ್ಲಾಂಡ್‌ಫೋರ್ಡನಿಗೆ ತಾನು ಹೊಲ್ಲಿಸ್ಳನ್ನು ಪ್ರೀತಿಸುತ್ತೇನೆ, ಆಕೆಗೂ ತನ್ನ ಬಗ್ಗೆ ಪ್ರೀತಿ ಇದೆ ಎಂಬ ಭಾವನೆ ಉಂಟಾಯಿತು. ಆಕೆಯ ಸುಂದರ ರೂಪವನ್ನು ಕಲ್ಪಿಸಿಕೊಂಡು, ಆಕೆಗೆ "ಒಂದು ಭಾವಚಿತ್ರ ಕಳುಹಿಸಿ" ಎಂದು ಪತ್ರ ಬರೆದ. ಆಕೆಯಿಂದ ಬಂದ ಪತ್ರ ಅಡ್ಡಗೋಡೆಯ ಮೇಲೆ ದೀಪ ಇರಿಸಿದಂತೆ ಇತ್ತು. ಆಕೆ ಬರೆದಿದ್ದಳು, "ನನ್ನ ಮೇಲೆ ನಿನಗಿರುವ ಪ್ರೀತಿ ಪರಿಶುದ್ಧವಾಗಿದ್ದರೆ ನನ್ನನ್ನು ನೋಡುವ ಅವಶ್ಯಕತೆಯೇ ಇಲ್ಲವೆಂದು ನನ್ನ ಭಾವನೆ. ನಾನು ಸುಂದರಿ ಎಂದು ನನ್ನನ್ನು ಇಷ್ಟಪಡುವಿ ಎಂದಾದರೆ ಅದು ನನಗೆ ನಿರಾಶೆ ಉಂಟುಮಾಡುವುದು. ನಾನು ಕುರೂಪಿ ಎಂದು ಪ್ರೀತಿಸುತ್ತಿದ್ದರೆ ಅದು ಇನ್ನೂ ಕಷ್ಟ, ನಿನಗಾರೂ ಗತಿಯಿಲ್ಲ ನನ್ನನ್ನು ಮೆಚ್ಚಿರುವೆ ಎಂಬ ಭಾವ ಬಂದೀತು. ಆದುದರಿಂದ ನಾನು ಭಾವಚಿತ್ರ ಕಳಿಸಲಾರೆ. ನೀನು ನಿನ್ನ ಮೊದಲ ನ್ಯೂಯಾರ್ಕ್ ಭೇಟಿಯಲ್ಲಿಯೇ ನನ್ನ ಬಾಹ್ಯ ಸೌಂದರ್ಯವನ್ನು ನೋಡು" ಎಂದು ಬರೆದಿದ್ದಳು.

ಇಂದು ಆ ಗಳಿಗೆ ಬಂದಿತ್ತು. ಆಕೆ, "ತಾನು ಬ್ಲೌಸ್‌ಗೆ ಒಂದು ಕೆಂಪು ಗುಲಾಬಿ ಹೂವು ಅಂಟಿಸಿಕೊಂಡು ಬರುವೆ, ನೀನೇ ನನ್ನನ್ನು ಬಂದು ಮಾತನಾಡಿಸು" ಎಂದು ಬರೆದಿದ್ದಳು. ಬ್ಲಾಂಡ್‌ಫೋರ್ಡ್ ಕಾತುರನಾಗಿ ರೈಲು ನಿಲ್ದಾಣದ ಬಾಗಿಲಿನತ್ತ ದೃಷ್ಟಿಯನ್ನು ನೆಟ್ಟಿದ್ದ. ರೈಲಿನಿಂದಿಳಿದು ಅಗಲವಾಗಿ ತೆರೆದ ಬಾಗಿಲುಗಳ ಮೂಲಕ ಜನರು ಬರುತ್ತಿದ್ದರು.

ಬ್ಲಾಂಡ್‌ಫೋರ್ಡ್ ಹೃದಯ ಬಡಿತ ಅವನಿಗೇ ಕೇಳುವಷ್ಟು ಜೋರಾಗಿತ್ತು. ಒಬ್ಬ ತೆಳ್ಳಗಿನ ಯುವತಿ, ಆಕರ್ಷಕ ವ್ಯಕ್ತಿತ್ವ, ಗುಂಗುರು ಕೂದಲು, ತುಂಬಿದ ಗಲ್ಲಗಳು, ಹಸಿರು ಆಕರ್ಷಕ ಉಡುಪು ಧರಿಸಿದಾಕೆ ಮುಗುಳು ನಗೆಯೊಡನೆ ಹೊರಬಂದಳು. ಬ್ಲಾಂಡ್‌ಫೋರ್ಡ್ ಉತ್ಸಾಹದಿಂದ ಆಕೆಯ ಎದುರು ಹೋದ. ಆಕೆಯನ್ನು ಸಮೀಪಿಸಿದಾಗ ಆಕೆ, "ಮಿಸ್ಟರ್, ನೀವು ನನ್ನ ದಾರಿಗೆ ಅಡ್ಡ ಬಂದಿದ್ದೀರಿ" ಅಂದಳು. ಕೂಡಲೇ ಸುಧಾರಿಸಿಕೊಂಡ. ಹೌದು, ಗುಲಾಬಿ ಇಲ್ಲ. ಬ್ಲಾಂಡ್‌ಫೋರ್ಡನ ಉತ್ಸಾಹ ಇಳಿದುಹೋಯಿತು, ಆಕೆಗೆ ದಾರಿ ಬಿಟ್ಟು ಮತ್ತೆ ಗೇಟಿನತ್ತ ಮುಖ ಮಾಡಿದ. ಹಿಂದೆಯೇ ಒಬ್ಬ ಸುಮಾರು ನಲವತ್ತು ವರ್ಷದ ತಲೆಯಲ್ಲಿ ಅಲ್ಲೊಂದು ಇಲ್ಲೊಂದು ಬಿಳಿ ಕೂದಲು ಇರುವ ಸ್ವಲ್ಪ ದಪ್ಪದ ಮೈಕಟ್ಟಿನ ಮಹಿಳೆ ಬಂದಳು. ಆಕೆಯ ಬ್ಲೌಸ್‌ನಲ್ಲಿ ಕೆಂಪು ಗುಲಾಬಿ ಹೂವು. ಬ್ಲಾಂಡ್‌ಫೋರ್ಡ್ ಕೊಂಚ ನಿರಾಶಾಭಾವದಲ್ಲಿ ಆಕೆಯ ಬಳಿ ತಲುಪಿ. "ನಾನು ಮಿಸ್ಟರ್ ಬ್ಲಾಂಡ್ ಫೋರ್ಡ್, ನಿಮಗೆ ಸ್ವಾಗತ, ನೀವು ಮಿಸ್ ಹೊಲ್ಲಿಸ್ ಮೆಯ್ನೆಲ್, ನಿಮ್ಮನ್ನು ಭೇಟಿಮಾಡಿದ್ದು ಸಂತೋಷ. ನಾವೀಗ ಊಟಕ್ಕೆ ಹೋಗೋಣ" ಅಂದ. ಆಕೆ, "ನಾನೀಗ ಗೊಂದಲದಲ್ಲಿ ಇರುವೆ, ಸ್ವಲ್ಪ ಸಮಯದ ಮುಂಚೆ ನೀವು ಅಡ್ಡಗಟ್ಟಿದ ಹಸಿರು ದಿರಿಸಿನ

ಯುವತಿ ನನ್ನ ಬ್ಲೌಸ್‌ಗೆ ಈ ಗುಲಾಬಿ ಸಿಕ್ಕಿಸಿ, ನೀವು ನನ್ನ ಹಿಂದೆ ಇರಿ. ಅಲ್ಲೊಬ್ಬರ ನೈತಿಕ ಪರೀಕ್ಷೆ ಇದೆ. ನೀವು ವಯಸ್ಕರು ಎಂದು ತಿಳಿದೂ ಅವರು ನಿಮಗೆ ಸ್ವಾಗತಕೋರಿ ಊಟಕ್ಕೆ ಆಹ್ವಾನವಿತ್ತರೆ, ಅವರು ಆ ಪರೀಕ್ಷೆಯಲ್ಲಿ ಪಾಸು. ನಾನು ಇಲ್ಲಿ ಎದುರಲ್ಲಿ ಇರುವ ಹೋಟೆಲ್ ಬಳಿ ಅವರಿಗಾಗಿ ಕಾಯುತ್ತಿರುವೆ ಎಂದು ತಿಳಿಸಿ ಈ ಗುಲಾಬಿ ಅವರ ಎದೆಗೆ ಸಿಲುಕಿಸಿ" ಎಂದು ಹೇಳಿದ್ದಾಳೆ, ನಾನು ಇಬ್ಬರು ಮಕ್ಕಳ ತಾಯಿ, ನೀವು ಕಾಯ್ದುಕೊಂಡಿರುವ ಯುವತಿ ನಾನಲ್ಲ" ಅನ್ನುತ್ತಾ ಕೆಂಪು ಗುಲಾಬಿಯನ್ನು ಅವನ ಎದೆಗೆ ಸಿಲುಕಿಸಿದಳು. ಬ್ಲಾಂಡ್‌ಫೋರ್ಡ್ ಕಣ್ಣಲ್ಲಿ ಮಿಂಚು ಕಾಣಿಸಿಕೊಂಡಿತು. ಆ ಮಹಿಳೆಗೆ ಧನ್ಯವಾದ ಹೇಳಿ ಹೋಟಲಿನತ್ತ ನಡೆದ.

ಅಮೆರಿಕನ್ ಕಥೆಗಾರ್ತಿ ಸಲಾಮಿತ್ ಇಶ್ಕಿಶೋರ್ ಬರೆದ "ಅಪಾಯಿಂಟಮೆಂಟ್ ವಿತ್ ಲವ್" ಆಸಕ್ತಿಕರವಾದ ಕತೆ ಎಂದು ಇಲ್ಲಿ ಪ್ರಸ್ತುತಪಡಿಸಿದೆ.

***

ಶಾಲೆಯ ಅಂಗಳದಲ್ಲಿ

– ಹಿಮನಾಥ

ಒಂದಾನೊಂದು ಕಾಲದಲ್ಲಿ
ಶಾಲೆಯ ಅಂಗಳದಲ್ಲಿ
ನೀ ಅತ್ತಿತ್ತ ಬರುತಿರಲು
ನಾ ಕತ್ತೆತ್ತಿ ನೋಡುತಿದ್ದೆ

ನೀಳ ನಿಲುವಿನಾ ಭಂಗಿ ನಿನ್ನದು
ಉದ್ದ ಜಡೆಯಾ ನರ್ತನವು
ಅತ್ತಿತ್ತ ಓಲಾಡುತಿರಲು
ನನ್ನ ಕತ್ತಿತ್ತತ್ತ ತಿರುಗುತಿತ್ತು

ಮುಖದಟ್ಟದಲಿ ಉದ್ದ ಬೊಟ್ಟು
ಕೊರಳಲಿ ಒಂದೆಳೆ ಹೇಮಮಾಲೆಯು
ಕಿವಿಯಲಿ ಝುಣಕುವ ಜುಮುಕಿಗಳು
ಮುಡಿಯಲೊಂದು ಕೆಂಪು ಗುಲಾಬಿಯು

ಕಣ್ಣು ಕಣ್ಣು ಕಲೆತಾಗಲೆಲ್ಲ
ನೀ ಕಿರುನಗೆಯ ಸೂಸುತ್ತಿದ್ದೆ
ಮನವೂ ತುಂಬಿ ಬರುತ್ತಿತ್ತು
ಹೃದಯವದುವೇ ಹಾಡುತ್ತಿತ್ತು

ಪಕ್ಕದ ಬೆಂಚಲಿ ಕೂರುತ್ತಿದ್ದೆ
ಸಕ್ಕರೆ ನುಡಿಯನಾಡುತ್ತಿದ್ದೆ
ಸಿಕ್ಕರೆ ನೀನು ಒಂಟಿಯಾಗಿ
ನಿನ್ನ ಕಿವಿಯ ಹಿಂಡುತಿದ್ದೆ

ಕದಪುಗಳು ಕೆಂಪಾಗುತ್ತಿತ್ತು
ಮರುನುಡಿಯು ಇಂಪಾಗುತಿತ್ತು
ನೀ ಕೀಟಲೆ ಮಾಡಿ ನಗುತ್ತಿದ್ದೆ
ನಿನ್ನಾಟದಿ ನಾನು ಬೀಗುತ್ತಿದ್ದೆ

ಶಾಲೆ ಮುಗಿಯಲು ಮರೆಯಾಗಿಬಿಟ್ಟೆ
ನೀನು ನನ್ನನು ಮರೆತುಬಿಟ್ಟೆ
ಕಾಲಚಕ್ರವು ಉರುಳಿಹೋಯಿತು
ದಾರಿ ನಮ್ಮದು ಬೇರೆಯಾಯಿತು

***



ನೀರೇ ತುತ್ತು – ನೀರೇ ಆಪತ್ತು

– ಸಿಂಧು ಹರಿತಸ್

ಅತ್ಯಾಳವೂ ಒಣಗಿತ್ತು ನೀರಿಲ್ಲದೆ ಧರಣಿ,
ಎಲ್ಲೆಲ್ಲೂ ಕಂಡಿತ್ತು ಕ್ಷಾಮದ ಸರಣಿ,
ಕೆಂಗಣ್ಣು ತೋರಿದ್ದಳು ಎಲ್ಲೆಡೆ ಅರುಣಿ,
ಕುಪಿತಗೊಂಡಿದ್ದ ನಮ್ಮಲ್ಲೇಕೋ ಆ ಧಣಿ.

ಒಣಗಿ ಗಡುಸಾಗಿತ್ತು ಗಿಡಮರಗಳ ಧ್ವನಿ,
ಮುಗಿಲಂಚಿಗೂ ಆವರಿಸಿತು ಪ್ರಾಣಿ-ಪಕ್ಷಿಗಳ ಕಂಬನಿ,
ಹವನವನೇ ಸಲ್ಲಿಸಿತು ಕಾಳ್ಗಿಚ್ಚಿನ ಅಗ್ನಿ,
ನಂತರ ಆವರಿಸಿತು ಆಗಸದಿ ಇಬ್ಬನಿ.

ಸೋತಿದ್ದ ನೆಲಕ್ಕೆ ಮುತ್ತಿಟ್ಟಳು ವಾರುಣಿ,
ಭೂಗರ್ಭದಿ ಟಿಸಿಲೊಡೆಯಿತು ಬಿತ್ತಿದ್ದ ಬೀಜಮಣಿ,
ಮತ್ತೊಮ್ಮೆ ಮೆರೆಯಿತು ಜೀವಸಂಕುಲದ ಗಣಿ,
ಸಂತಸದಿ ಚಿಲಿಪಿಲಿ ಹಾಡಿತು ಅರಗಿಣಿ.

ಸಂಭ್ರಮಕೆ ಒಕ್ಕರಿಸಿತು ಯಾವುದೋ ದೃಷ್ಟಿ,
ನಿಲ್ಲಲೇ ಇಲ್ಲ! ಸುತ್ತಮುತ್ತಲೂ ಅತಿವೃಷ್ಟಿ,
ನೀಡುವ ಬದಲು ಬೆಳವಣಿಗೆಗೆ ಪುಷ್ಟಿ,
ಕೊಚ್ಚಿ ಹೋದವೆಲ್ಲಾ ಭಗವಂತನ ಸೃಷ್ಟಿ.

ಬಿರುಗಾಳಿಗೆ ಸೋತು ಬಿದ್ದವು ಹೆಮ್ಮರ,
ಸಿಡಿಲಿಗೆ ಸಿಲುಕಿದವು ಮೂಕ ದನ-ಕರ,
ನೀರಲ್ಲಿ ಹರಿದು ಮನೆ ಹೊಕ್ಕವು ಮಕರ!
ಪ್ರಪಂಚವೇ ಆಗಿತ್ತು ಸಾವಿನ ಆಗರ.

ಎಲ್ಲಿಯವರೆಗೋ ತಿಳಿಯದು ಗ್ರಹಚಾರ,
ದೇವರಿಗೇಕೋ ಈ ಪರಿ ತಾತ್ಸಾರ,
ಅರಿಯದೇ ಹೋಗಿದೆ ಶಾಪದ ವಿವರ,
ಆಶಿಸುವೆ ಮತ್ತೆ ಚಿಗುರಲಿ ಜೀವಸಾಗರ.

***

ಬೇಸಿಗೆ ಮಳೆ

– ಸಿಂಧು ಹರಿತಸ್

ಬಣ – ಬಣ ಬಿಸಿಲು,
ಬೆಂಕಿಯ ಹೊನಲು,
ಮರೆಯಾದ ಮುಗಿಲು,
ದಣಿದಿದೆ ಒಡಲು.

ಮಜವಿಲ್ಲದ ರಜೆ,
ಮನೆಯಲ್ಲೇ ಸಜೆ,
ಆಡದೆಯೇ ಬೆವರು,
ಬೆಂಡಾದ ಚಿಣ್ಣರು.

ಬತ್ತಿ ಹೋದ ನದಿ ಕೆರೆ,
ನೀರಿಲ್ಲದ ಈ ಧರೆ,
ಪ್ರಾಣಿ-ಪಕ್ಷಿ ಬೆಂದಿರೆ,
ಜೀವಕಿಲ್ಲ ಆಸರೆ.

ಸೂರ್ಯನ ಕಿರಣ,
ಸಹಿಸಲು ಕಠಿಣ,
ಬೇಡುವೆ ವರುಣ,
ತೋರು ನೀ ಕರುಣಾ!

ಭೋರ್ಗರೆಯಿತು ಮಳೆ,
ಮಿಂದೆದ್ದಿತು ಇಳೆ,
ಅಲ್ಲಿ ನಿಲ್ಲದ ಪ್ರಹಾವ,
ಇಲ್ಲಿ ತೀರದ ದಾಹ.

ನೆಲದೊಳಗಿನ ಧಗೆ,
ಚಿಮ್ಮಿತು ಹೊರಗೆ,
ಬಿಸಿಲಿನ ಬೇಗೆ,
ಏರಿತು ಈ ಬಗೆ.

***

ಸುಬ್ಲಕ್ಷ್ಮಿಯ ಉಬ್ಬುಹಲ್ಲಿನ ಪುರಾಣ

– ಉಷಾರಾಣಿ ಟಿ.ಆರ್.

ನಮ್ ಸುಬ್ಲಕ್ಷ್ಮಿ ಪ್ರವಚನ ಶುರು ಮಾಡಿದಳು ಅಂದ್ರೆ ಒಂದು ನರಪಿಳ್ಳೆ ಕೂಡ ಅಲ್ಲಾಡುತ್ತಿರಲಿಲ್ಲ. ಅಂತಹ ವಾಗ್ಮಿ ಅವಳದು. 'ಮಹಾಪ್ರಾಣ ನಾಭಿಯಿಂದ ಬರಬೇಕು ಸುಬ್ಬಮ್ಮ' ಅಂತಾ ಅವಳ ಗುರುಗಳು ಹಿಂದೆಂದೋ ಅವಳಿಗೆ ಹೇಳಿದ್ದನ್ನು ಅವಳು ಚಾಚೂ ತಪ್ಪದೆ ಪಾಲಿಸುತ್ತಿದ್ದಳು. ನಾಭಿಯಿಂದ ಮಹಾಪ್ರಾಣಾಕ್ಷರಗಳು ರಭಸದಿಂದ ಹೊರಟು ಬಾಯಿಂದ ಹೊರ ಹೊಮ್ಮುವಾಗ ಅದು ಸುನಾಮಿಯಾಗಿರುತ್ತಿತ್ತು. ಅವಳ ಉಬ್ಬುಹಲ್ಲುಗಳು ಅಣೆಕಟ್ಟಿನಂತಿದ್ದರೂ ಹಲ್ಲುಗಳ ಸಂದಿಯಿಂದ ಭೋರ್ಗರೆದು ಎಂಜಲ ಹನಿಗಳು ಮುನ್ನುಗ್ಗುತ್ತಿದ್ದವು. ಪಾಪ ಅದು ಮ್ಯಾನುಫ್ಯಾಕ್ಚರಿಂಗ್ ಡಿಫೆಕ್ಟ್. ಕಾಲೇಜಿನಲ್ಲಿರುವಾಗ ಅವಳನ್ನು ತುರಿಯುವ ಮಣೆ, ಉಬ್ಬಮ್ಮ ಎಂದೆಲ್ಲಾ ಗೇಲಿ ಮಾಡುತ್ತಿದ್ದರು. ಕ್ಲಾಸಿನಲ್ಲಿ ಬಾಯ್ಮುಚ್ಕೊಂಡು ಕೂತ್ಕೊಳಿ ಅಂತಾ ಗುರುಗಳು ಆಜ್ಞೆ ಮಾಡಿದರೆ ಲೋಕದ ವ್ಯವಹಾರ ತಿಳಿದುಕೊಳ್ಳಲೆಂಬಂತೆ ಉದ್ದುದ್ದಕ್ಕೆ ಚಾಚಿಕೊಂಡಿದ್ದ ಹಲ್ಲುಗಳನ್ನು ತನ್ನ ಕೈಯ್ಯಲ್ಲಿ ಮುಚ್ಚಿಕೊಳ್ಳುತ್ತಿದ್ದಳು. ಪ್ರಯತ್ನಪೂರ್ವಕವಾಗಿ ಒಳದಬ್ಬಿದರೆ ಎಲ್ಲಿ ಕೆನ್ನೆಗಳಿಂದ ಹೊರಕ್ಕೆ ಚಾಚಿಕೊಳ್ಳುವವೋ ಅನ್ನುವಷ್ಟರ ಮಟ್ಟಿಗೆ ಅವಳದ್ದು ಉಬ್ಬು ಹಲ್ಲು.

ಅವಳಂತೂ ಮದುವೆ ಇಲ್ಲದೆ ನಿಂತುಬಿಟ್ಟಳು. ಕಾಲೇಜಿನಲ್ಲಿ ಸಂಸ್ಕೃತ ಕಲಿಸುತ್ತಿದ್ದಳು. ಸಂಜೆ ಮಠಗಳಲ್ಲಿ ಪ್ರವಚನ ಮಾಡುತ್ತಿದ್ದಳು. ಉಬ್ಬಲ್ಲು ಒಟ್ಟಿನಲ್ಲಿ ಅವಳ ಮದುವೆಗೂ ಅಡ್ಡಗಾಲು ಹಾಕಿದ್ದವು. 'ನಮ್ಮ ಸುಬ್ಬಮ್ಮ ಎಲ್ಲಾ ನಿನ್ನ ತಮ್ಮನನ್ನ ಹೋತುಕೊಂಡುಬಿಟ್ಟಿದಾಳೆ', ಅವಳ ತಂದೆಯವರು ಆಗಾಗ ಹೆಂಡತಿಯನ್ನು ಕೆಣಕುತ್ತಿದ್ದರು. ಅವಳ ಸೋದರಮಾವ ಸ್ವಲ್ಪ ದಂತವಕ್ರನಾದರೂ ಸುಬ್ಲಕ್ಷ್ಮಿಯಷ್ಟಲ್ಲ. ಅವಳ ಹಿತೈಷಿಗಳಲ್ಲೊಬ್ಬರು, "ಅಮ್ಮಾ, ನೀವ್ಯಾಕೆ ಹಲ್ಲಿನ ಡಾಕ್ಟರ್ ಬಳಿ ಹೋಗಿ ಈ ಉಬ್ಬಲ್ಲನ್ನು ಸರಿ ಮಾಡಿಸಿಕೊಳ್ಳಬಾರದು? ಈಗೆಲ್ಲಾ ಹೊಸ ಹೊಸ ತಂತ್ರಜ್ಞಾನಗಳಿವೆ. ಅದರಿಂದ ಎಂತೆಂಥಾ ದಂತವಕ್ರಗಳು ಸರಿಯಾಗಿವೆ, ಸುಂದರಿಯರಾಗಿ ಕಾಣಿಸುತ್ತಾರೆ." ಎನ್ನುವ ಬಿಟ್ಟಿ ಸಲಹೆಯನ್ನು ಅವಳ ಸೋದರಮಾವನ ಎದುರೇ ಇತ್ತು ಹೊರಡುವ ಮೊದಲು, "ಅಲ್ಲಾ ನಾನು ಹೇಳಿದೆ ಅಂತಾ ಯಾರ ಹತ್ತಿರಾನೂ ಹೇಳಬೇಡಿ. ಹಿ..ಹಿ..ಹಿ.." ಎಂದು ಹೇಳುವುದನ್ನೂ ಮರೆಯಲಿಲ್ಲ. 'ಬಿಡು ಸುಬ್ಬಮ್ಮ ಉಬ್ಬಲ್ಲು, ಮೆಳ್ಳಗಣ್ಣು ಅದೃಷ್ಟ. ಅದು ಅವನಿಗೇನು ಗೊತ್ತು' ಎಂದಿದ್ದರು ಅವಳ ಉಬ್ಬುಹಲ್ಲಿನ ಸೋದರಮಾವ. ಅವರ ಗಂಟೇನು ಖರ್ಚಾಗಬೇಕು? ಅವರಿಗೇನೋ ಹೆಂಡತಿ, ಮಕ್ಕಳು ಇದ್ದಳು. ಸಮಸ್ಯೆಯಾಗಿದ್ದು ಇವಳಿಗೆ ತಾನೇ? ತಾನೇಕೆ ದಂತವೈದ್ಯರ ಹತ್ತಿರ ಹೋಗಬಾರದು ಎನಿಸಿತು. ಯಾವುದಕ್ಕೂ ಅಪ್ಪನನ್ನು ಒಂದು ಮಾತು ಕೇಳುವುದೇ ಒಳಿತೆಂದುಕೊಂಡಳು. "ಅಯ್ಯಾ ಬಿಡು ಸುಬ್ಬಮ್ಮ, ಇಷ್ಟು ವರ್ಷಗಳೇ ಕಳೆದೆಯಂತೆ ಜೀವನದಲ್ಲಿ ಅರ್ಧ ಭಾಗ ಕಳೆದುಹೋಗಿದೆ. ಇನ್ಯಾಕೆ ಬೇಕು ನಿನಗೆ ಈ ನೋವು ಸಂಕಟ. ಇನ್ನೂ ಕೆಲವು ವರ್ಷಗಳಲ್ಲಿ ಅವೇ ಉದುರಿ ಹೋಗುತ್ತವೆ. ನಿನ್ನನ್ನು ಮದುವೆಯಾಗುವವನು ನಿನ್ನ ವಿದ್ವತ್ತಿಗೆ ಬೆಲೆ ಕೊಡುವವನಾಗಿರಬೇಕೆ ಹೊರತು ನಿನ್ನ ಹಲ್ಲಿಗಲ್ಲ" ಎಂದು ತಣ್ಣೀರೆರೆಚಿಬಿಟ್ಟರು.

ಅವಳು ಪ್ರವಚನ ಪ್ರಾರಂಭಿಸಿದಳೆಂದರೆ ಮುಂದಿನ ಸಾಲಿನಲ್ಲಿ ಕುಳಿತಿದ್ದವರೆಲ್ಲಾ ಒಬ್ಬೊಬ್ಬರಾಗಿ ಹಿಂದಿನ ಸಾಲಿಗೆ ಹೋಗುತ್ತಿದ್ದರು. ಅವಳ ಬಾಯಿಂದ ಸುರಿಯುತ್ತಿದ್ದ ಹನಿಗಳು ಪನ್ನೀರುದಾನಿಯಂತೆ ಮುಂದೆ ಕುಳಿತವರ ಮುಖಾರವಿಂದಕ್ಕೆ ಪ್ರೋಕ್ಷಣೆಯಾಗುತ್ತಿತ್ತು. ಆದರೂ ಅವಳ ಪ್ರವಚನ ಎಂದರೆ ಕೇಳಲು ಬಹಳ ಖುಷಿ. ಕೊಂಚ ಹಾಸ್ಯವನ್ನೂ ಲೇಪಿಸಿ ಸುಶ್ರಾವ್ಯವಾಗಿ ಹಾಡುತ್ತಾ ಕಥೆಗಳು, ದೃಷ್ಟಾಂತಗಳ ಮೂಲಕ ತಿಳಿ ಹೇಳುತ್ತಿದ್ದ ಪರಿ ಎಳೆಯರಿಂದ ಹಿಡಿದು ಪ್ರಾಯದವರು, ಪ್ರಾಯವಾದವರಿಗೂ ಇಷ್ಟವಾಗುತ್ತಿತ್ತು. ಆದರೂ ಅವಳ ಮನಸ್ಸಿನ ಮೂಲೆಯಲ್ಲಿ ಈ ಉಬ್ಬುಹಲ್ಲಿಗೆ ಏನಾದರೂ ವ್ಯವಸ್ಥೆ ಮಾಡಿಕೊಳ್ಳಲೇಬೇಕೆಂಬ ಚಿಂತೆ ಕೊರೆಯುತ್ತಲೇ ಇತ್ತು. ದೊಡ್ಡ ಗುರುಗಳ ಮುಂದೆ ತನ್ನ ಮನದ ಇಂಗಿತವನ್ನು ತೋಡಿಕೊಂಡಳು. "ಅಮ್ಮಾ, ನಮ್ಮ ವಿನಾಯಕ ದಂತವಕ್ರನಲ್ಲವೇ? ಅವನಿಗೆ ಮೊದಲ ಪೂಜೆ ಅಲ್ಲವೇ? ಅದರ ಬಗ್ಗೆ ಯಾಕೆ ತಲೆ ಕೆಡಿಸಿಕೊಳ್ತೀಯ. ನಿನ್ನ ವಿದ್ವತ್ತಿನ ಮುಂದೆ ಅದೇನು ಮಹಾ? ಆದರೂ ನಿನ್ನ ಮನಸ್ಸಿಗೆ ಸರಿ ಎನಿಸಿದರೆ ನೀನು ದಂತವೈದ್ಯರನ್ನು ಕಂಡು ಬಾ ತಾಯಿ. ಶುಭವಾಗಲಿ" ಎಂದು ಒಂದಿಷ್ಟು ಪ್ರೋತ್ಸಾಹಕ ನುಡಿಗಳನ್ನು ಹೇಳಿದಾಗ ಸುಬ್ಬುಲಕ್ಷ್ಮಿಗೆ

ಎಷ್ಟೋ ಮನಸ್ಸು ಹಗುರವಾಯಿತು. ಅಡಿಯ ಮುಂದಿಡೆ ಸ್ವರ್ಗ ಎನ್ನುವಂತೆ ಅವಳು ದಂತ ವೈದ್ಯರ ಬಳಿ ದಿಗ್ವಿಜಯವಂಗೈದಳು.

ಅವಳನ್ನು ಸಂಪೂರ್ಣವಾಗಿ ಪರೀಕ್ಷಿಸಿದ ವೈದ್ಯರು, "ಚಿಕ್ಕ ವಯಸ್ಸಿನಲ್ಲಾದರೆ ವಸಡನ್ನು ಹಿಂದಕ್ಕೆ ತಳ್ಳಬಹುದಿತ್ತು. ಈಗ ಸ್ವಲ್ಪ ಕಷ್ಟವಾದರೂ ಒಮ್ಮೆ ಪ್ರಯತ್ನಿಸೋಣ" ಎಂದು ಕೆಲವು ತಿಂಗಳು ವಸಡು ಹಿಂದೆ ತಳ್ಳುವ ಕ್ಲಿಪ್ಪು ಅಳವಡಿಸಿದರು. ಇದರಿಂದ ಸುಬ್ಬಲಕ್ಷ್ಮಿಗೆ ಚಕ್ಕುಲಿ, ಕೋಡುಬಳೆ ಒಂದೆಟ್ಟಿಗಿರಲಿ ಅಕ್ಕಿ, ರಾಗಿ ರೊಟ್ಟಿ ಯಾವುದನ್ನೂ ತಿನ್ನಲು ಸಾಧ್ಯವಾಗುತ್ತಿರಲಿಲ್ಲ. ದಂತವೈದ್ಯರಿಗೆ ತನ್ನ ಕಷ್ಟವನ್ನು ತೋಡಿಕೊಂಡಳು. ಸರ್ವ ಪ್ರಯತ್ನವೂ ಯಶಸ್ವಿಯಾಗದೇ ಇರುವಾಗ ಮುಂದೆ ಮನೆಯ ಚಜ್ಜಾದಂತೆ ಚಾಚಿಕೊಂಡಿದ್ದ ನಾಲ್ಕು ಹಲ್ಲುಗಳನ್ನು ತೆಗೆದು ಅದರ ಬದಲಿಗೆ ನಕಲಿ ಹಲ್ಲುಗಳ ಸೆಟ್ ಕೊಡುವುದಾಗಿ ತೀರ್ಮಾನಿಸಲಾಯಿತು. ಸುಬ್ಬಲಕ್ಷ್ಮಿ ಕಾಲೇಜಿಗೆ ರಜೆ ಬರುವುದನ್ನೇ ಕಾದಿದ್ದು ನಂತರ ಈ ಪ್ರಯತ್ನಕ್ಕೆ ತನ್ನ ಬಾಯನ್ನು ಕೊಟ್ಟಳು. ಸ್ವಲ್ಪ ದಿನ ಪ್ರವಚನಕ್ಕೂ ವಿರಾಮ ಘೋಷಿಸಿಬಿಟ್ಟಳು. ರಾಮನವಮಿ ದಿನ ಸ್ವಾಮೀಜಿಗಳು ಖುದ್ದಾಗಿ ಅವಳಿಗೆ ಹೇಳಿ ಕಳಿಸಿದ್ದರು. ಶ್ರೀರಾಮನ ಪಟ್ಟಾಭಿಷೇಕದ ವರ್ಣನೆಯಂತೂ ಅವಳ ಬಾಯಲ್ಲಿ ಕೇಳಬೇಕು. ಸಾಕ್ಷಾತ್ ಶ್ರೀರಾಮನೇ ತನ್ನ ಒಡ್ಡೋಲಗದಲ್ಲಿ ನಮ್ಮನ್ನು ಆಹ್ವಾನಿಸಿದ್ದಾನೇನೋ ಎನ್ನುವಂತೆ ಭಾಸವಾಗುತ್ತಿತ್ತು. ತನ್ನ ಹೊಸ ರೂಪಿನೊಂದಿಗೆ ಭಕ್ತಾದಿಗಳ ಮುಂದೆ ಸುಬ್ಬಲಕ್ಷ್ಮಿ ಜರತಾರಿ ಶಾಲನ್ನು ಹೊದ್ದುಕೊಂಡು ಬಂದು ಕುಳಿತರೆ ಯಾರಿಗೂ ಅವಳ ಪರಿಚಯವೇ ಹತ್ತಲಿಲ್ಲ. ಮುಂದೆ ಚಾಚಿಕೊಂಡಿದ್ದ ದಂತಗಳು ಮಾಯಾವಾಗಿವೆ ಅದರ ಜಾಗದಲ್ಲಿ ಒತ್ತಾಗಿ ಜೋಡಿಸಿರುವ ಸುಂದರವಾದ ದಂತ ಪಂಕ್ತಿಗಳು ಕಾಣಿಸುತ್ತಿವೆ. ಪರವಾಗಿಲ್ಲ ಸುಬ್ಬಲಕ್ಷ್ಮಿನೂ ಅಲ್ಪ ಪ್ರಮಾಣದ ಸುಂದರಿಯೆ ಎನ್ನುವಂತೆ ಅವಳ ಮುಖಭಾವವಿತ್ತು. ನಕ್ಕರೆ ದಾಳಿಂಬೆಯಂತಹ ದಂತ ಪಂಕ್ತಿಗಳು. "ನಿಮಗೆ ಹತ್ತು ವರ್ಷ ಕಡಿಮೆಯಾದಂತೆ ಅನಿಸುತ್ತಿದೆ. ಬಹಳ ಚೆನ್ನಾಗಿದೆ. ಒಳ್ಳೆಯ ಕೆಲಸ ಮಾಡಿದಿರಿ" ಎಂದು ಭಕ್ತಾದಿಗಳಳೊಬ್ಬರು ಮೆಚ್ಚುಗೆಯನ್ನು ಸೂಚಿಸಿದರು.

ಬಹುಜನಗಳ ಒತ್ತಾಯದ ಮೇರೆಗೆ ಶ್ರೀರಾಮನ ಪಟ್ಟಾಭಿಷೇಕವನ್ನು ಪ್ರಾರಂಭಿಸಿದರೆ ಭಕ್ತಾದಿಗಳಿಂದ ಪ್ರಚಂಡ ಕರತಾಡನ. ಏನು ಆ ವೈಭವದ ವರ್ಣನೆ? ಎಲ್ಲವೂ ಮುಗಿದು ಶ್ರೀರಾಮಚಂದ್ರ ಕಪಿಸೇನೆಯನ್ನು ಬೀಳ್ಕೊಡುವ ಸಮಾರಂಭವನ್ನು ಸ್ವಲ್ಪ ಕಲ್ಪನೆಯ ಲೇಪ ಹಚ್ಚಿ ಸುಬ್ಬಲಕ್ಷ್ಮಿ ಅದಕ್ಕೊಂದಿಷ್ಟು ಹಾಸ್ಯವನ್ನೂ ಬೆರೆಸಿ ಮನಸ್ಸು ಮರ್ಕಟ ಎಂದು ಆಧ್ಯಾತ್ಮದೆಡೆಗೆ ಭಕ್ತಾದಿಗಳನ್ನು ಒಯ್ಯುವ ಭರದಲ್ಲಿದ್ದಳು. ಶ್ರೀರಾಮ ಕಪಿಗಳಿಗೆ ಸಾಕಷ್ಟು ಬೆಳ್ಳಿ-ಸ್ವರ್ಣ ಬಿಲ್ಲೆಗಳು, ವಸ್ತ್ರಾಭೂಷಣಗಳು ತರಹೇವಾರಿ ತಿಂಡಿತೀರ್ಥಗಳು ಹಣ್ಣುಹಂಪಲುಗಳ ದೊಡ್ಡ ಹರಿವಾಣವನ್ನು ನೀಡುತ್ತಿದ್ದಾನೆ. ಕಪಿಗಳು ಒಂದರ ಮೇಲೊಂದು ಹಾರಿ, ಮತ್ತೊಂದನ್ನು ಮುಂದೆ ತಳ್ಳಿ ಬಂದು ಸ್ವೀಕರಿಸುತ್ತಿವೆ. ಶ್ರೀರಾಮ ಅವುಗಳನ್ನು ಆದರಿಸಿ ಉಪಚರಿಸಿ, ಪ್ರೀತಿಯ ಮಹಾಪೂರವನ್ನೇ ಸುರಿಸಿ ಬೀಳ್ಕೊಡುತ್ತಿದ್ದಾನೆ. ಇದನ್ನೆಲ್ಲಾ ನೋಡಿದ ಹನುಮಂತ ಹೀಗೇ ಬಿಟ್ಟರೆ ಕಪಿಗಳ ಉಪಟಳ ಜಾಸ್ತಿಯಾಗುವುದೆಂದು ಒಂದೊಂದನ್ನೇ ಎತ್ತಿ ಅವುಗಳ ಬಾಲವನ್ನು ಸುತ್ತಿ ಹೊರಹಾಕುತ್ತಿದ್ದಾನೆ. ಕೋಪದಿಂದ ಒಂದು ಕಪಿ ನೆಗೆದು ಹನುಮನ ಕೈಗಳನ್ನು ಭದ್ರವಾಗಿ ಹಿಡಿದುಬಿಟ್ಟಿದೆ. ಮತ್ತೊಂದು ಅವನ ತಲೆಯ ಮೇಲೆ ಕುಳಿತಿದೆ ಮಗದೊಂದು ಅವನ ಭುಜದ ಮೇಲೆ ಕುಳಿತಿದೆ, ಹೆಣ್ಣು ಕಪಿಯೊಂದು ನಾಚಿಕೊಂಡು ಹನುಮನ ಮುಖಕ್ಕೆ ಮುದ್ದಿಸುತ್ತಿದೆ ಎಂದಾಗ ಎಲ್ಲರೂ ನಗೆಗಡಲಿನಲ್ಲಿ ತೇಲಾಡುತ್ತಿದ್ದರು. ಸುಬ್ಬಲಕ್ಷ್ಮಿಗೂ ನಾಚಿಕೆಯಿಂದ ನಗು ಬಂದುಬಿಟ್ಟಿತು. ಮೈಮರೆತ ಅವಳು ನಗು ನಿಲ್ಲಿಸಿದರೂ ಭಕ್ತಾದಿಗಳೂ ಬಿದ್ದೂ ಬಿದ್ದೂ ನಗುತ್ತಲೇ ಇದ್ದಾರೆ. ಅರೆ! ಇದೇನು ಇಷ್ಟು ನಗು ಎಂದು ಗುರುಗಳೂ ಒಮ್ಮೆ ಸಭೆಯನ್ನು, ಮತ್ತೊಮ್ಮೆ ಸುಬ್ಬಲಕ್ಷ್ಮಿಯನ್ನು ನೋಡಿದರು. ಅವರಿಗೂ ನಗು ಬಂದುಬಿಟ್ಟಿತು. ಸುಬ್ಬಲಕ್ಷ್ಮಿಗೆ ಆಶ್ಚರ್ಯವಾಯಿತು ನಾಚಿಕೆಯಿಂದ ತಲೆ ತಗ್ಗಿಸುತ್ತಾಳೆ ನೋಡಿದರೆ ಅವಳ ಹಲ್ಲಿನ ಸೆಟ್ಟು ಜಾರಿ ತೊಡೆಯ ಮೇಲೆ ಬಿದ್ದುಹೋಗಿದೆ. ಉಬ್ಬುಲಕ್ಷ್ಮಿಯಾಗಿದ್ದ ಅವಳು ಬೊಚ್ಚುಬಾಯಿಲಕ್ಷ್ಮಿಯಂತೆ ಕಾಣುತ್ತಿದ್ದಾಳೆ. ಸುಬ್ಬಲಕ್ಷ್ಮಿ ನಗುವುದನ್ನು ನಿಲ್ಲಿಸಿ ಹಲ್ಲನ್ನು ಸಿಕ್ಕಿಸಿಕೊಂಡಳು. ತನ್ನ ಉಬ್ಬುಹಲ್ಲೇ ಎಷ್ಟೋ ಚೆನ್ನಾಗಿತ್ತು ನಾನೆಂತ ತಪ್ಪು ಮಾಡಿದೆ ಎನಿಸಿತು ಅವಳಿಗೆ.

***

ಸರಕಾರಿ ಸೀನ

– ಗೋಪಿನಾಥ್

ಇದೇನು ಹೆಸರು ಎನಿಸಬಹುದಲ್ಲ, ಇದು ಅವನು ಗಳಿಸಿಕೊಂಡಿರುವ ಹೆಸರು, ತಂದೆ ತಾಯಿಯಿಟ್ಟ ಹೆಸರು ಶ್ರೀನಿವಾಸ. ಸರಕಾರಿ ಸೀನ ಎಂಬ ಹೆಸರು ಗಳಿಸುವಲ್ಲಿ ಅವನ ಶ್ರಮವೆಷ್ಟು ಗೊತ್ತಾ, ಗೊತ್ತಿಲ್ಲವೆಂದರೆ ತಿಳಿದುಕೊಳ್ಳಿ. ಶ್ರೀನಿವಾಸ ಎಂಬ ದೇವರ ಹೆಸರಿಟ್ಟಿದ್ದರು ಹೆತ್ತವರೆ ಅವನನ್ನ ಶ್ರೀನಿವಾಸ ಎಂದು ಹುಟ್ಟಿದ ಮೊದಲ ದಿನದಿಂದ ಕರೆದಿಲ್ಲ. ಸೀನ ಎಂದು ತೊಟ್ಟಿಲಿನ ಮಗುವಿಗೆ ಮರುನಾಮಕರಣ ಮಾಡಿದ್ದರು!

ಬೆಳೆದು ದೊಡ್ಡವನಾದಾಗ ಆ ಶ್ರೀನಿವಾಸ ದೇವರ ಗುಣಗಳನ್ನೇ ಅಳವಡಿಸಿಕೊಂಡ.

ಅಂದರೆ ಶ್ರೀನಿವಾಸ ದೇವರಿಗೆ ಇಬ್ಬರು ಹೆಂಡತಿಯರು. ಆದರೆ ಸೀನಿಗೆ ಇಬ್ಬರು ಹುಡುಗಿಯರ ಕಾಟ. ಒಬ್ಬಳು ಪಕ್ಕದಮನೆ ಶ್ರಾವ್ಯ, ಇನ್ನೊಬ್ಬಳು ಸಾರಿಕಾ. ಇಬ್ಬರು ಚಂದದ ಹುಡುಗಿಯರು. ಇಬ್ಬರೂ ಸೀನಂಗೆ ಮರುಳಾಗಿದ್ದಾರೆ. ಯಾಕೆ ಗೊತ್ತಾ? ಸೀನ ಓದಿನಲ್ಲಿ ಹಿಂದೆ, ಮಾತಿನಲ್ಲಿ ಮುಂದೆ. ಇಬ್ಬರ ಅಪ್ಪಂದಿರಿಗೂ ಮನೆಕಟ್ಟುವುದಕ್ಕೆ ಎಲ್ಲ ಅಪ್ರೂವಲ್‌ಗಳನ್ನು ಅವನೇ ಮಾಡಿಸಿಕೊಟ್ಟಿದ್ದು. ಪ್ಲಾನ್ ಅಪ್ರೂವಲ್‌ನಿಂದ ಕರೆಂಟು, ನೀರು ಎಲ್ಲವನ್ನೂ ಅಪ್ರೂವಲ್ ಮಾಡಿಸಿಕೊಟ್ಟು ಹುಡುಗಿಯರ ಮನವನ್ನಷ್ಟೇ ಅಲ್ಲದೆ ಅವರ ಅಪ್ಪಂದಿರ ಮನಸ್ಸನ್ನೂ ಗೆದ್ದಿದ್ದ. ಹೀಗಾಗಿ ಅವರುಗಳ ಮನೆಗೆ ಎಂಟ್ರಿ ಸುಗಮವಾಗಿತ್ತು. ಅವನಿಗಿರುವ ಸರಕಾರಿ ಕಚೇರಿಗಳಲ್ಲಿನ Rapoಗೆ ಹೆಸರುವಾಸಿಯಾದ.

ಈಗ ಎಲ್ಲರಿಗೂ ತಿಳಿದಿರುವ ವಿಷಯ. ಸರಕಾರದಲ್ಲಿ ಏನಾದರೂ ಕೆಲಸ ಆಗಬೇಕಿದ್ದರೆ "ಸೀನನ್ನ ಹಿಡಿಯಿರಿ" ಎನ್ನುವ ಹಾಗಾಗಿದೆ. ಈಗವನ ಹೆಸರಲ್ಲಿ ಬದಲಾವಣೆಯಾಗಿದೆ. ಮೊದಲಿಗೆ ಸೀನ ಎಂದು ಕರೆಯುತ್ತಿದ್ದವರು ಈಗ "ಸರಕಾರಿ ಸೀನ" ಎನ್ನುತ್ತಾರೆ! ಸರಕಾರಿ ಸೀನ ದಿನೇದಿನೇ ಹೆಸರುವಾಸಿಯಾದ. ಈಗ ಮೊದಲಿದ್ದ ಕೆಲಸಕ್ಕೆ ನಾಮ ಹಾಕಿದ. ಅವನ ಅಂಗಡಿ ಮಾಲೀಕ ಹೀಗೆ ಹೇಳಿದ.. "ಶ್ರೀನಿವಾಸ ದೇವರ ಹೆಸರು ನಿನ್ನದು, ಆ ದೇವರ ಹಣೆಯ ಮೇಲಿನ ನಾಮ ನಿನಗೆ ಚೆನ್ನಾಗಿ ಕಾಣುತ್ತೆ. ನೀನು ನಾಮ ಹಾಕಲಾರೆ ಎಂದು ಭಾವಿಸಿದ್ದೆ. ಆದರೆ ಕೊನೆಗೂ ಆ ದೊಡ್ಡ ನಾಮ ಅಂಟಿಸಿಬಿಟ್ಟೆ. ನೀ ಬಿಟ್ಟು ಹೋದಮೇಲೆ ಅಂಗಡಿಗೆ ಬರುವವರಿಲ್ಲ" ಎಂದು ಅಲವತ್ತುಗೊಂಡ.

ಶ್ರಾವ್ಯ ಮತ್ತು ಸಾರಿಕಾ ಇಬ್ಬರ ಪೈಪೋಟಿಯಲ್ಲಿ ನಿಜವಾಗಿಯೂ ಸರಕಾರಿ ಸೀನ ನಲುಗಿಹೋಗಿದ್ದಾನೆ. ನನ್ನೇ ಪ್ರೀತಿ ಮಾಡೋದು ಎಂದು ಇಬ್ಬರ ಜಗಳ ಶ್ರೀನಿವಾಸ ದೇವರ ಹೆಂಡಿರನ್ನು ಮೀರಿಸುತ್ತಾರೆ. ಆ ದೇವ ಮದುವೆಯಾಗಿ ಪಾಡುಪಟ್ಟ, ಸರಕಾರಿ ಸೀನನೀಗ under training.

ಒಂದು ದಿನ ಸರಕಾರಿ ಸೀನನ ಮನೆಗೆ ಹೋದಾಗ ಮನೆ ಮುಂದೆ ಅವನದೇ ಕಟೌಟ್ ಕಂಡೆ. ಒಳಗೆ ಹೊಗಿ, ‘‘ಇದೇಕಯ್ಯ, ನಿನ್ನ Cutout ಹೊರಗಡೆ" ಕೇಳಿದೆ.

"ಏನು ಮಾಡಲಿ ಆ ದೇವರು ಇಬ್ಬರು ಹೆಂಡಿರ ಕಾಟ ತಳಾಲಾರದೆ ಮೂರ್ತಿಯಾಗಿ ಬಿಟ್ಟ. ನಾನು ಮೂರ್ತಿಯಾಗಲಾರೆ ಆದ್ದರಿಂದ ಕಟೌಟ್ ಮಾಡಿಸಿ ನಿಲ್ಲಿಸಿರುವೆ. ಜಗಳವಾಡಲು ಬರುವ ಇಬ್ಬರು ಹುಡುಗಿಯರು ಕಟೌಟ್ ನೋಡಿ ಸುಮ್ಮನೆ ಬಂದು ಪಕ್ಕದಲ್ಲಿ ನಿಲ್ಲುತ್ತಾರೆ!"

"ಬುದ್ದಿವಂತ ಕಣಯ್ಯ ನಿನಗೆ ಗುಡಿ ಕಟ್ಟಿಸುವ ಬದಲು ಇಬ್ಬರೊಂದಿಗೆ ಇರಲು ಮನೆ ಮಾಡಿಕೊಡಲು ಹೇಳಲೇ ನಿಮ್ಮಪ್ಪನಿಗೆ!"

***

ಪರಿಸರಕ್ಕೊಂದು ನವ್ಯ ಭಾಷೆ

–ಶೀಲಾ ಅರಕಲಗೂಡು

ಹೊಸತೊಂದು ಭಾಷೆಯನು ಕಲಿಯಬೇಕಿದೆ ನಾವು
ಪಿಸು ನುಡಿಯನೊಲವಿನಲಿ ನುಡಿಯುತ್ತ ನಿತ್ಯ
ಹಸುಗೂಸಿನಂತಿರುವ ಸಸ್ಯಗಳ ತಬ್ಬಿದರೆ
ರಸ ಸೃಷ್ಟಿಯಾಗುವುದು ಕೇಳು ಮನುಜ

ಅಕ್ಷರಕ್ಷರಕುಂಟು ಮೇರೆಯರಿಯದ ಭಾವ
ವೀಕ್ಷಣೆಗೆ ನಿಲುಕದಿಹ ಸೊಗಸಾದ ಭಾಷೆ
ಮಾಕ್ಷಿಕದ ಸವಿಯುಂಟು ವಿಶ್ವ ಮಾನ್ಯತೆಯುಂಟು
ನಕ್ಷೆ ಸಾರ್ಥಕತೆಗದು ಸತ್ಯ ಮನುಜ

ನಾವು ಹುಟ್ಟುವ ಮೊದಲು ಹುಟ್ಟಿರುವ ಭಾಷೆಯದು
ದೇವ ಭಾಷೆಯದಂತೆ ಭೂ ಮುಗಿಲ ಬಂಧ
ಸಾವಯವ ಕೃಷಿಯಲ್ಲಿ ಸಹಜತೆಯ ಬೆಳೆಯಲ್ಲಿ
ಜೀವ ತಳೆದಿದೆ ಹೊಳೆದು ನೋಡು ಮನುಜ

ಸತತ ಸಂಭಾಷಣೆಯ ಮಾಡುತ್ತಲಿರಬೇಕು
ಜೊತೆಗಿದ್ದು ಕೇಳುತಲಿ ಸುಖ ದುಃಖಗಳನು
ಖತಿ ಶಬ್ದ ಸೋಂಕಿಲ್ಲ ಬಿರು ಪದಗಳಲ್ಲಿಲ್ಲ
ಗತಿಯುಂಟು ಮೌನಕ್ಕು ಮಣಿಯೊ ಮನುಜ

ಪರಿಸರವ ಪೋಷಿಸುತ ಪರಿಭಾಷೆಯರಿಯುತ್ತ
ಹರನೊಲುಮೆ ಹಸಿರಿನಲಿ ಕಾಣುತ್ತ ನಲಿದು
ಪರಿಶುದ್ಧವಾಗಿಸಿರೆ ಸುತ್ತಲಿನ ಪರಿಸರವ
ವರವದುವೆ ಜಗಕೆಂದು ತಿಳಿಯೊ ಮನುಜ

***

ವಿಕಸಿತ ಭಾರತ

–ಶೀಲಾ ಅರಕಲಗೂಡು

ವಿಶ್ವ ಮುಕುಟವು ಲೋಕ ವಂದಿತ
ನಮ್ಮ ಹೆಮ್ಮೆಯ ಭಾರತ
ಬನ್ನಿರೆಲ್ಲರು ಸೇರಿ ದುಡಿಯುವ
ಬೆಳಗುತಿರಲದು ಸಂತತ

ಗಗನದೆತ್ತರಕೇರಿ ಸಾಗುವ
ಕನಸು ಮೂಡಲಿ ಮನದಲಿ
ಬೀಜ ಮೊಳೆಯಲಿ ಹಸಿರು ಚಿಗುರಲಿ
ನನಸು ರಿಂಗಣದಿಂದಲಿ

ಭರತ ಭೂಮಿಯ ಚರಿತೆ ಹಳೆಯದು
ಸಾರವಡಗಿದೆ ಬೇರಲಿ
ಜನರ ಬಾಳಲಿ ತುಂಬಿ ಹರಿದಿದೆ
ಅರಸು ಚೇತನ ನಿನ್ನಲಿ

ಪುಣ್ಯ ನದಿಗಳು ದೇವ ಗಿರಿಗಳು
ಹಸಿರು ಕಾನನವೆಲ್ಲೆಡೆ
ಪ್ರಾಣಿ ಸಂಕುಲ ಜೀವ ಜಲಚರ
ಲೋಕ ತಿರುಗಿದೆ ನಮ್ಮೆಡೆ

ಮನುಜರೆಲ್ಲರು ಒಂದೆ ಎನ್ನುತ
ಪ್ರೇಮ ಗಾನವ ಪಾಡುವ
ಜಾತಿ ಮತಗಳ ಮೀರಿ ಬೆಳೆಯುವ
ಮಾನವತೆಯನು ಮೆರೆಯುವ

ನಾಡು ನುಡಿಗಳು ಹಬ್ಬ ಹರಿದಿನ
ನಮ್ಮ ಬೆಸೆಯಲಿ ಹರುಷದಿ
ವಿವಿಧ ಸಂಸ್ಕೃತಿ ಭಾಷೆ ಪರಿಸರ
ತರಲಿ ಬಾಳಿಗೆ ನೆಮ್ಮದಿ

***

ಶಿಕ್ಷಕ ಮತ್ತು ಶಿಕ್ಷಣ – ಮಕ್ಕಳ ಭವಿಷ್ಯಕ್ಕೆ ಹೂರಣ

– ಮಾನಸ ಕೆ.ಕೆ.

ಇಂದಿನ ಮಕ್ಕಳೇ ನಾಳಿನ ಪ್ರಜೆಗಳು ಎನ್ನುವ ವಾಡಿಕೆ ಉಂಟು. ಮಕ್ಕಳ ಭವಿಷ್ಯಕ್ಕೆ ಹೆಚ್ಚು ಮಹತ್ವ ನೀಡಬೇಕಿದೆ. ಇತ್ತೀಚೆಗೆ ನಾವು ಗಮನಿಸಿದಂತೆ ಶಾಲಾ ಕಾಲೇಜುಗಳಲ್ಲಿ ಮಕ್ಕಳ ವರ್ತನೆ ವಿಚಿತ್ರ ಮತ್ತು ವಿಭಿನ್ನವಾಗಿರುತ್ತದೆ. ಕಾರಣ ಏನೇ ಇರಲಿ ಕಾಲ ಬದಲಾಗಿದೆ ಅನ್ನುವುದು ಒಮ್ಮೊಮ್ಮೆ ಸತ್ಯ ಅನಿಸುತ್ತದೆ.

ಅದು ಹಾಗೆ, ಹೀಗೆ, ಅಂದರೆ ಮುಂದೊಂದು ದಿನ ನಮ್ಮ ಬದುಕು ನಮಗೆ ಕಷ್ಟವಾಗುವ ಸಾಧ್ಯತೆ ಇರುತ್ತದೆ. ಹಿಂದೆ ಗುರು, ಶಿಷ್ಯರ ಸಂಬಂಧ ಚೆಂದವಿರುತ್ತಿತ್ತು. ಶಿಷ್ಯರು ಗುರುಗಳಿಗೆ ಗೌರವ ನೀಡುತ್ತಿದ್ದರು. ಈಗ ಸಾಕಷ್ಟು ಬದಲಾವಣೆಯನ್ನು ನಾವು ಕಾಣುತ್ತಿದ್ದೇವೆ, ಕೇಳುತ್ತಿದ್ದೇವೆ. ವ್ಯತ್ಯಾಸ ಅಜಗಜಾಂತರ ಎಂದರೆ ತಪ್ಪಾಗಲಾರದು. ಗುರುಕುಲದಲ್ಲಿ ಶ್ರದ್ಧೆ, ಭಕ್ತಿಯಿಂದ ಕಲಿಯುತ್ತಿದ್ದರು ಅಂದಿನ ಅಧ್ಯಯನವನ್ನು ಇಂದಿನ ಅಧ್ಯಯನಕ್ಕೆ ಹೋಲಿಕೆ ಮಾಡಲಾಗುವುದಿಲ್ಲ.

ಕಾಲಕ್ಕೆ ತಕ್ಕಂತೆ ಹೊಂದಿಕೊಂಡು ಹೋದರೂ ವಿದ್ಯಾಭ್ಯಾಸದ ಕಡೆ ಹೆಚ್ಚು ಗಮನ ಕೊಡಲೇಬೇಕು.

ಗುರು ಎಂದರೆ ಅದೊಂದು ಶಕ್ತಿ. ಗುರುವಿನ ಗುಲಾಮನಾಗುವತನಕ ದೊರೆಯದಣ್ಣ ಮುಕುತಿ ಎನ್ನುವ ದಾಸರ ಪದಗಳಂತೆ ಅದು ಸತ್ಯವೂ ಹೌದು. ವಿದ್ಯೆ ಎಷ್ಟು ಮುಖ್ಯ ಅನ್ನುವುದಕ್ಕಿಂತ ವಿದ್ಯಾರ್ಥಿಗಳ ಕಾಳಜಿ, ಆಸಕ್ತಿ, ಕಲಿಕೆ, ಶ್ರದ್ಧೆ ಇವುಗಳಿಂದ ಅವರ ಬದುಕಿನ ಹಾದಿಯೇ ಬದಲಾಗುವುದರಲ್ಲಿ ಸಂದೇಹವೇ ಇಲ್ಲ. ವಿದ್ಯೆ ಬದುಕಿಗೆ ದಾರಿದೀಪವೂ ಹೌದು. ವಿದ್ಯೇ ವಿನಯ ಭೂಷಣ, ಹೆಸರಿಗೆ ತಕ್ಕಂತೇ ವಿದ್ಯಾರ್ಥಿ ವಿದ್ಯೆ ಕಲಿತರೆ ವಿನಯವಂತರಾಗಿ ಬಾಳುವರು.

ಕಾಲ ಕಳೆದಂತೆ ವಿದ್ಯಾಭ್ಯಾಸದ ಪದ್ಧತಿ ಅಂತಹ ಬದಲಾವಣೆ ಕಂಡಿಲ್ಲ. ಆದರೆ, ಶಿಕ್ಷಕರ ಮತ್ತು ವಿದ್ಯಾರ್ಥಿಗಳ ನಡುವಿನ ಸಂಬಂಧ ಬಹುಮುಖ್ಯ. ಅದನ್ನು ಉಳಿಸಿಕೊಂಡು ಹೋಗುವಲ್ಲಿ ಪೋಷಕರ ಮತ್ತು ಶಿಕ್ಷಕರ ಪಾತ್ರ ಮುಖ್ಯವಾಗುತ್ತದೆ.

ಮುಂದಿನ ದಿನಗಳ ಅನಾಹುತ ತಪ್ಪಿಸುವಲ್ಲಿನ ಕಾರ್ಯಚಟುವಟಿಕೆಗೆ ಜವಾಬ್ದಾರಿ ನಮ್ಮೆಲ್ಲರ ಹೆಗಲಿಗೆ ಬಂದಿದೆ ಎಂದರೆ ತಪ್ಪಾಗಲಾರದು. ಅನಾಹುತ ಎಂದಾಕ್ಷಣ ಏನೋ ದುರಂತ, ಆತಂಕ ಅಲ್ಲವೇ ಅಲ್ಲ. ಸುಂದರ ಬದುಕನ್ನು ಕಟ್ಟಿಕೊಳ್ಳಲು ತೊಂದರೆ ಆಗುವ ಸಾಧ್ಯತೆ ಹೆಚ್ಚಿವೆ. ಹಾಗಾಗಿ ವಿದ್ಯಾರ್ಥಿಗಳು ತಮ್ಮ ಬದುಕಿನ ಹಾದಿಯನ್ನು ಶಿಕ್ಷಕರ ಮತ್ತು ಪೋಷಕರ ಸಹಾಯವನ್ನು ಪಡೆದು ಸಮಾಜಕ್ಕೆ ಒಳಿತು ಮಾಡುತ್ತಾ ಪ್ರತಿಷ್ಠಿತ ವ್ಯಕ್ತಿಗಿಂತ ಶಕ್ತಿಯಾಗಿ ನಿಲ್ಲುವುದು ಮುಖ್ಯವಾಗಿದೆ. ತಾಳ್ಮೆ, ಸಹನೆ, ಸಂಯಮದಿಂದ ನಡೆದುಕೊಂಡು ಸಾಗಬೇಕಿದೆ. ಇತ್ತೀಚೆಗೆ ಮಕ್ಕಳ ಐಕ್ಯೂ ಗಮನಿಸಿದರೆ ಒಂದನೇ ತರಗತಿಯ ಮಗುವಿನಲ್ಲಿ ಐದನೇ ತರಗತಿಗೆ ಬೇಕಾದ ಬುದ್ಧಿವಂತಿಕೆ ಇರುವುದನ್ನು ನಾವು ಕಾಣುತ್ತಿದ್ದೇವೆ.. ಆಗ ಐದನೇ ವರ್ಷಕ್ಕೆ ಶಾಲೆಗೆ ಸೇರಿಸಿದರೆ ಅ ಆ ಇ ಈ ಈ ಬರೆಯಲು ಬಹಳ ತಿಂಗಳು ಆಗುತಿತ್ತು ಅಂದರೂ, ಇನ್ನೂ ಚಿಕ್ಕ ಮಗು ಅನ್ನುತ್ತಿದ್ದರು ಈಗ 2ರಿಂದ 3 ವರ್ಷಕ್ಕೆ ಭಾಷೆಯ ಕಾಳಜಿ ಇರುವುದನ್ನು ನಾವು ಕಾಣುತ್ತಿದ್ದೇವೆ. ಎರಡನೆಯ ವರ್ಷಕ್ಕೇ ಶಾಲೆಗೆ ಸೇರಿಸುತ್ತಿದ್ದಾರೆ. ಮಕ್ಕಳು ಬೆಳೆಯಲು ಹೊರಗಿನ ವಾತಾವರಣ ಹೆಚ್ಚು ಸಿಗುತ್ತಿಲ್ಲ. ವಿದ್ಯೆಯ ಜೊತೆಜೊತೆಗೇ ಮುಂದಿನ ಜೀವನಕ್ಕೆ ಬೇಕಾದ, ಹವ್ಯಾಸಕ್ಕೆ ಬೇಕಾದ ಕಲೆಯನ್ನು ರೂಪಿಸುವಲ್ಲಿ ಕೆಲವು ಪೋಷಕರು ಯಶಸ್ವಿಯಾಗಿದ್ದಾರೆ ಎಂದು ಹೇಳಲು ಸಂತಸ ವಾಗುತ್ತದೆ. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗುವುದೇ ಎಂಬುವುದು ಅಕ್ಷರಶಃ ಸತ್ಯ. ಪ್ರತಿ ವಿದ್ಯಾರ್ಥಿಗೂ ಬುದ್ದಿ ಒಂದೇ. ಆದರೆ ಅದನ್ನು ರೂಪಿಸುವ ಕಸರತ್ತು ಶಿಕ್ಷರಿಗೆ ಒಂದು ದೊಡ್ಡ ಸವಾಲು. ಇಂತಹ ಸವಾಲು ಎದುರಿಸುವುದರಿಂದ ಅದೆಷ್ಟೋ ಸುಂದರ ಮಕ್ಕಳ ಭವಿಷ್ಯ ಉಜ್ವಲವಾಗುತ್ತದೆ. ಉತ್ತಮ ಪ್ರಜೆಯನ್ನು ಸೃಷ್ಟಿಸುವಲ್ಲಿ ಇಬ್ಬರ ಪಾತ್ರವೂ ಮುಖ್ಯವಾಗಿರುತ್ತದೆ.

ಶಿಕ್ಷಕರೇ ರಕ್ಷಕರು.

***

ಮತ್ತೆ ಮಗುವಾಗುವ ಪ್ರಕ್ರಿಯೆ

– ನಾಗರತ್ನ ಚಂದ್ರಶೇಖರ್

ಕಪ್ಪೆ ಚಿಪ್ಪು, ತೆಂಗಿನಕಾಯಿ ಚಿಪ್ಪು, ಇದೆಲ್ಲಾ ನಾವು ಒಂದಲ್ಲ ಒಂದು ಸಾರಿ ಕೇಳಿರುತ್ತೇವೆ. ಆದರೆ ಈ ಮಂಡಿ ಚಿಪ್ಪು? ವಯಸ್ಸು ಆಗ್ತಾ ಆಗ್ತಾ ಇದ್ದ ಹಾಗೆ, ಕಾಲಿನ ಮಂಡಿಯ ಸವಕಳಿ ಕೂಡ ಜಾಸ್ತಿ ಆಗ್ತಾ ಹೋಗುತ್ತೆ. ಆಗ ವೈದ್ಯರು ಹೇಳುವುದು ಮಂಡಿ ಚಿಪ್ಪು ಸವೆದಿದೆ. ಪರಿಹಾರ– ಶಸ್ತ್ರಚಿಕಿತ್ಸೆಯಿಂದ ಸವೆದಿರುವ ಮಂಡಿ ಚಿಪ್ಪನ್ನು ಬದಲಾವಣೆ ಮಾಡಿಕೊಳ್ಳುವುದು. ಈ ವಿಷಯ ಮುನ್ನಲೆಗೆ ಬಂದಿದ್ದು ಸುಮಾರು ಹತ್ತು ವರ್ಷಗಳ ಹಿಂದೆ ಇರಬೇಕು. ಹೊರಗೆ ಪ್ರಯಾಣ ಮಾಡುವ ಪ್ರವಾಸಗಳಲ್ಲಿ ಯಾವಾಗಲೂ ನನ್ನ ಮೊಣಕಾಲುಗಳು ಕೈಕೊಡುತ್ತಲೇ ಇದ್ದವ. ಶಸ್ತ್ರಚಿಕಿತ್ಸೆಯ ಭಯದಿಂದಾಗಿ ನಾನು ನೋವು ನಿವಾರಕ ಅನೇಕ ವಿಧಾನಗಳಿಗೆ ಮೊರೆಹೋಗಬೇಕಾಯಿತು. ಕಾಲಿಗೆ ನೀ ಕ್ಯಾಪ್, ಫಿಜಿಯೋಥೆರಪಿ, ವಿವಿಧ ರೀತಿಯ ತೈಲಗಳು, ನೋವು ನಿವಾರಕ ಮಾತ್ರೆಗಳು ಎಲ್ಲವೂ ವಿಫಲ ಪ್ರಯತ್ನಗಳು ಎಂದಾದಾಗ ಕೊನೆಗೂ ಮಂಡಿ ಚಿಪ್ಪಿನ ಬದಲಾವಣೆಗೆ ಗಟ್ಟಿ ನಿರ್ಧಾರ ಮಾಡಲೇಬೇಕಾಯಿತು

ಏಪ್ರಿಲ್ 2. 2025ರಂದು ನಗರದ ಬನ್ನೇರುಘಟ್ಟ ಫೋರ್ಟೀಸ್ ಆಸ್ಪತ್ರೆಯಲ್ಲಿ ನನ್ನ ಎರಡು ಮೊಣಕಾಲಿನ ಚಿಪ್ಪು ಬದಲಾವಣೆ ಶಸ್ತ್ರಚಿಕಿತ್ಸೆ ಎಂದು ನಿಗದಿಯಾಗಿತ್ತು. ಅನೇಕ ವರ್ಷಗಳ ನನ್ನ ಮೊಣಕಾಲು ನೋವಿನ ಚಿಕಿತ್ಸೆಗೆ ಒಂದು ಅಂತಿಮ ಶರಾ ಬರೆಯುವ ತೀರ್ಮಾನಕ್ಕೆ ಬರುವ ಮುಂಚೆ ಸಾಕಷ್ಟು ನೋವು, ಕಷ್ಟನಷ್ಟಗಳ ಪರಂಪರೆಯ ಇತಿಹಾಸವನ್ನೆಲ್ಲ ಬರವಣಿಗೆಯ ಮೂಲಕ ಆಗಾಗ ಬರೆದು ಬರೆದು ದಣಿದಿದ್ದೆ. ಈಗ ಅಂತಿಮ ಪರೀಕ್ಷೆ. ಸಾಕಷ್ಟು ತಯಾರಿಯಾಗಿ ಆಸ್ಪತ್ರೆಗೆ ಪಾದಾರ್ಪಣೆ ಮಾಡಿದ್ದೆ. ಒಂದು ದಿನ ಮೊದಲೇ ಅಲ್ಲಿ ಹೋಗಿ ವಿವಿಧ ಪೂರ್ವ ನಿಗದಿತ ಪರೀಕ್ಷೆಗಳನ್ನು ಮುಗಿಸಿ ಆ ರಾತ್ರಿ ಅಲ್ಲೇ ಉಳಿದುಕೊಳ್ಳಬೇಕಿತ್ತು. ಖ್ಯಾತನಾಮರೂ, ರೋಬೋಟಿಕ್ ಸರ್ಜರಿಯಲ್ಲಿ ನುರಿತ ತಜ್ಞರೂ ಆಗಿರುವ ಡಾಕ್ಟರ್ ನಾರಾಯಣ ಹುಲ್ಸೆ ಅವರು ನನ್ನ ಶಸ್ತ್ರಚಿಕಿತ್ಸೆಯನ್ನು ರೋಬೋಟಿಕ್ ಮೂಲಕ ಮಾಡಲಿದ್ದರು.. ಸಾಧಾರಣವಾಗಿ ಒಂದು ಕಾಲಿಗೆ ಮಾಡಿಸಿಕೊಂಡು ಕೆಲತಿಂಗಳ ನಂತರವೋ ಅಥವಾ ವರ್ಷಗಳ ಅಂತರದಲ್ಲಿ ಮತ್ತೊಂದು ಕಾಲಿಗೆ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳುವವರೇ ಹೆಚ್ಚು. ಆದರೆ ಇತ್ತೀಚೆಗೆ ಸುಧಾರಿತ ಸೌಲಭ್ಯಗಳಿಂದಾಗಿ ಹೆಚ್ಚು ,ಹೆಚ್ಚು ಜನರು ಒಂದೇ ದಿನ ಎರಡು ಕಾಲಿನ ಶಸ್ತ್ರ ಚಿಕಿತ್ಸೆಗೆ ಒಳಗಾಗುವುದನ್ನು ನಾನು ಗಮನಿಸಿದ್ದೆ. ನಾನು ಧೈರ್ಯಮಾಡಿ ಒಂದೇ ದಿನ ಎರಡೂ ಕಾಲುಗಳ ಶಸ್ತ್ರಚಿಕಿತ್ಸೆಗೆ ನಿರ್ಧಾರ ಮಾಡಿದ್ದೆ.

ಚಿಕಿತ್ಸೆಗಾಗಿ ಬೇಕಾಗುವ ವಿಮಾಪತ್ರಗಳ ತಪಾಸಣೆ ಇವುಗಳೆಲ್ಲ ಮುಗಿಸಿ ನಮಗಾಗಿ ಕಾದಿರಿಸಿದ್ದ ವಾರ್ಡಿಗೆ ಹೋದೆವು. ಆ ದಿನ ಹಾಗೂ ಮರುದಿನ ಬೆಳಿಗ್ಗೆ ನನಗೆ ಮೂರುಬಾರಿ ಸ್ನಾನ ಮಾಡಲು ಆದೇಶಿಸಿ, ಯಾವುದೋ ಆಂಟಿ ಬಾಡಿ ದ್ರಾವಣವನ್ನು ಶಾಂಪು ಥರ ಉಪಯೋಗಿಸಲು ಕೊಟ್ಟಿದ್ದರು. ಇದರಿಂದ ನನ್ನ ಇಡೀ ಶರೀರ ಆಪರೇಷನ್ ಥಿಯೇಟರಿಗೆ ಹೋಗುವ ಮುಂಚೆ ಸಂಪೂರ್ಣ ಸ್ವಚ್ಛವಾಗಿರಬೇಕೆಂಬ ಇರಾದೆ ಅವರದು. ಬೆಳಿಗ್ಗೆ ಒಂದು ತೊಟ್ಟು ನೀರು ಸೇವಿಸದೆ ಖಾಲಿ ಹೊಟ್ಟೆಯಲ್ಲಿ, ಸ್ನಾನ ಮಾಡಿ ಕುಳಿತಿದ್ದೆ. ಬೆಳಿಗ್ಗೆ 7:00 ಗಂಟೆಗೆ ನನ್ನನ್ನು ಶಸ್ತ್ರಚಿಕಿತ್ಸೆ ನಡೆಯುವ ದೊಡ್ಡದಾದ, ಆಧುನಿಕ ಉಪಕರಣಗಳಿಂದ ಸಜ್ಜಾದ ಕೊಠಡಿಯೊಳಗೆ ಕರೆದೊಯ್ದರು. ಪತಿ ಹೊರಗೆ ಕಾಯುತ್ತಾ ನಿಂತಿದ್ದರು. ನನಗೆ ಶಸ್ತ್ರಚಿಕಿತ್ಸೆಗೆ ಪೂರ್ವಭಾವಿಯಾಗಿ ಮಾಡಬೇಕಾದ ಕೆಲಸಗಳಿಗಾಗಿ ಏಳೆಂಟು ಜನರ ತಂಡ ಅಲ್ಲಿ ಅದಾಗಲೇ ಸಜ್ಜಾಗಿ ನಿಂತಿದ್ದರು

ನನ್ನ ತಲೆ ಮೇಲೆ ಅಕ್ಕಪಕ್ಕ ಇದ್ದ ಎಲ್ಲ ವಸ್ತುಗಳನ್ನು ನಾನು ಗಮನಿಸುತ್ತಿದ್ದೆ. ಬಲ ಭಾಗದಲ್ಲಿ ಮುಸುಕುಹೊದ್ದ ಮೂರ್ನಾಲ್ಕು ರೋಬೋಟ್ ಮಿಷಿನ್ನುಗಳು ಇದ್ದವು. ನನಗೆ ಸೊಂಟಕ್ಕೆ ಅರಿವಳಿಕೆಯ ಚುಚ್ಚುಮದ್ದನ್ನು ನೀಡಿದರು. ಸ್ವಲ್ಪ ಹೊತ್ತಿನಲ್ಲೇ ನನಗೆ ಶರೀರದ ಕೆಳಭಾಗವೆಲ್ಲ ಮರಗಟ್ಟಿದಂತಾಗಿ ಕಾಲುಗಳು ಇದೆಯೋ ಇಲ್ಲವೋ ಎನ್ನುವ ಅನುಮಾನ ಬರುವಂತಾಗಿತ್ತು. ತೊಡೆಗಳನ್ನು ಕೂಡ ಅಲುಗಾಡಿಸಲು ಆಗದಷ್ಟು ಕೊರಡಿನಂತೆ ಆಗಿತ್ತು. ಆದರೆ ನನ್ನ ದೇಹದ ಮೇಲ್ಭಾಗದಲ್ಲಿ ನಾನು ಪೂರ್ಣ ಎಚ್ಚರವಾಗಿದ್ದೆ. ಶಸ್ತ್ರಚಿಕಿತ್ಸೆಯ ಸಮಯದಲ್ಲಿ ನೋವಿನ ಅರಿವಾಗಲಿಲ್ಲವಾದರೂ ಅಲ್ಲಿ ನಡೆಯುತ್ತಿದ್ದ ಎಲ್ಲ

ಪ್ರಕ್ರಿಯೆಗಳ ವಿವರಣೆ ಅವರ ಮಾತು, ಕಾರ್ಯಗಳಿಂದ ಗೊತ್ತಾಗುತ್ತಿತ್ತು. ಎಲ್ಲಾ ಪೂರ್ವಭಾವಿ ತಯಾರಿಗಳು ಮುಗಿಯುತ್ತಿದ್ದಂತೆಯೇ ಮುಖ್ಯ ಶಸ್ತ್ರಚಿಕಿತ್ಸಕರಾದ ಡಾಕ್ಟರ್ ನಾರಾಯಣ ಹುಲ್ಸೆಯವರು ಬಂದು ನನ್ನ ತಲೆಯ ಬಳಿ ನಿಂತು ಏನೂ ಭಯಪಡುವ ಅಗತ್ಯವಿಲ್ಲ ಎಂದು ಭರವಸೆ ನೀಡಿ ನಗುನಗುತ್ತಾ ನನ್ನನ್ನು ಸಂತೈಸಿದರು. ನಾನಾದರೂ ಆ ದೇವರಿಗೂ ಹಾಗೂ ನಾರಾಯಣನದೇ ಹೆಸರಿನಲ್ಲಿದ್ದ ವೈದ್ಯರಿಗೆ ನಾರಾಯಣೋ ಹರಿ ಎನ್ನುವಂತೆ ಕೈ ಮುಗಿದೆ.

ಮುಂದಿನ ಎರಡು ಗಂಟೆ ನನ್ನ ದೇಹದ ಮಧ್ಯಭಾಗಕ್ಕೆ ಎಳೆದಿದ್ದ ಪರದೆಯಿಂದಾಗಿ ನನಗೆ ಶಸ್ತ್ರಚಿಕಿತ್ಸೆಯ ದೃಶ್ಯಗಳು ಕಾಣಿಸದಿದ್ದರೂ ಅವರು ನಡೆಸುತ್ತಿದ್ದ ಕ್ರಿಯೆಗಳ ಶಬ್ದಗಳನ್ನು ಮಾತ್ರ ಎಚ್ಚರದಲ್ಲೆ ಕೇಳಿಸಿಕೊಳ್ಳುತ್ತಿದ್ದೆ. ಗರಗಸದಿಂದ ಮರ ಕತ್ತರಿಸುವಂತಹ ಶಬ್ದ, ಮೊಳೆ ಹೊಡೆದಂತಹ ಶಬ್ದ ಹಾಗೂ ಮಿಷಿನ್‌ಗಳ ಶಬ್ದ, ಇವುಗಳು ಸುಮಾರು 10:00 ಗಂಟೆ ತನಕ ನಡೆದಿದ್ದವು. ಶಸ್ತ್ರಕ್ರಿಯೆ ಸಂಪೂರ್ಣ ಮುಗಿದು ಎಲ್ಲಾ ಹೊಲಿಗೆಗಳನ್ನು ಹಾಕಿ ಕಾಲುಗಳೆರಡನ್ನು ಬ್ಯಾಂಡೇಜ್ ಮಾಡಿದರು. ಆಪರೇಷನ್ ಯಶಸ್ವಿಯಾಗಿದ್ದಕ್ಕೆ ವೈದ್ಯರು ಸಂತೋಷ ವ್ಯಕ್ತಪಡಿಸಿ ನನ್ನನ್ನು ಅಭಿನಂದಿಸಿದರು. ನಾನು ಕೂಡ ಮಲಗಿದ್ದಲ್ಲೇ ವೈದ್ಯರು ಮತ್ತು ಅವರ ತಂಡಕ್ಕೆ ಧನ್ಯವಾದಗಳು ಅರ್ಪಿಸಿದೆ. ಮುಂದೆ ನನ್ನನ್ನು ಐಸಿಯುಗೆ ಶಿಫ್ಟ್ ಮಾಡಿದರು

ಅದುವರೆಗೂ ಪಾಪ ನನ್ನ ಪತಿ ಆಚೆ ಕಾಯುತ್ತಿದ್ದರು ಅಲ್ಲಿಗೆ ಓಡೋಡಿ ಬಂದರು. ಅವರು ತಿಂಡಿಯನ್ನು ತಿನ್ನದೇ ಆತಂಕದಿಂದ ಕಾಯುತ್ತಿದ್ದುದ ಗೊತ್ತಾಗಿ ನಾನು, 'ಎಲ್ಲಾ ಸರಿಯಾಗಿದೆ, ಹೋಗಿ ತಿಂಡಿ ತಿಂದು ಮುಗಿಸಿ ಮನೆಗೆ ಹೋಗಿ ಸಂಜೆ ಬನ್ನಿ' ಎಂದು ತಿಳಿಸಿದೆ. ಆ ದಿನ ಪೂರ್ತಿ ನಾನು ಐ.ಸಿ.ಯು.ಯಲ್ಲೇ ಇರಬೇಕಾಗಿದ್ದರಿಂದ ಮರುದಿನ ನನ್ನನ್ನು ವಾರ್ಡಿಗೆ ಶಿಫ್ಟ್ ಮಾಡಿದ ನಂತರ ಆಸ್ಪತ್ರೆಯಲ್ಲಿರುವಷ್ಟು ದಿನ ನನ್ನನ್ನು ನೋಡಿಕೊಳ್ಳಲು ಏಜೆನ್ಸಿಯ ಮೂಲಕ ಒಂದು ಹುಡುಗಿಯನ್ನು ನೇಮಿಸಿಕೊಂಡಿದ್ದೆವು. ಮರುದಿನ ಬೆಳಿಗ್ಗೆ ಐಸಿಯುನಲ್ಲೇ ಎಕ್ಸ್‌ರೇ ಯಂತ್ರವೊಂದನ್ನು ಎಳೆದು ತಂದರು. ಎಲ್ಲಾ ಸರಿಯಾಗಿದೆ ಎಂದು ಮತ್ತೊಮ್ಮೆ ಎಕ್ಸ್‌ರೇ ಮಾಡಿ ಪರಿಶೀಲಿಸಿದರು. ಈಗಾಗಲೇ ಪರಕಾಯ ಪ್ರವೇಶ ಮಾಡಿದ್ದ ಎರಡು ಕಾಲುಗಳಲ್ಲಿದ್ದ ಲೋಹದ ತುಂಡುಗಳು ಸರಿಯಾದ ಜಾಗದಲ್ಲಿ ಜೋಡಣೆಯಾಗಿದ್ದುದ್ದರಿಂದ ಒಂದು ರೀತಿಯ ಸಮಾಧಾನ. ಅಲ್ಲಿಗೆ ಮುಖ್ಯ ಪರೀಕ್ಷೆಯನ್ನು ಯಶಸ್ವಿಯಾಗಿ ಮುಗಿಸಿ ಹೊರಬಂದಿದ್ದೆ. ಪ್ರಾಕ್ಟಿಕಲ್ ಮುಗಿದು ಇನ್ನು ವೈವಾ ಬಾಕಿ ಇದೆ,. ಅದು ಇದಕ್ಕಿಂತ ಭಯಂಕರ ಎಂದು ಎಲ್ಲರೂ ಹೆದರಿಸುವುದನ್ನು ಕೇಳಿದ್ದೆ. ಬೇರೆ ಉಪಾಯವಿರಲಿಲ್ಲ .ನೀರಿಗೆ ಇಳಿದ ಮೇಲೆ ಪ್ರವಾಹದ ವಿರುದ್ಧ ಈಜಿ ಹೊರಬರಲು ಸಾಕಷ್ಟು ಕಸರತ್ತು ಮಾಡಲೇಬೇಕಿತ್ತು.

ಶಸ್ತ್ರಚಿಕಿತ್ಸೆಯಾಗಿದ್ದ ನನ್ನ ಪ್ರತಿ ಕಾಲುಗಳಿಗೆ 24 ಹೊಲಿಗೆಗಳನ್ನು ಹಾಕಿದ್ದರು. ಅವುಗಳು ನೋಡಲು ಅಲ್ಲೊಂದು ದೊಡ್ಡ ಕಂಬಳಿಹುಳ ಹರಿದಂತೆ ಕಾಣುತ್ತಿತ್ತು. ಕ್ರೇಪ್ ಬ್ಯಾಂಡೇಜ್ ಮೇಲೆ ದಪ್ಪನೆಯ ರಕ್ಷಣಾ ಕವಚವನ್ನು ಹಾಕಿದ್ದು ನಡೆಯುವಾಗ ಒಂದೆರಡು ದಿನ ನಾನು ಅದನ್ನು ಹಾಕಿಕೊಂಡಾಗ ಚಂದ್ರಲೋಕದಲ್ಲಿ ಇಳಿದು ನಡೆಯುವಂತೆ ಹೆಜ್ಜೆ ಹಾಕುತ್ತಿದ್ದೆ. ಕೈಯಲ್ಲಿ ವಾಕರ್ ಬೇರೆ. ಯಮಯಾತನೆ. ನೋವು ನಿವಾರಕ ಮಾತ್ರೆ, ನಿದ್ರೆ ಮಾತ್ರೆ, ಆಂಟಿಬಯೋಟಿಕ್ ಮಾತ್ರೆಗಳೆಲ್ಲ ಮೂರು ದಿನದ ತನಕ ನಿರಂತರವಾಗಿ ನನ್ನ ರಕ್ತದೊಳಗೆ ನೇರವಾಗಿ ಐ.ವಿ ಮೂಲಕ ಹೋಗುತ್ತಿದ್ದವು. ಜಡಭರತ ಅಂತಾರಲ್ಲ ಹಾಗಿತ್ತು ನನ್ನ ಕಾಲುಗಳ ಸ್ಥಿತಿ. ಅಲ್ಲಿ ಕೊಡುತ್ತಿದ್ದ ರುಚಿ ಇಲ್ಲದ ಊಟ, ತಿಂಡಿಗಳ ಬಹುಪಾಲು ನನ್ನ ಜೊತೆಗಿರಲು ಬಂದಿದ್ದ ಸಹಾಯಕಿಯ ಹೊಟ್ಟೆ ಸೇರುತ್ತಿತ್ತು. ಒಂದೇ ದಿನ ಒಂದೇ ಸಾರಿ ಎರಡು ಕಾಲುಗಳಿಗೆ ಒಟ್ಟೊಟ್ಟಿಗೆ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡ ನನ್ನ ಭಂಡ ಧೈರ್ಯ ನೋಡಿ ಹಲವಾರು ಜನ ಆಶ್ಚರ್ಯಪಟ್ಟಿದ್ದರು.

ಈಗ ಸೀದಾ ಆಸ್ಪತ್ರೆಯಿಂದ ಮನೆಗೆ ಹೋಗುವಂತೆ ಇರಲಿಲ್ಲ. ಅಲ್ಲಿ ನನ್ನ ಪತಿ ಬಿಟ್ಟರೆ ನನ್ನ ಆರೈಕೆಗೆ ಬೇರೆ ಯಾರೂ ಇರಲಿಲ್ಲ. ಹಾಗಾಗಿ ನಮ್ಮ ಮನೆಯ ಹತ್ತಿರವೇ ಇದ್ದ ಲೈಫ್ ಕೇರ್ ಸೆಂಟರ್ ನಲ್ಲಿ ಮುಂಚೆ ಒಂದು ರೂಮ್ ಬುಕ್ ಮಾಡಿಕೊಂಡು ಇಟ್ಟುಕೊಂಡಿದ್ದೆವು. ಅಲ್ಲಿ ನನ್ನ ಊಟ ಉಪಚಾರ, ನರ್ಸಿಂಗ್, ಫಿಜಿಯೋಥೆರಪಿ ಎಲ್ಲಾ ವ್ಯವಸ್ಥೆ ಇತ್ತು. ಐದನೇ ದಿನಕ್ಕೆ ನನಗೆ ಆಸ್ಪತ್ರೆಯಿಂದ ಡಿಸ್ಚಾರ್ಜ್ ಎಂದು ತಿಳಿದು ಅಲ್ಲಿಂದಲೇ ಒಂದು ಆಂಬುಲೆನ್ಸ್ ಗೊತ್ತು ಮಾಡಿ, ಲೈಫ್ ಕೇರ್ ಸೆಂಟರ್‌ಗೆ ಬಂದೆವು. ಅಂಬುಲೆನ್ಸ್ ನನ್ನ ಪ್ರಯಾಣ ಮೊದಲನೆಯದಾಗಿತ್ತು. ಈ ರಥೋತ್ಸವದಲ್ಲಿ ಸುಮಾರು 45

ನಿಮಿಷಗಳ ಕಾಲ ಕಿವಿಗಡಚಿಕ್ಕುವ ಭಯಾನಕ ಶಬ್ದ ನನ್ನ ತಲೆಯ ಸಮೀಪವೇ ಬರುತ್ತಿದ್ದರಿಂದ ನನಗಂತೂ ತಲೆ ಹೋಳಾಗುವಷ್ಟು ಬೇಸರವಾಗುತ್ತಿತ್ತು. ಈ ರಥೋತ್ಸವ ಯಾವಾಗ ಕೊನೆಗೊಳ್ಳುತ್ತದೆಯೋ ಎಂದು ಕಾಯತೊಡಗಿದ್ದೆ. ಅಲ್ಲಿಂದ ಸ್ಟ್ರೆಚರ್ ನಲ್ಲಿ ನನ್ನನ್ನು ಇಳಿಸಿಕೊಂಡು ಹಾಗೆಯೇ ಮೊದಲ ಮಹಡಿಯ ಕಾದಿಟ್ಟ ಕೋಣೆಗೆ ನನ್ನನ್ನು ಸ್ಥಳಾಂತರಿಸಿದರು. ಅಲ್ಲಿ ನನ್ನ ವಾಸ ಮುಂದಿನ 25 ದಿನಗಳು ಇರಬೇಕಾಗಬಹುದೆಂಬ ನಿರ್ಧಾರವಿದ್ದುದರಿಂದ ಹಾಗೂ ಮನೆಯಿಂದ ಅದು ತುಂಬಾ ಹತ್ತಿರವಿದ್ದುದರಿಂದ ನನ್ನ ಪತಿ ದಿನಕ್ಕೆ ಎರಡು ಬಾರಿ ನನ್ನನ್ನು ಭೇಟಿ ಮಾಡಲು ಬರುತ್ತಿದ್ದರು. ಯಾವುದೇ ಗಲಾಟೆ ಇಲ್ಲದೆ ಪ್ರಶಾಂತವಾದ ಒಂದು ಕೋಣೆ ನನಗೆ ಬೇಕಾಗಿತ್ತು. ಆದರೆ ಅದು ಸಿಂಗಲ್ ರೂಂ ಬದಲು ಜನರಲ್ ವಾರ್ಡಿಗಿಂತ ಹೆಚ್ಚು ಗಲಾಟೆ, ಕಿರಿಕಿರಿಯಾಗುತ್ತದೆಂಬ ಒಂದು ಸುಳಿವು ಆಗ ನನಗೆ ಇರಲಿಲ್ಲ. ಉದ್ದನೆಯ ಕಾರಿಡಾರ್‌ನ ಮೊದಲ ಕೋಣೆ ಹಾಗೂ ನರ್ಸ್‌ಗಳು ಆ ಕಾರಿಡಾರಿನ ನನ್ನ ಕೋಣೆಯ ಮುಂದುಗಡೆಯೇ ತಮ್ಮ ಮೇಜು ಕುರ್ಚಿಯನ್ನು ಹಾಕಿ ಕುಳಿತುಕೊಳ್ಳುತ್ತಿದ್ದರು ಮುಂದಿನ ವಾರ್ಡುಗಳಿಗೆ ಹೋಗಿಬರುವ ಜನರೆಲ್ಲ ನಮ್ಮ ಕೋಣೆಯ ಮುಂದೆ ಹಾದುಹೋಗ ಬೇಕಾಗಿದ್ದುದರಿಂದ ಸದಾ ತೆರದೇ ಇರುತ್ತಿದ್ದ ನನ್ನ ಕೋಣೆಯ ಬಾಗಿಲೊಳಗೆ ಅವರ ದೃಷ್ಟಿ ಬೀಳಬಹುದಾದ ಸಾಧ್ಯತೆ. ಇದರಿಂದಾಗಿ ನನಗೆ ಸ್ವಲ್ಪಮಟ್ಟಿನ ಕಿರಿಕಿರಿ ಆಗತೊಡಗಿತ್ತು. ಏಳಲು, ಕೂಡಲು ಆಗದೆ ಸದಾ ಮಲಗಿರುವ ಭಂಗಿಯಲ್ಲೇ ಇದ್ದ ನನ್ನ ಪಾಡಂತೂ ಹೇಳತೀರದು. ಮಲಗಿದ್ದಲ್ಲೇ ಎಲ್ಲಾ ಅನ್ನೋ ಸ್ಥಿತಿ.

ಬೆಳಿಗ್ಗೆ ಸ್ಪಾಂಜ್ ಬಾತ್ ಆರು ಗಂಟೆಗೆ ಎಂದು ಬರುವ ಹುಡುಗಿ, ನೀರಿಗೆ ಡೆಟಾಲ್ ಹಾಕಿ ನಾಯಿಮರಿ ತೊಳೆದಂತೆ ಮೈಯೆಲ್ಲಾ ಒರೆಸಿ ಡೈಪರ್ ಬದಲಾಯಿಸುವವರೆಗೂ ಕಾಯಬೇಕು. ಇದರ ಮಧ್ಯೆ ಬೆಳಗ್ಗೆ ಸಂಜೆ ಫಿಸಿಯೋಥೆರಪಿ ಎಂದು ಮೂರುನಾಲ್ಕು ಜನರ ದಂಡೇ ಬರುತ್ತಿತ್ತು. ಕಾಲುಗಳನ್ನು ಮಡಚುವುದು ಭಯಂಕರ ಹಿಂಸೆ. ನೋವಿನಿಂದ ಕಿರುಚುವಂತಾಗುತ್ತಿತ್ತು. ವಾಕರ್‌ನಲ್ಲಿ ಎರಡು ದಿನ ನಡೆಯುವುದನ್ನು ಅಭ್ಯಾಸ ಮಾಡಿಸಿದ ಮೇಲೆ ವಾಕಿಂಗ್ ಸ್ಟಿಕ್ ಹಿಡಿದು ಒಂದು ದಿನ ನಡೆದೆ. ಮರುದಿನದಿಂದ ಕೈ ಹಿಡಿದು ನಡೆಸಲು ಶುರು ಮಾಡಿದೆ. ಮಹಡಿ ಹತ್ತಿ ಇಳಿಯುವ ಕಸರತ್ತಂತೂ ಬಹಳ ನೋವಿನಿಂದ ಕೂಡಿದ್ದಾದರೂ ಅದನ್ನು ಮಾಡಲೇಬೇಕಿತ್ತು. ಮಂಡಿಗಳನ್ನು 90 ಡಿಗ್ರಿ, ನೂರು ಡಿಗ್ರಿ, ನೂರಹತ್ತು ಡಿಗ್ರಿ ಈ ರೇಂಜಿಗೆ ಬಗ್ಗಿಸುವ ಅಭ್ಯಾಸ ಮಾಡಲೇಬೇಕಿತ್ತು. ಒಂದು ವಾರ ಕಳೆಯುವಷ್ಟರಲ್ಲಿ ಒಂದು ದಿನ ಭಾರವಾದ ದಪ್ಪನೆಯ ಗೆಜ್ಜೆಗಳಂತಹ ವಸ್ತುವನ್ನು ತಂದು ನನ್ನ ಕಾಲಿಗೆ ಕಟ್ಟಿ ಕಾಲುಗಳನ್ನು ಎತ್ತಿ ಇಳಿಸಿ ಮಾಡುವ ವ್ಯಾಯಮ ಪ್ರಾರಂಭ ಮಾಡಬೇಕಿತ್ತು. ಇದರಿಂದ ದಿನೇದಿನೇ ನನ್ನ ನೋವು ಹೆಚ್ಚಾಗುತ್ತಿತ್ತೇ ಹೊರತು ಕಡಿಮೆಯಾಗದೆ ರಾತ್ರಿ ನಿದ್ರೆಯೂ ಇಲ್ಲದೆ ಹೊರಳಾಡುತ್ತಾ, ನಿದ್ರೆ ಮಾತ್ರೆಯ ಮೊರೆ ಹೋಗಬೇಕಾಗುತ್ತಿತ್ತು. ಎಲ್ಲಕ್ಕಿಂತ ಮಿಗಿಲಾಗಿ ನನಗೆ ನನ್ನಷ್ಟಕ್ಕೆ ಶೌಚಾಲಯಕ್ಕೆ ಹೋಗಬೇಕೆನಿಸುತ್ತಿತ್ತು. ಆದರೆ 21 ದಿನಗಳ ಕಾಲ ನನ್ನನ್ನು ಡೈಪರಿನಿಂದ ಕಟ್ಟಿ ಹಾಕಿದ್ದರು. ನಾನು ಗಲಾಟೆ ಮಾಡಿ, ನಾನು ಸ್ನಾನ ಮಾಡಲೇಬೇಕೆಂದು ಒತ್ತಾಯ ಹಾಕಿದ್ದರಿಂದ 21ನೇ ದಿನಕ್ಕೆ ಶಾಹಿ ಸ್ನಾನ ಮಾಡಿದಷ್ಟು ಖುಷಿಯಿಂದ ಬಚ್ಚಲ ಮನೆಯಲ್ಲಿ ಬಕೇಟಿನಿಂದ ಬಿಸಿ ನೀರನ್ನು ತೆಗೆದು ಮೈತುಂಬ ಸುರುವಿಕೊಂಡೆ. ತೂಕದಲ್ಲಿ ಎರಡು ಕೆಜಿ ಈಗಾಗಲೇ ಕಡಿಮೆಯಾಗಿದ್ದು, ಊಟ ತಿಂಡಿಗಳು ಸರಿಯಾಗಿ ಸೇರದೆ ಮೈಯಲ್ಲಿ ಕಬ್ಬಿಣದ ಅಂಶ ಕೊರತೆಯಾಗಿತ್ತು.

ಈಗ ನನ್ನಷ್ಟಕ್ಕೆ ನಾನು ನಿಧಾನವಾಗಿ ನಡೆಯಲು ಶುರು ಮಾಡಿದ್ದರಿಂದ ಮನೆಗೆ ಬೇಗ ಹೋಗುವ ನಿರ್ಧಾರವನ್ನು ಕೈಗೊಂಡೆ. ಈ ಮಧ್ಯೆ 15ನೇ ದಿನಕ್ಕೆ ಹೊಲಿಗೆ ಬಿಚ್ಚಿಸಿಕೊಳ್ಳಲು ಮತ್ತೊಮ್ಮೆ ಫೋರ್ಟೀಸ್ ಆಸ್ಪತ್ರೆಗೆ ಹೋಗಬೇಕಾಗಿತ್ತು. ಯಥಾಪ್ರಕಾರ ರಥಯಾತ್ರೆ ಎಂದರೆ ಆಂಬುಲೆನ್ಸಿನಲ್ಲಿ ಹೋಗಿ ಬಂದಾಯ್ತು ಈಗ ನನ್ನ ಗಾಯಗಳು ಮಾಗಿದ್ದವು. ಇನ್ನು ಮುಂದೆ ಸ್ನಾನ ಮಾಡಲು ಯಾವುದೇ ವಿಶೇಷ ಎಚ್ಚರಿಕೆ ತೆಗೆದುಕೊಳ್ಳಬೇಕಿರಲಿಲ್ಲ. ನೇರವಾಗಿ ನೀರನ್ನು ಕಾಲಿನ ಮೇಲೆ ಹಾಕಿಕೊಳ್ಳಬಹುದು ಎಂದು ಡಾಕ್ಟರ್ ಹೇಳಿದ್ದರು.

ಒಂದು ತಿಂಗಳ ನಂತರ ಮತ್ತೆ ಮರಳಿ ಮನೆಗೆ ಕಾಲಿಡುವ ಸಂಭ್ರಮ. ಮನೆ ಎನ್ನುವುದು ಸ್ವರ್ಗ. ಮನೆ ಊಟಕ್ಕಿಂತ ಮಿಗಿಲಾದದ್ದು ಯಾವುದೂ ಇಲ್ಲ. ಇದರ ಸಂಪೂರ್ಣ ಅರ್ಥ ನನಗೆ ಮನೆಗೆ ಕಾಲಿಡುತ್ತಿರುವಂತೆಯೇ ಮನನವಾಯಿತು. ಇದುವರೆಗೂ ಕ್ಯಾಟರಿಂಗ್‌ನಿಂದ ಊಟ ತಿಂಡಿಗಳು ಕಾಲಕಾಲಕ್ಕೆ ಮನೆಗೆ ಬರುತ್ತಿದ್ದವು, ನಿಜ. ಬೇರೆ ಉಪಾಯವಿಲ್ಲದೆ

ಅನಿವಾರ್ಯವಾಗಿ ಅವುಗಳ ಮೇಲೆ ಅವಲಂಬನೆಯಾಗಬೇಕಿತ್ತು. ನನ್ನ ಪತಿಗೆ ಅಡುಗೆಮನೆ ಸಂಗತಿಗಳಲ್ಲಿ ಆಸಕ್ತಿಯಾಗಲೀ ಪರಿಣತಿಯಾಗಲೀ ಇದುವರೆಗೂ ಇರಲಿಲ್ಲವಾಗಿ ಅಡುಗೆಮನೆಯನ್ನು ಮತ್ತೆ ಮೊದಲಿನಂತಾಗಿಸುವುದು ನನ್ನ ಮೊದಲ ಆದ್ಯತೆಯಾಗಿತ್ತು. ಒಗ್ಗರಣೆ ಡಬ್ಬಿಯ ಎಲ್ಲ ಪದಾರ್ಥಗಳು ಪಲ್ಲಟವಾಗಿ ಅಲ್ಲೋಲಕಲ್ಲೋಲವಾಗಿ ಡ್ರಾಯರಿನ ತುಂಬಾ ಬಿದ್ದುಕೊಂಡಿದ್ದವು. ಗ್ಯಾಸ್ ಸ್ಟವ್ ತಳಭಾಗದಲ್ಲಿ ಯಾವಾಗಲೋ ಉಕ್ಕಿದ ಹಾಲಿನ ಗಟ್ಟಿ ಪದರ ನೆಲಕ್ಕಂಟಿಕೊಂಡಿತ್ತು. ನನ್ನ ಗೈರುಹಾಜರಿಯಲ್ಲಿ ಮನೆ ಸೇರಿದ ಅದೆಷ್ಟೋ ಅನವಶ್ಯಕ ಸಾಮಾನುಗಳ ಸಂಗ್ರಹ ಒಂದೊಂದಾಗಿ ಕಣ್ಣಿಗೆ ಬೀಳತೊಡಗಿತು. ಈಗ ನನಗೆ ಮೊದಲಿನಂತೆ ಪತಿಯ ಜೊತೆ ವಾದ ಮಾಡಲು ಮನಸಾಗುತ್ತಿರಲಿಲ್ಲ. ನನ್ನನ್ನು ಅವರು ವಿಶೇಷ ಕಾಳಜಿಯಿಂದ ನೋಡಿಕೊಳ್ಳುತ್ತಿದ್ದರು. ಹೀಗಾಗಿ ನಮ್ಮಿಬ್ಬರ ಮಧ್ಯೆ ಹೊಂದಾಣಿಕೆ ಹೆಚ್ಚಾಗಿತ್ತು. ನಾನಾದರೂ ಇಡೀ ದಿನ ಹಾಸಿಗೆಯಲ್ಲಿ ಹೊರಳಾಡಲು ಸಿದ್ಧಳಿರಲಿಲ್ಲ. ಮೆಲ್ಲಗೆ ಮತ್ತೆ ನನ್ನ ಕೈಗೆ ಸೌಟು ಬಂತು.

ಹದಿನೈದು ದಿನ ಕಳೆಯುವಷ್ಟರಲ್ಲಿ ಸಂಪೂರ್ಣ ಅಡುಗೆ, ತಿಂಡಿ ಎಂದು ನನ್ನ ನಳಪಾಕ ಮತ್ತೆ ವಿಜೃಂಭಿಸತೊಡಗಿತು. ಪತಿದೇವರಿಗೂ ಈಗ ಸಾಕಷ್ಟು ಖುಷಿಯಾಗಿತ್ತು. ಇದೇ ಸಮಯಕ್ಕೆ ತಾಯಂದಿರ ದಿನಾಚರಣೆ ಎಂದು ನನ್ನ ಚಿಕ್ಕ ಮಗಳು ಅಮೆರಿಕದಿಂದ ಕರೆ ಮಾಡಿ ಶುಭಾಶಯ ಕೋರಿದಳು. ನನಗೆ ಏನು ಬೇಕೆಂದು ಕೇಳಿದಾಗ ನಾನು ಅರ್ಧ ಕೆಜಿ ಕಬ್ಬಿಣ ಕಳಿಸು ಎಂದು ನಗೆಚಾಟಿಕೆ ಹಾರಿಸಿದೆ. ಚಿನ್ನ, ಬೆಳ್ಳಿ, ಬಟ್ಟೆಗಳ ಸಂಗ್ರಹದಲ್ಲಿ ನನಗೆ ಈಗಾಗಲೇ ಆಸಕ್ತಿ ಕುಂದಿತ್ತು. ವೈದ್ಯರು ಕಬ್ಬಿಣದ ಅಂಶ ರಕ್ತದಲ್ಲಿ ಕಡಿಮೆ ಇದ್ದು ನನಗೆ ಮಾತ್ರೆಯನ್ನು ಬರೆದುಕೊಟ್ಟಿದ್ದರಿಂದ ಅವಳಿಗೆ ನಾನು ನನಗೆ ಈಗ ಬೇಕಾಗಿದ್ದದ್ದು ಕಬ್ಬಿಣ ಎಂದು ಹೇಳಿದಾಗ ಅವಳೂ ನಕ್ಕಳು.

ನಾನು ಹೀಗೆ ಎರಡು ತಿಂಗಳು ಮನೆಯಲ್ಲಿ ಆಚೀಚೆ ಓಡಾಡದೆ ಮಲಗಿರುವಾಗ ನನ್ನ ಸ್ನೇಹಿತರ ಬಳಗ ಎಷ್ಟು ದೊಡ್ಡದೆಂಬುದರ ಅನುಭವವಾಯಿತು. ನಗೆ ಕೂಟದ ಸದಸ್ಯರ ಸ್ನೇಹ ಒಡನಾಟದಿಂದ ಈಗಾಗಲೇ ನಾವು ಹತ್ತಿರದಲ್ಲೇ ಮನೆ ಮಾಡಿ ವಾಸ ಮಾಡುತ್ತಿದ್ದುದರಿಂದ ಅವರೆಲ್ಲ ಆಗಾಗ ಬಂದು ನನ್ನ ಯೋಗಕ್ಷೇಮವನ್ನು ವಿಚಾರಿಸಿ ಮನೆಯಿಂದ ಹಣ್ಣು, ಹಂಪಲು ಅನೇಕ ವೈವಿಧ್ಯಮಯ ರಸಪಾಕಗಳನ್ನು ತಂದು ಕೊಡುತ್ತಿದ್ದರು. ಈ ಸ್ನೇಹ, ವಿಶ್ವಾಸ ಉತ್ತೇಜನಗಳಿಂದ ನಾನು ಅದೆಷ್ಟು ಬೇಗ ಚೇತರಿಸಿಕೊಂಡನೆಂದರೆ ಫಿಜಿಯೋಥೆರಪಿಯ ಕಾರ್ಯಕ್ರಮ ಮುಗಿಯುತ್ತಿದ್ದಂತೆಯೇ ಮತ್ತೆ ನಗೆ ಕೂಟಕ್ಕೆ ಬೆಳಗ್ಗೆ ಹಾಗೂ ಪಾರ್ಕಿಗೆ ಸಂಜೆ ವಾಕಿಂಗ್ ಎಂದು ಹೋಗತೊಡಗಿದೆ. ನನ್ನ ಬೇರೆ ಬೇರೆ ಅನೇಕ ಗೆಳತಿಯರು ಕೂಡ ದೂರವಾಣಿಯ ಮುಖಾಂತರ ಹರಟೆ ಹೊಡೆಯುತ್ತಾ ನನ್ನ ಏಕಾಂಗಿತನವನ್ನು ದೂರ ಮಾಡುತ್ತಿದ್ದರು. ಮತ್ತೆ ಓದಲು, ಬರೆಯಲು ಪ್ರಾರಂಭಿಸುವ ಹುಮ್ಮಸ್ಸು ತುಂಬಿದರು. ಈ ಸಮಯದಲ್ಲೇ ನನ್ನ ಮೂರು ಪುಸ್ತಕಗಳು ವಿವಿಧ ಪ್ರಕಾಶಕರಿಗೆ ಪ್ರಕಟಣೆಗಾಗಿ ಕಳುಹಿಸಲಾಗಿದ್ದು ಅವುಗಳ ಬಗ್ಗೆ ಗಮನಹರಿಸಬೇಕಿತ್ತು. ಈ ವರ್ಷಪೂರ್ತಿ ನಮ್ಮ ಯಾವುದೇ ದೇಶ ವಿದೇಶಗಳ ತಿರುಗಾಟಕ್ಕೆ ಬ್ರೇಕ್ ಹಾಕಬೇಕೆಂಬ ನಿರ್ಧಾರದೊಂದಿಗೆ ಮೈ, ಮನಸುಗಳು ಜಡ್ಡುಹಿಡಿಯದಂತೆ ಮತ್ತೆ ಕ್ರಿಯಾಶೀಲತೆಯತ್ತ ಹೆಜ್ಜೆ ಇಡುತ್ತಿರುವೆ..

***

ಹಿತವೀ ಬಾಹ್ಯ ಲೋಕ

– ಶ್ರೀಧರ ರಾವ್ ಹೆಚ್

ಅಂದೆಲ್ಲ, 'ಅಮ್ಮ ನೀ ನಗುತ್ತಿರೆನ್ನುತ್ತಾ'
ಮೂರ್ತಸ್ವರೂಪ ಪ್ರಕ್ರಿಯೆಯನ್ನಾನಂದಿಸುತ್ತಾ
ಕಳೆದಿದ್ದೆ ವಾರ ಮೂವತ್ತೆರಡನ್ನು ಗರ್ಭಕೋಶದಿ
ಈಗೇಕೋ ಶೀಘ್ರವೇ ಬರಬೇಕಂಬ ಧಾವಂತ II

ಬೆಳೆದಂತೆ ಬಲು ತ್ರಾಸ ಕೋಶ ಭ್ರಮಣ
ನಾನಾಗ ಅಳುತ್ತಲಿದ್ದೆ ಏಕಿನ್ನೂ ತಡವೆಂದು
ಅದೋ ಬೆಳವಣಿಗೆಯ ಎರಡನೇ ಹಂತ
ಗರ್ಭಚೀಲ ದ್ರವ ಕುಡಿಯಲಿ ಜೀರ್ಣಾಂಗವಿಂದು II

ಗರ್ಭ ಅಂಗಣ ಓಡಾಟ ಕೈ-ಕಾಲು ಬಡಿದಾಟ
ಶ್ವಾಸಕೋಶ ಉಗುರು ಕೂದಲು ಬೆಳೆದಾಗ
ಅಮ್ಮನಿಗದೊ ನೋವು ಬರೀ ನೋವು
ಓಡಾಡಲಾರೆನೆಂದು ನಾ ಸುಮ್ಮನಿದ್ದಾಗ II

ಚಿಂತೆಯೋ, ಗಾಬರಿಯೋ ವೈದ್ಯೆಯ ಕಾಣಲು
ವಾರ ನಲ್ವತ್ತಾಗಲಿ ಬೆಳೆಯಲಿ ಶಿಶುವಿನ್ನೂ
ನರನಾಡಿ ದೈಹಿಕ ಕಾರ್ಯ ಹಿಡಿತವಿರಬೇಕು
ಇದೋ ಮಾತ್ರೆ ನೋವು ಉಪಶಮನಕ್ಕೆಂದು II

ಯಾಕೆನ್ನ ಬವಣೆಯನ್ನರಿಯಳು ಈ ವೈದ್ಯೆ
ನಾ ಸಿದ್ಧ ಬರುವೆನೆಂದರೂ ಅದೇಕೆ ಒಲ್ಲೆ
ಮಾತ್ರೆಗಳೋ ನನಗಂತೂ ವಾಕರಿಕೆಯೇ
ಸಾಕೆ ಸಾಕು ನಾ ಬೆಳೆದಿರುವೆ ಹೊರಬರುವೆ II

ಆತುರಾತುರದೇ ಅಮ್ಮನಿಗಂದು ಆರತಿ
ಹಣ್ಣುಹಂಪಲು ಬಗೆಬಗೆಯ ತಿಂಡಿ ತಿನಿಸು
ಹೊಸ ಸೀರೆ ಹೊಸ ಚಿನ್ನ ಹೂವಿನ ಶೃಂಗಾರ
ಅಮ್ಮ ಸುರಸುಂದರಿ ಪೂಜೆ ಪುನಸ್ಕಾರ II

ಆಯಿತಲ್ಲ ಸಂಪ್ರದಾಯ ಸಂಭ್ರಮದಾರತಿ
ನಾನಿಲ್ಲಿ ಓಡಾಡಲಾರೆನೆಂದು ನಿಂತಿರುವೆ
ಗಡಿಬಿಡಿಯಲ್ಲಿ ನಡೆದಳಮ್ಮ ವೈದ್ಯೆ ಬಳಿಗೆ
ನೀನಿನ್ನು ಕಾಯದಿರು ನಾನೆತ್ತಿಕೊಡುವೆ II

ಕೊಯ್ದು ಉದರ ಭಾಗದಿಂದೆತ್ತಿದರು ನನ್ನ
ಪೋಷಕಾಂಶವಾಹಕ ಕರುಳಬಳ್ಳಿ ಕತ್ತರಿಸಿ
ಹೊರಲೋಕ ಆ ಗಾಳಿ, ಬೆಳಕು, ಆ ಮಂದಿ
ಭಯಬಿದ್ದು ಅಳುತ್ತಲಿದ್ದಾಗ ಉಸಿರಾಟ ಕಷ್ಟ II

ಓ ಇದೇನಿದು ಶ್ವಾಸಕೋಶ ಬೆಳೆದಿಲ್ಲವೇ
ವಾರವೇ ಇರಬೇಕಿತ್ತು ಗರ್ಭಾಶಯದೊಳು
ಕಾವುಗೂಡಿನಲಿ ಇರಲಿ ಶಿಶು ಇನ್ನಷ್ಟು ದಿನ
ಅಮ್ಮನ ಮಡಿಲ ಕಾವಿಗೆ ಇನ್ನೆಷ್ಟು ದಿನವೋ II

ಅಯ್ಯೋ, ನಾ ಹೊಂದಿಕೊಳ್ಳಬಲ್ಲೆ ಹೀಗೇಕೆ
ಅಮ್ಮನ ಶಾಕವಿದ್ದೊಡೆ, ಹಾಲ ಕುಡಿದೊಡೆ
ಇದೇನಿದು ತಂತ್ರಗಾರಿಕೆಯೋ ಕಾಳಜಿಯೋ
ಅಪ್ಪಂಗೆ ಹಣ ಭಾರ ಅಮ್ಮಂಗೆ ಮನ ಭಾರ II

ಅಮ್ಮನಂದು ಬಂದೊಡೆ ಬೆರಳ ಬಿಡೆನೆಂದೆ
ಅಪ್ಪ ಮೈ ಶಾಖ ಮಡಿಲ ಹಾಸಿಗೆ ಬೇಕೆಂದೆ
ನೀನಿಲ್ಲಿ ಸುದೃಢ ಆಯುರಾರೋಗ್ಯಕ್ಕೆಂದು
ಕೆಲ ದಿನ-ರಾತ್ರಿ ಧೀರ್ಘವೇ ತಾಳೆಂದಳಮ್ಮ II

ಹೊಂದಿಕೊಂಡು ಮಡಿಲಸೇರುವ ಪ್ರಬಲಿಚ್ಛೆ
ಔಷಧಿ ಪಥ್ಯ ಬೇಗನೆ ಮೈಗೂಡಿಸಿಕೊಂಡೆ
ಇನಿತಿನಿತೆ ಮೊಲೆ ಹಾಲು ಬಲು ಸ್ವಾದವು
ಕುಡಿದಂತೆಲ್ಲ ನವಚೈತನ್ಯ ನರನಾಡಿಗೆಲ್ಲ II

ಬಲುದಿನದ ಬಯಕೆ ಮಡಿಲೊಳಗಿನ ಆಯ್ಕೆ
ಕೂಡಿಬಂದಿತು ಕಾಲ ಮೈನವಿರೇಳುತ್ತಲಿದೆ
ಆಹಾ! ಎಂತ ಸುಯೋಗ ಅಮ್ಮ ಅಪ್ಪ ಅಕ್ಕ
ಅಜ್ಜಿ ತಾತ ಎಲ್ಲ ಹಿತವೀ ಬಾಹ್ಯ ಲೋಕ II

***

ಕಥೆ

ನೆಮ್ಮದಿ

– ಮಾಧುರಿ ಕೃಷ್ಣ

ಅವಳು ಝುಗಮಗಿಸುತ್ತಿರುವ ಜರಿಪತ್ತಲವನ್ನುಟ್ಟು ಇನ್ನೋವಾ ಕಾರಿನಿಂದ ಕೆಳಗಿಳಿದಳು. ನಾಜೂಕಾಗಿ ಮೇಕಪ್ ಮಾಡಿಕೊಂಡ ಮುಖ ಎಂಥವರನ್ನೂ ಥಟ್ಟನೇ ಆಕರ್ಷಿಸುತಿತ್ತು. ಆ ಮದುವೆಗೆ ಅವಳು ಬಂದೇ ಬರುತ್ತಾಳೆ ಎಂದು ಮುಂದಾಗಿಯೇ ಅವನಿಗೆ ಸುಳಿವು ಸಿಕ್ಕಿದಂದಿನಿಂದ ಬಾದರಾಯಣ ಸಂಬಂಧವಾದರೂ ಆ ಮದುವೆಗೆ ತಾನು ಆವಶ್ಯ ಹಾಜರಿರುವುದನ್ನು ಅಂದೇ ನಿರ್ಧರಿಸಿಕೊಂಡುಬಿಟ್ಟಿದ್ದ!

ಅವಳನ್ನು ನೋಡದೇ ಒಂದಲ್ಲ... ಎರಡಲ್ಲ.. ಅವನಿಟ್ಟ ಲೆಕ್ಕದಂತೆ ಪೂರಾ ಐವತ್ತು ವರ್ಷಗಳೇ ಕಳೆದುಹೋಗಿದ್ದುವು. ಪಶ್ಚಿಮ ಘಟ್ಟದ ಆ ಕೊರಕಲಿನ ಬಯಲು ಭಾಗದ ಕುಗ್ರಾಮವೊಂದರ ಏಕೈಕ ಒಡೆಯನಾಗಿ ಈ ಐವತ್ತು ವರ್ಷಗಳ ಕಾಲ ಪೂರ್ತಿ ರಾತ್ರಿ ಕಣ್ಣೆವೆ ಮುಚ್ಚುವಾಗಲೂ, ಹಗಲು ಸೂರ್ಯೋದಯಕ್ಕೂ ಮುಂಚಿನ ಬೆಳ್ಳಿ ಬೆಳಗಿನಲ್ಲಿಯೂ ತಪ್ಪದೇ ಕಣ್ಣಮುಂದೆ ಪ್ರತ್ಯಕ್ಷವಾಗುವ ಅವಳ ನೆನಪು, ಆ ಮಾದಕ ರೂಪ... ಅವಳಾದರೂ ಈಗ ಹೇಗೆ ಕಾಣಿಸಿಕೊಳ್ಳುತ್ತಿರಬಹುದು! ಎಂದು ನೆನೆದುಕೊಳ್ಳುತ್ತಲೇ ವರ್ಷ ವರ್ಷಗಳನ್ನು ಕಳೆದುಬಂದಿದ್ದ!

ಹಾಗೆಂದು ಅವನೇನೂ ಒಂಟಿಯಾಗುಳಿದಿರಲಿಲ್ಲ, ಕಟ್ಟಿಕೊಂಡ ಸಂಸಾರವಿತ್ತು. ಒಂದು.. ಎರಡು.. ಮೂರು ಮಕ್ಕಳು ಮನೆ ಬೆಳಗಿಕೊಂಡಿದ್ದರು, ಕಲಿತು ವಿದ್ಯಾವಂತರಾಗಿದ್ದರು. ಸದ್ಗುಣಿ, ಸುಶೀಲೆಯಾದ ಮಡದಿ ಅವನ ಬದುಕಿನುದ್ದದ ಹೊಣೆಗಾರಿಕೆ ಯನ್ನು ಕುಶಲತೆಯಿಂದ ಸಶಕ್ತಳಾಗಿ ಹಂಚಿಕೊಂಡಿದ್ದಳು. ಬದುಕು ಕೊಡಬೇಕಾಗಿರುವುದೆಲ್ಲವನ್ನೂ ನಿರ್ವಂಚನೆಯಿಂದ ಅವನಿಗೆ ಎತ್ತಿ ಎತ್ತಿ ಕೊಟ್ಟಿತ್ತು!

ಇದೀಗ ಅವರಿಬ್ಬರೂ ಎದುರುಬದುರಾಗಿ ನಿಂತಿದ್ದರು, ಪರಸ್ಪರ ತಗುಲಿಕೊಳ್ಳುವಷ್ಟು! ಬಿಸಿಯುಸಿರು ಒಬ್ಬರನ್ನೊಬ್ಬರು ಸುಟ್ಟುಬಿಡುವಷ್ಟು!

"ನನ್ನನ್ನು ಕ್ಷಮಿಸಿದ್ದೆಯಾ ಗೆಳೆಯಾ?" ಹಠಾತ್ತಾಗಿ ತನ್ನ ಬಣ್ಣ ಹಚ್ಚಿದ ಕಾಲುಗುರನ್ನು ನೋಡುತ್ತ ಅವಳು ಕೇಳಿದಳು. ಬೆಚ್ಚಿಬಿದ್ದನಾತ! ನಿಂತಂತೇ ಬೊಂಬೆಯಂತೆ ಮರಗಟ್ಟಿಹೋದ. ಆ ಕಲ್ಯಾಣಮಂಟಪ.. ಆ ಗುಜುಗುಟ್ಟುತ್ತಿದ್ದ ಜನಜಂಗುಳಿ... ಅವರ ಬಣ್ಣಬಣ್ಣದ ಜರತಾರಿ ದಿರುಸುಗಳು.. ತಾರಕಕ್ಕೇರಿದ್ದ ವಾದ್ಯಮೇಳ... ಯಾವುದರ ಸದ್ದೂ ಇಲ್ಲದೇ ಎಲ್ಲವೂ ತಟ್ಟನೆ ನಿಂತೇಹೋಯಿತು!

ಕಣ್ಣಮುಂದೆ ಅವಳು.. ಐವತ್ತು ವರ್ಷಗಳ ಸುದೀರ್ಘ ಅಪರಾಧದ ಸ್ಥಾಯೀಭಾವವನ್ನು ಹೊತ್ತು ನಿಂತಿದ್ದಾಳೆ! ಇಷ್ಟಕ್ಕೂ ಅವಳ ಅಪರಾಧವಾದರೂ ಏನು? ಮನಸ್ಸು ಐವತ್ತು ವರ್ಷಕ್ಕೂ ಹಿಂದಿನ ಅಧ್ಯಯನ ಕಾಲಕ್ಕೆ ಓಡಿ ಓಡಿ ಹೋಯಿತು.

ಅಪ್ಪ ತೀರಿಕೊಂಡಿದ್ದರು. ಅವನೋ ಹದಿನೈದು ವರ್ಷಕ್ಕೆ ಕಾಲಿರಿಸಿದ್ದನಷ್ಟೆ! ಕಣ್ಣಮುಂದೆ ಅಪ್ಪ ಆಸೆಯಿಂದ ರೂಢಿಸಿಟ್ಟ ವಿಶಾಲ ಗದ್ದೆಬಯಲುಗಳು, ದಟ್ಟ ಹಸಿರು ಕಾನನಗಳು. ತಾನು, ಅಮ್ಮ.. ಬಿಟ್ಟರೆ ಗದ್ದೆ ಕೆಲಸಗಳಿಗೆ ಬರುವ ಆಳುಕಾಳುಗಳಷ್ಟೆ. ಬೆಳಿಗ್ಗೆಯೆದ್ದು ಕೊಚ್ಚಲಕ್ಕಿ ಗಂಜಿ ಉಂಡು ಬುತ್ತಿ ಕಟ್ಟಿಕೊಂಡು ಪಕ್ಕದೂರಿನ ಪ್ರೌಢಶಾಲೆಗೆ ಹೋಗಿ ಬರೆದ ಮೆಟ್ರಿಕ್ ಪರೀಕ್ಷೆಯಲ್ಲಿ ಶಾಲೆಗೆ ಪ್ರಥಮನಾಗಿ ಬಂದಿದ್ದನ್ನು ನೀರಸಭಾವದಿಂದಲೇ ತಳ್ಳಿಕೊಂಡು ಕುಳಿತಿದ್ದ. ಸೋದರ ಸಂಬಂಧಿ ಯೊಬ್ಬರು ಮನೆಗೆ ಬಂದರು. ಹುಡುಗ ಬದಿಗೆ ಒತ್ತರಿಸಿಟ್ಟ ಮಾರ್ಕ್ಸ್ ಕಾರ್ಡ್ ನೋಡಿದರು. ತಾಲೂಕು ಪಟ್ಟಣದಲ್ಲಿ ಹೊಸದಾಗಿ ತೆರೆದ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇರಿಕೊಳ್ಳುತ್ತಿದ್ದವರಿಗೆ ಮನಸ್ಸು ಚುರುಗಟ್ಟಿತು. ಅಕ್ಕನನ್ನು ಒಪ್ಪಿಸಿ ಅವನನ್ನು ಕಾಲೇಜಿಗೆ ಸೇರಿಸಿದರು.

ಒಂದು ವರ್ಷದ ಪಿ.ಯು.ಸಿ. ಮುಗಿಯಿತು. ಅಲ್ಲಿಗೂ ಬಿಡದೇ ಪದವಿಗೂ ಸೇರಿಸಿಯೇಬಿಟ್ಟರು. ಅಂದು ಮೊದಲ ದಿನ. ತರಗತಿಯಲ್ಲಿ ಕುಳಿತವನಿಗೆ ಕಿಲಕಿಲ ನಗು ಕಿವಿಯಲ್ಲಿ ಗಲಗಲಿಸಿ ಬಂತು. ಜತೆಯಲ್ಲೇ ಆ ನಗುವಿನ ಒಡತಿಯೂ ಪ್ರವೇಶಿಸಿದಳು. ಅವಳ ನಗು, ಮಾತು, ಕೇಕೆಗಳು ಉಪನ್ಯಾಸಕರು ಬರುವತನಕವೂ ಮುಂದುವರಿದಿತ್ತು. ಮಾತ್ರವಲ್ಲ, ಮುಂದಿನ ಪೂರಾ ಮೂರು ವರ್ಷಗಳೂ ಆತನೆದೆಯನ್ನು ಬೆಚ್ಚಗಿಡುತ್ತಲೇ ಇದ್ದುವು. ಕೈ ಬೆರಳೆಣಿಕೆಯ ಆ ವಿದ್ಯಾರ್ಥಿ ವಿದ್ಯಾರ್ಥಿನಿ ಯರಲ್ಲಿ ಸ್ನೇಹ ಸೌಹಾರ್ದತೆಗಳೂ ಚೆನ್ನಾಗಿದ್ದು ಪರಸ್ಪರ ಮಿತ್ರತ್ವದಲ್ಲಿ ಒಡನಾಡಿಕೊಳ್ಳುತ್ತಲೇ ಮೂರು ವರ್ಷಗಳ, ಮುನ್ನೂರ ಅರವತ್ತೈದು ದಿನಗಳ ಮೂರು ಕಾಲಾವಧಿಯೂ ಅಪ್ಯಾಯಮಾನವಾಗಿ ಕಳೆಯುತ್ತಲೇ ಕೊನೆಯ ಕ್ಷಣಕ್ಕೆ ಕಾಲಿಟ್ಟಿತ್ತು. ತನ್ನ ಹಿಂಜರಿಕೆಯ ಮನಕ್ಕೆ ಹಾಗೂ ಹೀಗೂ ಧೈರ್ಯ ತುಂಬಿಕೊಳ್ಳುತ್ತಲೇ ನಿವೇದನೆಯೊಂದನ್ನು ಅವಳ ಮುಂದೆ ಪ್ರಸ್ತುತಪಡಿಸಿದ.

ಅವಳೋ ನಿಂತಿದ್ದಂತೇ ತಟಸ್ಥಳಾಗಿ ಬಿಟ್ಟಿದ್ದಳು, ಗುಡಿಯಲ್ಲಿನ ಚಲನವಿಲ್ಲದ ದೇವತಾಮೂರ್ತಿಯಂತೆ!

ಕೊನೆಯದಾಗಿ ಅವಳಿಂದ ಹೊರಗೆಬಿದ್ದ ಪದಗಳು ಇಷ್ಟೇ, "ನನ್ನನ್ನು ಕ್ಷಮಿಸಲಾರೆಯಾ ಗೆಳೆಯಾ? ನನಗೂ ಆಶೆ ಆಕಾಂಕ್ಷೆಗಳೆಂಬುದಿವೆ, ಅಭೀಪ್ಸೆ ಅಭೀಷ್ಟೆಗಳಿವೆ. ನಯಾಗರದ ಜಲಧಾರೆಯನ್ನು ಒಮ್ಮೆ ಮನಸ್ಸು ನೋಡಬಯಸಿದ್ದರೆ ಇನ್ನೊಮ್ಮೆ ಹವಾಯಿ ದ್ವೀಪದ ತೂಗುಬುಟ್ಟಿಯಲ್ಲಿ ಕುಳಿತು ಗಗನದಲ್ಲಿ ವಿಹರಿಸಬಯಸುತ್ತದೆ. ಈ ಕನಸುಗಳೋ ನೂರು ನೂರು! ಇರುವುದಾದರೂ ನಿನಗೇ ತಿಳಿದಂತೆ ಮೂರೇ ಮೂರು ದಿನಗಳ ಈವೊಂದು ಜನ್ಮ! ದಯವಿಟ್ಟು ನನ್ನನ್ನು ಕ್ಷಮಿಸಿಲಾರೆಯಾ ಗೆಳೆಯಾ?"

ಮತ್ತೊಮ್ಮೆ ಅವಳನ್ನು ದೃಷ್ಟಿಸದೆ ಅವನಲ್ಲಿಂದ ಹೊರಟು ಬಂದಿದ್ದ. ಕಾಲ ಐವತ್ತರ ಚಕ್ರವನ್ನು ಮುಗಿಸಿತ್ತು! ಈ ದೀರ್ಘ ಕಾಲಾವಧಿಯ ನಂತರ ಕಣ್ಮುಂದೆ ಬಂದು ಕಾಣಿಸಿದ ಅವಳು ಇದೀಗ ಕೇಳುತ್ತಿರುವುದಾದರೂ ಏನು? ಹಿಂದುಮುಂದಿಲ್ಲದೆ ತಾನಂದು ಮನಸ್ಸಿನಲ್ಲೇ ಪೋಷಿಸಿಕೊಂಡು ಬಂದ ಪ್ರೀತಿಗೆ ತನ್ನ ಅಮೂಲ್ಯ ಐವತ್ತು ವರ್ಷಗಳನ್ನೂ ಮುಡುಪಾಗಿರಿಸಿಕೊಂಡೇ ಕಳೆದು ಬಂದಳೇ? ಅವಳಲ್ಲಿ ನನ್ನ ನೆನಪು ಇನ್ನೂ ಹಸಿರಾಗಿಯೇ ಉಳಿದಿದೆಯೇ? ತಲೆ ಬಲವಾಗಿ ಕೊಡವಿಕೊಂಡರೂ ಮತ್ತೆ ಮತ್ತೆ ಅದದೇ ಪ್ರಶ್ನೆ!

ಅವಳೋ ಸಂಪೂರ್ಣ ತೃಪ್ತಳಂತೆ ಇಂದೂ ಕಿಲಕಿಲ ನಗುತ್ತ ನನ್ನೆದುರು ನಿಂತಿದ್ದಾಳೆ! ಅದೇ ಹುರುಪು... ಅದೇ ಹುಮ್ಮಸ್ಸು!' 'ನಿನ್ನನ್ನು ನಾನು ಖಂಡಿತ ಮರೆತಿಲ್ಲ! ಮರೆಯಲಾರೆ!' .ಎನ್ನುವ ಸ್ಥಾಯೀ ಭಾವ!

'ಸತ್ತಿಲ್ಲ, ಇನ್ನೂ ಜೀವಂತವಿದ್ದೇನೆ' ಎನ್ನುವ ಒಂದೇ ಕಾರಣಕ್ಕೆ ಅವನ ಬದುಕು ಮುಂದುವರಿದುಕೊಂಡು ಬಂದಿತ್ತು! ಮನಸ್ಸಿಗೆ ವಿರುದ್ಧವಾಗಿ ವರ್ತಿಸಿಕೊಂಡು ಬಂದ ಸಂದಿಗ್ಧತೆಗಳಲ್ಲೂ ಋಣಚಿಂತೆಗಳು ಕೈಹಿಡಿದು ಮುನ್ನಡೆಸಿದ್ದುವು; ತಲೆಯಲ್ಲಿ ಹೆಪ್ಪುಗಟ್ಟುತ್ತಿರುವ ಭಾವ ವೈಪರೀತ್ಯಗಳು ಪರಿಹಾರ ಕಾಣದಿದ್ದರೂ, ಸಹಜ ಕಾರ್ಯಸಫಲತೆಯನ್ನು ವೃತ್ತಿಕ್ಷೇತ್ರದಲ್ಲಿ ನೀಡಿದ್ದೂ ವಿಶೇಷವೇ ಆಗಿತ್ತು! ಕೊನೆಗೊಮ್ಮೆ ಈ ವಿಶೇಷ ದಿನ ಅವರಿಬ್ಬರೂ ಮುಖಾಮುಖಿಯಾದರು. ಐವತ್ತು ಸುದೀರ್ಘ ವರ್ಷಗಳ ಅಪರಾಧದ ಸಜೆಯ ಭಾರವನ್ನು ಹೊತ್ತು ಅವಳು ಅವನ ಮುಂದೆ ನಿಂತಿದ್ದಾಳೆ ಮತ್ತು ಅವನನ್ನು ಪ್ರಶ್ನಿಸುತ್ತಿದ್ದಾಳೆ. ಇಬ್ಬರ ಬದುಕೂ ಬೇರೆ ಬೇರೆ ಕವಲಿನಲ್ಲಿ ಪಯಣಿಸಿದರೂ ಅದರೊಳಗಿನ ಕುತೂಹಲ, ಸಂತೋಷ ಮೈತ್ರಿ ಕಾರುಣ್ಯಕ್ಕೆ ಏನೊಂದೂ ಕೊರತೆಯಾದಂತೆ ತೋರುತ್ತಿರಲಿಲ್ಲ! ಇಬ್ಬರೂ ಸಹನೆಯನ್ನು ಕಳೆದುಕೊಳ್ಳದೇ ಪಡೆದ ಜೀವನವನ್ನು ಯಥಾವತ್ತಾಗಿ ಸ್ವೀಕರಿಸಿದ್ದರು! ಇಬ್ಬರ ಬದುಕೂ ಪೂರ್ಣಗೊಂಡಿತ್ತು.

ಅಗಲಿ ಬಂದ ಅವನಲ್ಲಿ ಅಪೂರ್ವ ಸಮಾಧಾನ ಹಾಗೂ ನೆಮ್ಮದಿ ನಿಧಾನಕ್ಕೆ ಆವರಿಸಿಕೊಳ್ಳುತ್ತ ಬಂತು.

***

ಬಾಲ ಪ್ರಸಂಗ

ನೆನಪಿನ ಚೀಟಿ

– ರಾಧಿಕಾ ವಿ. ಗುಜ್ಜರ್

"ಚೋಟುದ್ದ ಇದಿಯಾ! ಇನ್ನೂ ಆರನೇ ಕ್ಲಾಸ್ ಅಷ್ಟೆ. ಆಗಲೇ ಮರೆತೆ ಅಂತೀಯ? ಹೋಂವರ್ಕ್ ಮಾಡದೆ ಬಂದ್ರೆ ನನ್ನ ಕ್ಲಾಸಲ್ಲಿ ಕೂತ್ಕೋಬೇಡ ಅಂತ ಎಷ್ಟು ಸಲ ಹೇಳಿಲ್ಲ ರಾಮಭದ್ರ. ಇದೊಂದು ಸಲ ಕ್ಷಮಿಸಿ ಮಿಸ್ ಅಂತೀಯ. ಇವತ್ತು ಪೂರ್ತಿ ಕ್ಲಾಸ್ ಬೋರ್ಡ್ ಪಕ್ಕ ಇಲ್ಲಿ ನಿಂತ್ಕೋ. ಹೀಗೆ ನಿಂತಿದ್ದೆ ಅಂತಾನಾದ್ರೂ ಹೋಂ ವರ್ಕ್ ಮಾಡೋದು ಜ್ಞಾಪಕ ಇರುತ್ತಾ ನೋಡೋಣ. ಇದೇ ನಿನ್ನ ಇವತ್ತಿನ ಪನಿಶ್ಮೆಂಟ್" ಎಂದು ವಿಜಯ ಟೀಚರ್ ತರಗತಿಯನ್ನು ಮುಂದುವರೆಸಿದರು. ವಿಜಯ ಮಿಸ್ ಅಂದ್ರೇನೆ ಬಹಳ ಶಿಸ್ತಿನವರು. ಅವರ ತರಗತಿಯಲ್ಲಿ ಒಂದು ವಿದ್ಯಾರ್ಥಿಯೂ ತುಟಿಕ್ಪಿಟಿಕ್ ಎನ್ನುವಂತಿರಲಿಲ್ಲ. ಒಂದೇ ಒಂದು ವಿದ್ಯಾರ್ಥಿಯೂ ಅವರು ಪಾಠ ಮಾಡುತ್ತಿದ್ದ ವಿಷಯದಲ್ಲಿ ಫೇಲ್ ಆಗುತ್ತಿರಲಿಲ್ಲ. ಅಷ್ಟು ಶ್ರದ್ಧೆ ಅವರಿಗೆ ತಮ್ಮ ವೃತ್ತಿಯಲ್ಲಿ.

ಮನೆಗೆ ಬಂದ ರಾಮಭದ್ರನ ಮುಖದ ಚಪ್ಪರ ಪೂರ್ತಿ ಬಾಡಿ ಬಾಗಿತ್ತು. ತಾತನಿಗೆ ಗೊತ್ತಾಗಿ ಹೋಯಿತು, ಶಾಲೆಯಲ್ಲಿ ಇಂದು ಏನೋ ಬೇಸರವಾಗುವಂತಹ ಘಟನೆ ನಡೆದಿದೆ ಎಂದು. ಊಟಕ್ಕೆ ಅಮ್ಮ ಹಾಕಿದ ತನ್ನಿಷ್ಟದ ದೋಸೆ-ಬೆಲ್ಲದ ಕಾಯಿರಸವನ್ನು ಸಹ ಸಪ್ಪೆ ಏನೋ ಎನ್ನುವಂತೆ ಮುಗಿಸಿದ. ತಿಂದು ಕೊಂಚ ಉತ್ಸಾಹಗೊಂಡನಾದರೂ ಮುಖ ಮಾತ್ರ ಈಗಷ್ಟೇ ಸೊಪ್ಪಿಗೆ ನೀರು ಚಿಮುಕಿಸಿದಂತೆ ಜೋತು ಬಿದ್ದಿತ್ತು. ಅಂದು ಆಟಕ್ಕೂ ಹೋಗಿರಲಿಲ್ಲ. ಅಮ್ಮ ನೆನಪಿನಿಂದ ಅವನಿಗೆ ಹೊಟ್ಟೆ ಹುಳದ ಮಾತ್ರೆ ನುಂಗಿಸಿದರು.

"ರಾತ್ರಿ ನಾನು ನುಂಗಿಸಲು ಬರುವ ಹೊತ್ತಿಗೆ ನಿದ್ದೆ ಹೋಗ್ಬಿಟ್ಟಿರ್ತೀಯ. ಅದಕ್ಕೆ ಈಗಲೇ ನುಂಗಿಸಿದ್ದು" ಎಂದರು.

"ಅಮ್ಮ ಅವತ್ತೇ ಒಂದು ಟ್ಯಾಬ್ಲೆಟ್ ನುಂಗಿದ್ದೆ ಅಲ್ವಾ? ಮತ್ತೆ ಯಾಕೆ?" ಎಂದು ಕೇಳಿದ ರಾಮಭದ್ರ.

"ಹದಿನೈದು ದಿನ ಆಯ್ತು ಕಂದ. ಈ ಮಾತ್ರೆಯನ್ನ ಆರು ತಿಂಗಳಿಗೊಮ್ಮೆ ತೆಗೆದುಕೊಳ್ಳಬೇಕು. ಇದು ಎರಡು ಡೋಸ್ ಇರುತ್ತೆ ಅಂತ ಗೊತ್ತು ತಾನೆ? ಅವತ್ತು ಒಂದು ನುಂಗಿದ್ದೆ. ಇವತ್ತು ಒಂದು ನುಂಗಿದೆ. ಅಲ್ಲಿಗೆ ಡೋಸ್ ಪೂರ್ತಿಯಾಯಿತು ಅಲ್ವಾ? ಹದಿನೈದು ದಿನಗಳ ನಂತರ ಮತ್ತೊಂದು ನುಂಗಬೇಕು ಅನ್ನೋದನ್ನ ಮರ್ತ್ಯಾ?" ಎಂದರು ಅಮ್ಮ.

"ಆದ್ರೆ ಅಮ್ಮ ನಿಂಗೆ ಹ್ಯಾಗೆ ಜ್ಞಾಪಕ ಇರುತ್ತೆ?" ಕೇಳಿದ.

"ಫ್ರಿಡ್ಜ್ ಮೇಲೆ ಚೀಟಿ ಅಂಟಿಸಿ ಇಟ್ಟಿದ್ದೀನಲ್ಲ. ನೋಡಿಲ್ವಾ! ಇಲ್ಲಾಂದ್ರೆ ನಾನು ಸಹ ಕೆಲವೊಮ್ಮೆ ಮರೆತುಹೋಗ್ತೀನಿ ಕಂದ" ಎಂದು ಒಣಗಿದ್ದ ಬಟ್ಟೆ ತರಲು ಅಮ್ಮ ತಾರಸಿಗೆ ಹೊರಟರು.

ರಾಮಭದ್ರ ಫ್ರಿಡ್ಜ್ ಬಳಿಗೆ ಬಂದು ಚೀಟಿಗಳನ್ನು ನೋಡಲಾರಂಭಿಸಿದ. ಅಲ್ಲಿ ಎಲ್ಲರ ಔಷಧಗಳ ಜ್ಞಾಪಕ ಚೀಟಿ, ಹಾಲಿನ ಲೆಕ್ಕದ ಸ್ಲಿಪ್, ಮನೆ ಕೆಲಸದ ಆಂಟಿಗೆ ನೀಡಿದ ಅಡ್ವಾನ್ಸ್ ಲೆಕ್ಕ, ತಾತನ ಬ್ಲಡ್ ಟೆಸ್ಟ್ ಮಾಡಿಸುವ ಮುಂದಿನ ತಾರೀಕು, ಗ್ಯಾಸ್ ಬುಕಿಂಗ್ ದಿನಾಂಕ, ಕೆಲವು ಮುಖ್ಯ ಫೋನ್ ನಂಬರ್ ಹೀಗೆ ಮ್ಯಾಗ್ನೆಟ್ ನಿಂದ ಚೀಟಿಗಳನ್ನು ಅಮ್ಮ ಸಿಕ್ಕಿಸಿದ್ದಳು.

ತಾತನ ಬಳಿ ಬಂದವನೇ, "ತಾತ ನಿಮಗೆ ಎಲ್ಲಾ ಜ್ಞಾಪಕ ಇರುತ್ತಾ? ಅಮ್ಮ ನೋಡಿ ಅಲ್ಲಿ ಚೀಟಿ ಹಾಕಿ ತನ್ನ ಕೆಲಸ ಮರೆಯದ ಹಾಗೆ ಸಿಸ್ಟಮ್ ಮಾಡಿಕೊಂಡಿದ್ದಾಳೆ" ಎಂದು ಕೇಳಿದ. ಶಾಲೆಯಲ್ಲಿ ಹೋಂವರ್ಕ್ ಮರೆತುಹೋಗಿದ್ದರಿಂದ

ಅಂದು ಆದ ಅವಮಾನವನ್ನು ತಾತನಿಗೆ ಹೇಳಿ, "ತಾತ ನಾನು ಯಾವತ್ತೂ ಹೋಂವರ್ಕ್ ಮರೆಯುವುದಿಲ್ಲ. ನಿಮಗೆ ಗೊತ್ತು ತಾನೇ, ನಾನು ಗುಡ್ ಬಾಯ್ ಅಂತ? ಆದರೂ ಒಮ್ಮೊಮ್ಮೆ..." ಎಂದು ಮತ್ತೆ ಮುಖ ಕೆಳಗೆ ಹಾಕಿ ಸಪ್ಪಗಾದ. ತಾತನಿಗೆ ಆತನ ಹೆಚ್ಚುತ್ತಿರುವ ಓದಿನ ವಿಷಯಗಳಿಂದಾಗಿ ಉಂಟಾಗುತ್ತಿರುವ ಒತ್ತಡ, ಗೊಂದಲಗಳು ಅರ್ಥವಾಯಿತು. ಆಟದ ವಯಸ್ಸಿನ ಮಗುವಿಗೆ ಓದಿನ ಕಡೆಯ, ಹೆಚ್ಚಿದ ಭಾರದ ಬಗ್ಗೆ ಗಮನ ನೀಡಲು ಹೇಳಬೇಕೆನಿಸಿತು. ತನ್ನ ಕೆಲಸದ ಜವಾಬ್ದಾರಿಯನ್ನು ತಾನೇ ನಿಭಾಯಿಸಬೇಕು ಎಂಬುದನ್ನು ಆತನಿಗೆ ಕಲಿಸಲೇಬೇಕು ಅಲ್ವಾ.

ಮೊಮ್ಮಗನನ್ನು ಕರೆದು "ರಾಮಭದ್ರಾ, ನಾನು ಮೇಜಿನ ಡ್ರಾನಲ್ಲಿ ಡೈರಿ ಇಟ್ಟಿದ್ದೇನೆ ನೋಡು. ಅದನ್ನು ತಾ" ಎಂದು ಹೇಳಿ ತರಿಸಿಕೊಂಡು, ಡೈರಿಯಲ್ಲಿ ಬರೆದಿಟ್ಟುಕೊಂಡಿದ್ದ ತಮ್ಮ ಇನ್ಸೂರೆನ್ಸ್ ವಿವರಗಳು, ಬ್ಯಾಂಕ್ ಅಕೌಂಟ್ ವಿವರಗಳು, ವೈದ್ಯರ ಭೇಟಿಯ ದಿನಾಂಕ ಹಾಗೂ ವಿವರಗಳು, ಮುಖ್ಯ ಫೋನ್ ನಂಬರುಗಳು, ಸಂಬಂಧಿಗಳ ವಿಳಾಸ ಹಾಗೂ ಫೋನ್ ನಂಬರ್, ಎಟಿಎಂ ಕಾರ್ಡ್/ಜಿಮೇಲ್/ಮೊಬೈಲ್/ಇಂಟರ್ನೆಟ್ ಮುಂತಾದವುಗಳ ಪಾಸ್‌ವರ್ಡ್‌ಗಳು ಹೀಗೆ ಎಲ್ಲಾ ಪ್ರಮುಖ ವಿಷಯಗಳ ಗುರುತು ತೋರಿಸಿ,

"ನೀನು ಸಹ ಹೀಗೆ ಒಂದು ಪುಟ್ಟ ಪುಸ್ತಕ ಮಾಡಿ ದಿನವೂ ನೆನಪಿಟ್ಟುಕೊಳ್ಳಬೇಕಾದ ವಿಷಯಗಳನ್ನು ಬರೆದಿಡಲು ಅಭ್ಯಾಸ ಮಾಡಿಕೋ. ಇನ್ನೊಂದು ವರ್ಷ ಅಷ್ಟೇ, ಹೈಸ್ಕೂಲಿಗೆ ಹೋಗುತ್ತೀಯಾ. ಆಗ ಶಾಲೆಯವರೇ ಶಾಲೆಯ ಡೈರಿ ನೀಡುತ್ತಾರೆ. ಅಲ್ಲಿಯವರೆಗೂ ಹೀಗೆ ನೀನೇ ವಿಷಯಗಳನ್ನು ಗುರುತಿಟ್ಟು ಬರೆದುಕೊಂಡು ಅಭ್ಯಾಸ ಮಾಡಿಕೋ" ಎಂದು ತಿಳಿಸಿ ಹೇಳಿದರು. ನೆನಪಿನ ಚೀಟಿ ಬರೆಯುತ್ತಿದ್ದ ಅಮ್ಮ ಹಾಗೂ ಡೈರಿ ಬರೆಯುತ್ತಿದ್ದ ತಾತನಿಂದ ಕಲಿತ ಪಾಠವನ್ನು ರಾಮಭದ್ರನು ಅಂದು ಅಪ್ಪನಿಗೂ ಹೇಳಿದ.

"ನಾನು ತಾತನಿಂದಲೇ ಇದನ್ನೆಲ್ಲಾ ಕಲಿತದ್ದು ರಾಮಭದ್ರ. ಇಂದು ಒಂದು ಒಳ್ಳೆಯ ವಿಷಯ ಕಲಿತೆ ಕಂದ" ಎಂದು ಅಪ್ಪ ಸಂತೋಷದಿಂದ ಆತನ ತಲೆ ಸವರಿದರು. ಅಂಗೈಗೆ ಕೆಂಪು ಬಾಲ್ ಪೆನ್ನಿನಿಂದ ಐದು ನಕ್ಷತ್ರಗಳನ್ನು ಬರೆದು ಮೆಚ್ಚುಗೆ ಸೂಚಿಸಿದರು. ರಾಮಭದ್ರನು, "ಅಪ್ಪ ಫೈವ್ ಸ್ಟಾರ್ ಕೊಟ್ಟರು" ಎಂದು ಸಂತೋಷದಿಂದ ಕುಣಿದಾಡುತ್ತಾ ನಳನಳಿಸುವ ಎಳೆಯ ಸಸಿಯಂತೆ ತಾತನಿಗೆ ಹಾಗೂ ಅಮ್ಮನಿಗೆ ಕೈ ತೋರಿಸಲು ಓಡಿದ. ಆತನಿಗೆ ಗುಡ್ ಬಾಯ್ ಆಗುವ ಉಪಾಯ ಕಲಿತಿದ್ದರಿಂದ ಆನಂದವಾಗಿತ್ತು.

***



ಹಾನ್ಲೇ – ಲಡಾಖ್‌ನ ಒಂದು ವಿಸ್ಮಯ ಕಣಿವೆ

– ಗುರುರಾಜ ಶಾಸ್ತ್ರಿ

ಏಳು ಸುತ್ತಿನ ಕೋಟೆಯಂತೆ ನೂರಾರು ಎತ್ತರದ ಪರ್ವತಗಳ ಮಧ್ಯದಲ್ಲಿ ಸಮುದ್ರ ಮಟ್ಟಕ್ಕಿಂತ 14000 ಅಡಿ ಎತ್ತರದಲ್ಲಿ ಸುರಕ್ಷಿತವಾಗಿರುವ ಹಸಿರು ಕಣಿವೆಯೇ ಹಾನ್ಲೇ. ಲೇಹ್ ವಿಮಾನ ನಿಲ್ದಾಣದಿಂದ ಸುಮಾರು 300 ಕಿಲೋಮೀಟರ್ ದೂರದಲ್ಲಿ ಭಾರತ ಚೀನಾ ಗಡಿಯ ಹತ್ತಿರ ಇರುವ ಹಾನ್ಲೇ ಸಾಮಾನ್ಯ ಪ್ರವಾಸಿಗರಿಗೆ ಹೆಚ್ಚೇನೂ ಪರಿಚಯವಿರುವುದಿಲ್ಲ. ಹಾನ್ಲೇ ಎಂಬುದು ಇಲ್ಲಿ ಕಣಿವೆಯಲ್ಲಿ ಹರಿಯುವ ನದಿಯ ಹೆಸರೂ ಆಗಿದೆ. ಊರಿಗೆ ಪ್ರವಾಸಿಗರನ್ನು ಸ್ವಾಗತ ಕೋರುವಂತೆ ಆರಂಭದಲ್ಲೇ ಚಿಕ್ಕದಾದ ಗುಡ್ಡದ ಮೇಲೆ ಬುದ್ಧನ ದೇವಾಲಯ (Tibetian Monestry) ಇದೆ. ಸೌಂದರ್ಯ ಚಿಲುಮೆಯಂತಿರುವ ಪ್ರಕೃತಿಯನ್ನು ಹೊಂದಿದ್ದರೂ ಈ ಹಾನ್ಲೇ ವಿಶೇಷವಾಗಿರುವುದು ಬೇರೆ ವಿಷಯಗಳಿಗೆ. ಪಕ್ಷಿ ಹಾಗೂ ವನ್ಯಜೀವಿ ವೀಕ್ಷಕರು, ಮೋಜಿಗೆ ಮೋಟಾರ್‌ಬೈಕ್ ಓಡಿಸುವವರು ಹಾಗೂ ನಕ್ಷತ್ರ ಅಥವಾ ಬಾಹ್ಯಾಕಾಶ ವೀಕ್ಷಕರು, ಇವರಿಗಷ್ಟೇ ಹೆಚ್ಚು ಪರಚಯವಿರುತ್ತದೆ ಈ ಹಾನ್ಲೇ.

ಬೈಕ್ ಸವಾರರ ಮೋಜು

ಲೇಹ್ ಇಂದ ಹಾನ್ಲೇಗೆ ನೀವು ಸಂಚರಿಸುತ್ತಿದ್ದಾಗ ಪ್ರತಿ 30 ನಿಮಿಷದಲ್ಲಿ ಒಬ್ಬ ಮೋಟಾರ್ ಬೈಕ್ ಓಡಿಸುವವ ದಾರಿಯಲ್ಲಿ ಸಿಗಲಿಲ್ಲ ಅಂದರೆ ನೀವು ದಾರಿ ತಪ್ಪಿದ್ದೀರಿ ಎಂದರ್ಥ. ದೊಡ್ಡ ದೊಡ್ಡ ಪರ್ವತಗಳ ಪಕ್ಕದ ರಸ್ತೆಗಳಲ್ಲಿ ಬೈಕ್ ಓಡಿಸುವುದೇ ಒಂದು ಮಜಾ ಬಿಡಿ. ಆದರೆ ಕೆಲವೊಂದು ಕಡೆ ಅಷ್ಟೇ ಅಪಾಯದ ಹಾದಿಗಳೂ ಇವೆ. ಮೋಟಾರ್ ಗಾಡಿಗಳನ್ನು ಓಡಿಸಬಲ್ಲ ಜಗತ್ತಿನ ಅತಿ ಎತ್ತರದ ರಸ್ತೆ ಅಂದರೆ ಸಮುದ್ರ ಮಟ್ಟಕ್ಕಿಂತ ಸುಮಾರು 19000 ಅಡಿ ಎತ್ತರದಲ್ಲಿರುವ ಉಮಿಂಗ್ ಲಾ ಎಂಬುದು ಈ ಹಾನ್ಲೇ ಹತ್ತಿರವೇ ಇರುವುದು. ಈ ಉಮಿಂಗ್ ಲಾಗೆ ಮೋಟಾರ್ ಬೈಕಿನಲ್ಲಿ ಹೋಗಿ ಅಲ್ಲಿ ಒಂದು ಫೋಟೋ



ಅಥವಾ ಸೆಲ್ಫಿ ತೆಗೆದುಕೊಂಡು ಗೆಳೆಯರೊಂದಿಗೆ ಹಂಚಿಕೊಂಡರೆ ಜೀವನದಲ್ಲಿ ಏನೋ ಸಾಧನೆ ಮಾಡಿದಂತೆ. ಈ ಉಮಿಂಗ್ ಲಾ, ಲಡಾಕ್‌ಗೆ ಹೋಗುವ ಪ್ರತಿಯೊಬ್ಬ ಬೈಕ್ ಸವಾರನ ಗುರಿಯಾಗಿರುತ್ತದೆ. ಅಂತಹ ಬೈಕ್ ಸವಾರರು ಹಾನ್ಲೇಗೆ ಸಂಜೆಗೇ ಬಂದು ರಾತ್ರಿ ಹೋಂ ಸ್ಟೇಯಲ್ಲಿ ವಿಶ್ರಾಂತಿ ಪಡೆದು ಮಾರನೇದಿನ ಬೆಳಗಿನ ಜಾವ ಉಮಿಂಗ್ ಲಾ ಕಡೆಗೆ ಬೈಕ್ ಸವಾರಿ ಆರಂಭಿಸುತ್ತಾರೆ. ಬೆಳಿಗ್ಗೆ ಐದು ಗಂಟೆಗೆ ಹಾನ್ಲೇಯಿಂದ ಹೊರಟರೆ, ಹವಾಮಾನವೆಲ್ಲಾ ಸರಿಯಾಗಿದ್ದರೆ ಅವರು ಅಂದು ಸಂಜೆ ಐದು ಗಂಟೆಯ ಒಳಗೆ ಮತ್ತೆ ಹಾನ್ಲೇಗೆ ವಾಪಸ್ ಬರಬಹುದು.



ಪಕ್ಷಿ ಹಾಗೂ ವನ್ಯಜೀವಿ ವೀಕ್ಷಕರು

ಪಲಾಸ್ ಬೆಕ್ಕು ಹಾಗೂ ಜಿಂಕೆಯಂತೆ ಕಾಣುವ ಟಿಬೇಟಿಯನ್ ಗಿಜೆಲ್ ಇಲ್ಲಿಯ ಮುಖ್ಯವಾದ ಆಕರ್ಷಣೆ. ಹಾಗಂತ ಸುಲಭವಾಗಿ ಇವು ವೀಕ್ಷಣೆಗೆ ಸಿಗುತ್ತವೆ ಅಂದುಕೊಳ್ಳಬೇಡಿ. ಇಲ್ಲಿನ ಸ್ಥಳೀಯ ಮಾರ್ಗದರ್ಶಿಗಳ (ಗೈಡ್) ಸಹಾಯಪಡೆದು ವಾರಗಟ್ಟಲೆ ಹುಡುಕಿದರೂ ಸಿಗುವುದಿಲ್ಲ. ಇನ್ನು ಕುದುರೆಯಷ್ಟು ಎತ್ತರದ ಕಾಡು ಕತ್ತೆಗಳಂತೂ ನೋಡಿದಲ್ಲೆಲ್ಲಾ ಸಿಗುತ್ತವೆ. ಪಕ್ಷಿಪ್ರಿಯರಿಗೆ ಕಪ್ಪು ಕುತ್ತಿಗೆಯ ಕೊಕ್ಕರೆ (Black Necked Crane) ಹೆಚ್ಚಾಗಿ ಕಂಡರೆ, ಅಷ್ಟೇನೂ ಬಣ್ಣವಿಲ್ಲದಿದ್ದರೂ ಪ್ರಪಂಚದಾದ್ಯಂತ ಕಷ್ಟಪಟ್ಟು ಹುಡುಕಬೇಕಾದ ಕೆಲವೊಂದು ಪಕ್ಷಿಗಳು ಇಲ್ಲಿ ಸುಲಭವಾಗಿ ಕಾಣಸಿಗುತ್ತವೆ.

ನಕ್ಷತ್ರ ವೀಕ್ಷಣೆ

ಹಾನ್ಲೇಗೆ ಬರುವ ಪ್ರವಾಸಿಗರಲ್ಲಿ ಶೇಕಡ ಮೂವತ್ತರಷ್ಟು ಜನ ಬೈಕ್ ಸವಾರಿಗೆ ಬಂದರೆ, ಶೇಕಡ ಹತ್ತರಷ್ಟು ಜನ ಪಕ್ಷಿ ವೀಕ್ಷಣೆಗೆ ಬರುತ್ತಾರೆ. ಉಳಿದ ಶೇಕಡ ಅರವತ್ತರಷ್ಟು ಪ್ರವಾಸಿಗರು ಇಲ್ಲಿಗೆ ಬರುವುದು ನಕ್ಷತ್ರ ವೀಕ್ಷಣೆಗೆ. ಸುತ್ತಲೂ ಎತ್ತರದ ಪರ್ವತಗಳಿಂದ ಕೂಡಿರುವುದರಿಂದ, ಹೊರಗಿನ ಯಾವುದೇ ಕೃತಕ ಬೆಳಕು ಹಾನ್ಲೇಗೆ ಪ್ರವೇಶಿಸುವುದಿಲ್ಲ. ಅಷ್ಟೇ ಅಲ್ಲದೆ ವರ್ಷಕ್ಕೆ ಸುಮಾರು 300 ದಿನ ತಿಳಿಯಾದ ನೀಲಿ ಆಕಾಶ ಇಲ್ಲಿ ಸಿಗುತ್ತದೆ. ಇವೆರಡೂ ನಕ್ಷತ್ರ ವೀಕ್ಷಕರಿಗೆ ಸುಗ್ಗಿ ಇದ್ದಂತೆ.

ರಾತ್ರಿಯಾದರೆ ಸಾಕು, ಊರಿನ ವಿದ್ಯುತ್ ಸಂಪರ್ಕ ಕಡಿಯಲಾಗುತ್ತದೆ, ಎಲ್ಲಾ ಮನೆ ಮತ್ತು ಹೋಂ ಸ್ಟೇಗಳ ಯುಪಿಎಸ್ ಬಳಸಿ ಬರುವ ದೀಪಗಳನ್ನೂ ಕಡ್ಡಾಯವಾಗಿ ಆರಿಸುತ್ತಾರೆ. ಗದ್ದೆ ಗಳಲ್ಲಿ, ಹೋಂಸ್ಟೇಗಳ ತಾರ್ಸಿಯ ಮೇಲೆ, ರಸ್ತೆಗಳಲ್ಲಿ ನಕ್ಷತ್ರ ವೀಕ್ಷಕರು ತಮ್ಮ ದುಬಾರಿಯಾದ ಕ್ಯಾಮೆರಾ, ಮೊಬೈಲ್, ಚಿಕ್ಕ ಟೆಲಿಸ್ಕೋಪ್ ಹಾಗೂ ಟ್ರೈಪಾಡ್ ಗಳೊಂದಿಗೆ ಬಿಡಾರ ಹೂಡುತ್ತಾರೆ. ಊರಿಗೆ ಊರೇ ರಾತ್ರಿಯ ಹೊತ್ತು ಕತ್ತಲೆಯ ಕಾಡಾದರೆ, ಇಲ್ಲಿನ ಆಕಾಶ ಮಾತ್ರ ನಕ್ಷತ್ರಗಳ ಬೆಳಕಿನ ಸಾಮ್ರಾಜ್ಯವಾಗುತ್ತದೆ. ಸುಮಾರು ಹತ್ತರಿಂದ ಹದಿನೈದು ನಿಮಿಷ ನಮ್ಮ ಕ್ಯಾಮೆರಾ ತರೆದಿಟ್ಟರೆ (long exposure) ನಕ್ಷತ್ರ ಲೋಕದ ಜೊತೆಗೆ ಕ್ಷೀರಪಥ ಅಂದರೆ milky way ಚಿತ್ರ ಕೂಡ ಸೆರೆಹಿಡಿಯಬಹುದು

ಸುತ್ತಲೂ ಎತ್ತರದ ಪರ್ವತಗಳಿರುವ ಈ ಕಣಿವೆಯಲ್ಲೊಂದು ಪುಟ್ಟ ಬೆಟ್ಟ, ಆ ಬೆಟ್ಟದ ಮೇಲೆ ಭಾರತ ಸರ್ಕಾರದ ಖಗೋಳಶಾಸ್ತ್ರದ ವಿಭಾಗವು ವೀಕ್ಷಣಾಲಯವನ್ನು ಸ್ಥಾಪಿಸಿದೆ. ಇದು ಜಗತ್ತಿನಲ್ಲೇ ಹತ್ತನೇ ಎತ್ತರದ ವೀಕ್ಷಣಾಲಯವಾಗಿದೆ ಮತ್ತು "ಹಿಮಾಲಯದ ಚಂದ್ರ" ಎಂದು ಕರೆಯುವ ಇಲ್ಲಿನ ಟೆಲಿಸ್ಕೋಪ್ ಜಗತ್ತಿನ ಎರಡನೇ ದೊಡ್ಡ ಟೆಲಿಸ್ಕೋಪ್ ಆಗಿದೆ. ಹಾಗಾದರೆ ಇಲ್ಲಿಂದಲೇ ನಕ್ಷತ್ರವನ್ನೆಲ್ಲಾ ನೋಡಬಹುದಿತ್ತಲ್ಲವೇ, ರಸ್ತೆಯಲ್ಲಿ ಯಾಕೆ ಕೂಡುತ್ತಾರೆ ಪ್ರವಾಸಿಗರು ಎಂದು ಯೋಚಿಸುತ್ತಿದ್ದೀರಾ. ಆದರೆ ಈ ವೀಕ್ಷಣಾಲಯದ ಪೂರ್ತಿ ನಿಯಂತ್ರಣ ಬೆಂಗಳೂರಿನಿಂದ ಆಗುತ್ತಿದ್ದು, ವೀಕ್ಷಣಾಲಯದಲ್ಲಿ ನಾವು ಟೆಲಿಸ್ಕೋಪ್ ನೋಡಬಹುದೇ ಹೊರತು ಅದರ ಮೂಲಕ ಆಕಾಶ ಅಥವಾ ನಕ್ಷತ್ರ ಮಂಡಲವನ್ನಲ್ಲ.

ಇತ್ತೀಚಿನ ದಿನಗಳಲ್ಲಿ ಇಲ್ಲಿಗೆ ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗುತ್ತಿದ್ದು, ಅದಕ್ಕೆ ಅನುಗುಣವಾಗಿ ಇಲ್ಲಿ ಹೆಚ್ಚು ಹೆಚ್ಚು ಹೋಮ್‌ಸ್ಟೇಗಳು ಆರಂಭವಾಗುತ್ತಿವೆ. ಪ್ರವಾಸೋಧ್ಯಮದ ಹೆಸರಲ್ಲಿ ಊರಿನ ಮೂಲ ವಿಶೇಷ ಹಾಗೂ ವಿಸ್ಮಯಗಳು ಕಾಣೆಯಾಗಬಹುದೇ ಎಂಬ ಆತಂಕ ನನ್ನ ಮನಸ್ಸಿನಲ್ಲಿ ಮೂಡಿದ್ದಂತೂ ಸತ್ಯ.

ಪ್ರತಿ ವರ್ಷ ಜೂನ್ ಜುಲೈ ತಿಂಗಳುಗಳು ಹಾನ್ಲೇ ಪ್ರವಾಸ ಮಾಡಲು ಸೂಕ್ತ ಸಮಯ. ಲೇಹ್‌ನಿಂದಲೇ ಟ್ಯಾಕ್ಸಿ ವ್ಯವಸ್ಥೆ ಮಾಡಿಕೊಳ್ಳಬೇಕಾಗುತ್ತದೆ. ಇದೇ 2025ರ ಜುಲೈ ತಿಂಗಳಲ್ಲಿ ನಾನು ನನ್ನ ಪಕ್ಷಿವೀಕ್ಷಕ ಗೆಳೆಯರೊಂದಿಗೆ ಲಡಾಖ್ ಪ್ರವಾಸಕ್ಕೆ ಹೋಗಿದ್ದರಿಂದ , ಹಾನ್ಲೇ ನೋಡುವ ಅವಕಾಶ ಸಿಕ್ಕಿತು.



ನನ್ನ ಪ್ರವಾಸಗಳಲ್ಲಿ ಪಕ್ಷಿ ವೀಕ್ಷಣೆ ಒಂದು ನೆಪವಷ್ಟೆ. ಸಾಮಾನ್ಯ ಪ್ರವಾಸಿಗರು ಭೇಟಿಕೊಡದೆ ಇರುವ ಕೆಲವು ವಿಶೇಷ ಊರು ಹಾಗೂ ಸ್ಥಳಗಳಿಗೆ ಈ ಪಕ್ಷಿ ವೀಕ್ಷಕರು ಮಾತ್ರ ಹೋಗುವುದರಿಂದ ಅಂತ ಸ್ಥಳಗಳನ್ನೇ ನೋಡುವ ಹಾಗೂ ಆ ಪರಿಸರವನ್ನು ಆಹ್ಲಾದಿಸುವ ಹಾಗೂ ಅನುಭವಿಸುವ ಆಸಕ್ತಿ ನನ್ನದು. ಹೀಗಾಗಿ ಛಾಯಾಗ್ರಹಣದಲ್ಲಿ ನಾನು ಸ್ವಲ್ಪ ಹಿಂದೆಯೇ. ನಾನು ತೆಗೆದ ಕೆಲವೊಂದು ಫೋಟೋಗಳನ್ನು ಈ ಲೇಖನದ ಜೊತೆ ಹಂಚಿಕೊಂಡಿದ್ದೇನೆ.

ಪಲಾಸ್ ಬೆಕ್ಕು ಬಿಟ್ಟು ಹಾನ್ಲೇಯಲ್ಲಿ ಸಿಗುವ ಉಳಿದೆಲ್ಲಾ ಪಕ್ಷಿ ಹಾಗೂ ವನ್ಯಜೀವಿಗಳನ್ನು ವೀಕ್ಷಿಸಲು ನನಗೆ ಸಾಧ್ಯವಾಯಿತು. ಅಲ್ಲಿ ತಂಗಿದ್ದ ಮೂರು ದಿನವೂ ಮೋಡ ಕವಿದಿದ್ದು ನಕತ್ರ ವೀಕ್ಷಣೆ ನನಗೆ ಮರೀಚಿಕೆಯಾಯಿತು. ವರ್ಷದಲ್ಲಿ ಮುನ್ನೂರು ದಿನಗಳು ತಿಳಿಯಾದ ನೀಲಿ ಆಕಾಶವಿರುವ ಈ ಹಾನ್ಲೇಯಿಂದ ನಕ್ಷತ್ರ ವೀಕ್ಷಣೆ ಮಾಡುವ ಅದೃಷ್ಟ ನಮ್ಮ ಗುಂಪಿಗೆ ನಾವು ಭೇಟಿಮಾಡಿದ ಸಮಯದಲ್ಲಿ ಸಿಗಲಿಲ್ಲವಷ್ಟೆ.



ಪ್ರವಾಸೋದ್ಯಮವೇ ಮುಖ್ಯ ಆದಾಯವಾಗಿರುವ ಈ ಹಾನ್ಲೇ ಊರಿನ ಹೋಮ್ ಸ್ಟೇಗಳಲ್ಲಿನ ಆತಿಥ್ಯ ಹಾಗೂ ನಿರ್ವಹಣೆ ಖಂಡಿತವಾಗಿಯೂ ಶ್ಲಾಘನೀಯ.

ಮುಂದಿನ ದಿನಗಳಲ್ಲಿ ಲಡಾಕ್ ಪ್ರವಾಸ ಕೈಗೊಂಡರೆ ಹಾನ್ಲೇ ಊರನ್ನು ಪಟ್ಟಿಗೆ ಸೇರಿಸುವುದನ್ನು ಮರೆಯಬೇಡಿ. ಲೇಖನದ ಮೂಲಕ ನಾವು ಹಾನ್ಲೆಯನ್ನು ಶೇಕಡ 50ರಷ್ಟು ವರ್ಣಿಸಬಹುದು, ಉಳಿದದ್ದು ಸ್ವಾನುಭವವಾಗಬೇಕು.

***

ಕವನದ ಬಗ್ಗೆ

ಡಾ. ದ.ರಾ. ಬೇಂದ್ರೆಯವರ ಕವನ

'ಮುದುಕಿ'

- ಡಾ. ಸತ್ಯವತಿ ಮೂರ್ತಿ

ನನ್ನ ಪ್ರಸ್ತುತಿಗೆ ಇಂದು ನಾನು ಆಯ್ದುಕೊಂಡಿರುವುದು ಡಾ. ದ.ರಾ.ಬೇಂದ್ರೆಯವರು ಬರೆದಿರುವ ನಿರಾಭರಣ ಸುಂದರಿಯಿಂದ ಆಯ್ದ "ಮುದುಕಿ" ಕವನ. ಎಂಟು ಸಾಲಿನ ಈ ಚಿಕ್ಕ ಕವನದಲ್ಲಿ ಬೇಂದ್ರೆಯವರು ತಿಳಿಸಿರುವ ಗಹನವಾದ ಅರ್ಥವನ್ನು ಹೆಕ್ಕುವ ಪ್ರಯತ್ನ ನನ್ನದು.

"ಮುದುಕಿ"
ನಾಡ ಸಂರಕ್ಷಣೆಗೆ ತೋಪು ಇರದಿರಲು
ನಾಡಿಗೊಂದಿರಬೇಕು ಬಯ್ಯುವಾ ಮುದುಕಿ

ಊರ ಸಂರಕ್ಷಣೆಗೆ ನಾಯಿ ಇಲ್ಲದಿರಲು
ಊರಿಗೊಂದಿರಬೇಕು ಬಾಯ್ಬಡುಕ ಮುದುಕಿ

ಕೇರಿಯನ್ನೆಚ್ಚರಿಸೆ ಗಂಟೆಯೊಂದಿಲ್ಲದಿರಲು
ಕೇರಿಗೊಂದಿರಬೇಕು ಕೆಮ್ಮುವಾ ಮುದುಕಿ

ಮನೆಮನೆಗೆ -ಪ್ಲೇಗಾಗಿ- ದೀಪವಿರದಿರಲು
ಮನೆಗೊಂದು ಇರಬೇಕು ಸಾಯದಾ ಮುದುಕಿ

ಈ ಕವನದಲ್ಲಿ ಬೇಂದ್ರೆಯವರು 'ಬಯ್ಯುವ, ಬಾಯ್ಬಡಿದುಕೊಳ್ಳುವ, ಕೆಮ್ಮುವ, ಸಾಯದೇ ಉಳಿದಿರುವ ಮುದುಕಿಯನ್ನು ಕುರಿತು ಬರೆಯುತ್ತಾರೆ. 'ಬೇಂದ್ರೆಯವರಿಗೆ ಯಾವುದೋ ಮುದುಕಿಯಿಂದ ಬಹಳ ಆಘಾತವಾಗಿರಬೇಕು. ಇಲ್ಲದಿದ್ದರೆ ಇಷ್ಟು ನಿರ್ದಯತೆಯಿಂದ ಸಾಯದಾ ಮುದುಕಿಯ ಶ್ರಾದ್ಧವನ್ನು ಈ ಕವನದಲ್ಲಿಯೂ, ಕಾರಹುಣ್ಣಿಮೆಯ ಬೆಳದಿಂಗಳಲ್ಲಿ ಕುಣಿಯುತ್ತ ಆಡುತ್ತಿರುವ ಮಕ್ಕಳನ್ನು ನೋಡಿ ಏನು ಕೀಸರಬಾಸರ ಇಟ್ಟಿರುವಿರಿ, ಊರೊಳಗೆ ನಿಮ್ಮ ಹೊರ್ತು ಯಾರಾದರೂ ಇರುವರೋ ಇಲ್ಲವೋ? ಸುಡಲಿ! ಇವರ ಒದರಾಟದಿಂದ ನಿದ್ದೆ ಬರವಲ್ಲದು. ಎಂದು ಬಾಗಿಲು ಇಕ್ಕಿಕೊಳ್ಳುವ, ಮುದುಕಿಯ ಬಗ್ಗೆಯೂ ನಿರ್ದಾಕ್ಷಿಣ್ಯವಾಗಿ ಬರೆಯುತ್ತಿರಲಿಲ್ಲವೇನೋ' ಎಂದು 'ನಿರಾಭರಣ ಸುಂದರಿ' ಪುಸ್ತಕಕ್ಕೆ ಮುನ್ನುಡಿ ಬರೆದ ಮಹಿಷಿಯವರು ಹೇಳುತ್ತಾರೆ. ಮುದುಕಿಯ ವಯಸ್ಸಿಗಾಗಿ ಮರುಗುವ ಮಾತು ಇಲ್ಲದೇ ಇರುವುದನ್ನು ನೋಡಿದಾಗ ಇವರ ಈ ಮಾತು ನಿಜವಿರಬಹುದೇನೋ ಎನಿಸಿದರೂ, ಇದೇ ಕವನದ ಸೃಷ್ಟಿಗೆ ಕಾರಣವಾಗಿರಲಾರದು ಎನಿಸುವುದಂತೂ ನಿಜ. ಮುದುಕಿ ವಯಸ್ಸಾದಾಕೆ. ಜೀವನದಲ್ಲಿ ಸಾಕಷ್ಟು ಬದಲಾವಣೆಗಳನ್ನು ಕಂಡ ಜೀವ. ಪಾರಂಪರಿಕವಾಗಿ ಬೆಳೆದುಬಂದ ಮೌಲ್ಯಗಳಿಗೇ ಅಂಟಿಕೊಂಡವಳು, ಅವುಗಳನ್ನು ಉಳಿಸಿ ಬೆಳೆಸಬೇಕಾದ ಕರ್ತವ್ಯವನ್ನು ನಂಬಿದವಳು. 'ಮನೆಗೊಂದು ಮುದಿಗೊರಡು, ಒಲೆಗೊಂದು ಒದೆಗೊರಡು' ಎನ್ನುವ ಗಾದೆ ಮಾತಿನ ಅರ್ಥಪೂರ್ಣತೆ ಇಲ್ಲಿ ತಿಳಿದುಬರುತ್ತದೆ.

ನಾಡಿನ ಸಂರಕ್ಷಣೆಗಾಗಿ ಬಳಸುವ ತೋಪುಗಳ ಅಭಾವವಿದ್ದರೂ, ವಯಸ್ಸಾದ ಮುದುಕಿ ತನ್ನ ಅನುಭವಗಳಿಂದ ಆ ಜವಾಬ್ದಾರಿಯನ್ನು ತಿಳಿಸಿಕೊಡಲು, ಎಚ್ಚರಿಸಲು ಸಾಧ್ಯ.

ಬೊಗಳುವ ನಾಯಿಗಳು ಊರನ್ನು ಸದಾ ಎಚ್ಚರದಲ್ಲಿಡಲು ಪ್ರಯತ್ನಿಸುವಂತೆ ಮುದುಕಿ ತನ್ನ ಮಾತಿನಿಂದ ಸಾಮಾಜಿಕ ಮೌಲ್ಯಗಳ ಬಗ್ಗೆ ಪದೇ ಪದೇ ಎಚ್ಚರಿಸಿ ಅದರಮೇಲೆ ಹೊಗಿನವರ ದಾಳಿಯಾಗದಂತೆ ಎಚ್ಚರಿಕೆ ವಹಿಸುತ್ತಾಳೆ.

ಊರಿಗೊಂದು ಗಂಟೆ ಇದ್ದರೆ ಯಾರಿಗೇ ಯಾವುದೇ ಆಪತ್ತು ಬಂದರೂ ಆ ಗಂಟೆಯನ್ನು ಬಾರಿಸಿ ಊರಿನ ಮುಖಂಡನಿಂದ ನ್ಯಾಯವನ್ನು ಕೇಳಿ ದೊರಕಿಸಿಕೊಳ್ಳಬಹುದು. ಒಂದುವೇಳೆ ಆ ಗಂಟೆ ಇಲ್ಲದಿದ್ದರೂ ಇಲ್ಲಿ ಬರುವ ಮುದುಕಿ ಆ ಕೆಲಸವನ್ನು ಮಾಡುತ್ತಾಳೆ. ಸಾಮಾಜಿಕ, ಧಾರ್ಮಿಕ ಮೌಲ್ಯಗಳಿಗೆ ಧಕ್ಕೆಯುಂಟಾದಾಗ ಮುದುಕಿ ತನ್ನ ಕೆಮ್ಮಿನಿಂದ ಜನರಲ್ಲಿ ಎಚ್ಚರಿಕೆಯುಂಟುಮಾಡುತ್ತಾಳೆ. ಇಲ್ಲಿ ಊರು ಅಥವ ಕೇರಿ ಒಂದು ಸಣ್ಣ ಪ್ರದೇಶವಲ್ಲ. ಇಡೀ ಜಗತ್ತು ಒಂದು ನಾಡಾಗುತ್ತದೆ, ಊರಾಗುತ್ತದೆ, ಕೇರಿಯಾಗುತ್ತದೆ. ಈ ಎಲ್ಲ ಶಬ್ದಗಳೂ ಇಡೀ ದೇಶವನ್ನು, ಪ್ರಪಂಚವನ್ನೂ ಪ್ರತಿಬಿಂಬಿಸುತ್ತವೆ (ಊರಿಗೊಂದು ಗಂಟೆಯಿರಲೇಬೇಕಿಲ್ಲ, ಇಡೀ ಕೇರಿಯನ್ನು ಎಚ್ಚರಿಸಲು ಅದನ್ನು ಬಾರಿಸಲೇಬೇಕಾಗಿಲ್ಲ, ಮುದುಕಿಯ ಕೆಮ್ಮೇ ಸಾಕು ಆ ಶಬ್ದವನ್ನೂ ಮೀರಿಸುತ್ತದೆ. ಇದು ತೋರಿಕೆಗೆ ಕಾಣುವ ಅರ್ಥ.)

ಇನ್ನು ಮುಂದಿನ ಸಾಲಿನ ವ್ಯಂಗ್ಯವಂತೂ ಭಯಂಕರ. ಪ್ಲೇಗ್ ಖಾಯಿಲೆ ಬಂದು ಇಡೀ ಊರಿಗೆ ಊರೇ ನಾಶವಾಗಿ ಎಲ್ಲರ ಮನೆಯ ದೀಪಗಳು ಆರಿಹೋಗಿ ಸ್ಮಶಾನ ಮೌನವಾದರೂ ಊರಿಗೊಬ್ಬಳು ಮುದುಕಿಯಿದ್ದರೆ ಸಾಕು ಎಲ್ಲರ ಮನೆಯ ಇರವಿನ ಅರಿವನ್ನು ಉಂಟುಮಾಡಲು! ಎಲ್ಲರ ಮನೆಯಲ್ಲೂ ಮತ್ತೆ ದೀಪ ಬೆಳಗಿಸಲು! ಆದ್ದರಿಂದಲೇ ಊರಿನ ರಕ್ಷಣೆಗೆ ಮುದುಕಿಯಿದ್ದರೆ ಸಾಕು! ಅಂದರೆ ಇಡೀ ನಾಡಿಗೆ ನಾಡೇ ಮೌಲ್ಯಗಳನ್ನು ಕಳೆದುಕೊಳ್ಳುವ ಸ್ಥಿತಿಗೆ ಬಂದರೂ ಹಿರಿ ತಲೆಗಳು ಅದೇ ಮೌಲ್ಯಗಳನ್ನು ಪುನರುತ್ಥಾನಗೈಯಲು ಕಾದಿರುತ್ತವೆ. 'ಫಾಲಾಫೂ' ಕಥೆಯಲ್ಲಿಯೂ ಇದೇ ರೀತಿಯ ಒಬ್ಬ ಮುದುಕಿಯ ಪಾತ್ರವನ್ನು ತರುತ್ತಾರೆ ಬೇಂದ್ರೆಯವರು. ಅಲ್ಲೂ ಮಕ್ಕಳ ಅಂದರೆ ನವಪೀಳಿಗೆಯವರಿಂದ ನಾಶವಾಗುತ್ತಿರುವ ಪರಂಪರೆಯಬಗ್ಗೆ ಕಾಳಜಿ ತೋರಿಸುತ್ತಾಳೆ ಮುದುಕಿ. ಈ ಎರಡರಲ್ಲೂ ಬರುವ ಮುದುಕಿಯ ವಯಸ್ಸಿಗಾಗಲೀ, ಆ ವಯಸ್ಸಿನಿಂದ ಅವಳಲ್ಲಿ ಉಂಟಾಗುವ ದೈಹಿಕ ಮಾನಸಿಕ ಕಷ್ಟಗಳನ್ನಾಗಲೀ ಗುರುತಿಸುವ ಯತ್ನವೂ ಇಲ್ಲ. ಯಾವುದೇ ರೀತಿಯ ಸಹಾನುಭೂತಿಯೂ ಇಲ್ಲ. ಮುದುಕಿಯ ವಯಸ್ಸಿಗೆ, ವಯಸ್ಸಿನಿಂದುಂಟಾದ ಅಸಹಾಯಕತೆಗೆ! ಕಾರಣ ಆಕೆ ಬೇಂದ್ರೆಯವರ ದೃಷ್ಟಿಯಲ್ಲಿ ಅಸಹಾಯಳಾದ, ವಯಸ್ಸಾದ ಮುದುಕಿಯಲ್ಲ. ದೇಶದ, ಧರ್ಮದ, ಪರಂಪರೆಯನ್ನು ಕಾಪಾಡುವ ಶಕ್ತಿಯಿರುವ ವಯಸ್ಸಾದಾಕೆ.

ಇಲ್ಲಿ ಮುದುಕಿ ಒಂದು ಸಾಮಾಜಿಕ ಮೌಲ್ಯವಾಗಿದ್ದಾಳೆ. ಅವಳಿಗೆ ಯಾವ ರೀತಿಯ ಕರುಣೆಯ ಅಗತ್ಯವಿಲ್ಲ ಅಥವಾ ಅವಳ ವಯಸ್ಸಿಗಾಗಿ ಮರುಗಬೇಕಾದ್ದಿಲ್ಲ.

ಇದು 'ಮುದುಕಿ' ಕವನವನ್ನು ಓದಿ ನಾನು ಕಂಡುಕೊಂಡ ಸತ್ಯ.

ಇಲ್ಲಿ ಬೇಂದ್ರೆಯವರು ಸ್ತ್ರೀಲಿಂಗವನ್ನೇಕೆ ಬಳಸಿದರು? 'ಮುದುಕ' ಆಗಬಾರದಿತ್ತೇ ಎನಿಸುವುದು ಸಹಜವಾದರೂ ಮುದುಕಿ ವಟಗುಟ್ಟುವುದು ಹೆಚ್ಚು ಎನ್ನುವ ಭಾವದಲ್ಲಿ ಕವನದ ಗಹನತೆಯನ್ನು ಏರಿಸಲು ಹೇಳಿರಬಹುದೆಂದು ನನ್ನ ಅನಿಸಿಕೆ.

***



ಕೆಂಪಿ

- ಗಾಯತ್ರಿ ಮೂರ್ತಿ

ಕೆಂಪಿ 'ಸಿರಿ ಪಾರ್ಟಿಹಾಲ್' ನಲ್ಲಿ ಕಸ ಗುಡಿಸಿ, ಸಾರಿಸಿ, ಚೊಕ್ಕಟಗೊಳಿಸಿ, 'ಸದ್ಯ, ಕುರ್ಚಿಗಳನ್ನು ಜೋಡಿಸಲು ಸಹಾಯ ಮಾಡಿದರೆ ಆಯ್ತು, ಬೆಳಗಿನ ಕೆಲಸ ಮುಗಿಯಿತು. ಇನ್ನು ಪಾರ್ಟಿ ಆರಂಭವಾಗಿ ಮುಗಿಯುವವರೆಗೆ ಬಿಡುವು, ಉಸ್ಸಪ್ಪಾ' ಎಂದು ಒಂದೆಡೆ ಬೆಂಚಿನ ಮೇಲೆ ಕುಳಿತಳು.

ಕೆಂಪಿಯ ಗಂಡ ಅವಳನ್ನೆಂದೋ ಬಿಟ್ಟು ಹೋಗಿದ್ದ. ಒಂಟಿ ಜೀವನಕ್ಕೆ ಕೆಂಪಿ ಒಗ್ಗಿಕೊಂಡಿದ್ದಳು. ಆದರೆ ಒಂದು ದಿನ ಅವಳ ಗಂಡ ಇದ್ದಕ್ಕಿದ್ದಂತೆ ಎಲ್ಲಿಂದಲೋ ಬಂದ. ಬಂದವನೇ ಮನೆಗೆ ಸೇರಿಸಿಕೊಳ್ಳಲು ಅನುಮಾನಿಸಿದ ಕೆಂಪಿಯನ್ನು ವಿಧವಿಧವಾಗಿ ಓಲೈಸಿ ಒಲಿಸಿಕೊಂಡ. ಏಕಾಂಗಿ ಜೀವನದ ಏಕತಾನತೆಗೆ ಬೇಸತ್ತಿದ್ದ ಕೆಂಪಿ ಸುಲಭವಾಗಿ ಗಂಡನ ಸವಿಮಾತಿಗೆ ಮರುಳಾದಳು.

ಹೀಗೆ ಸುಮಾರು ಹದಿನೈದು ದಿನಗಳಾಗಿರಬಹುದು. ಇದ್ದಕ್ಕಿದ್ದ ಹಾಗೇ ಬಂದಂತೆಯೇ ಒಂದು ದಿನ ಅವಳ ಗಂಡ ಹೇಳದೆ ಕೇಳದೆ ಮಾಯವಾದ. ಅಂದು ರಾತ್ರಿಯವರೆಗೆ ಗಂಡನ ಬರವಿಗಾಗಿ ಕೆಂಪಿ ಕಾದು, ಕಾದು, ಕೊನೆಗೆ ತಾನು ಮೋಸ ಹೋಗಿರುವ ಸಂಗತಿ ತಿಳಿದು ದುಃಖಪಟ್ಟದ್ದಷ್ಟೇ ಆಗಿದ್ದರೆ ಪರವಾಗಿರಲಿಲ್ಲ. ಅವಳು ಕಷ್ಟಪಟ್ಟು ಕೂಡಿಟ್ಟಿದ್ದ ಐದು ಸಾವಿರ ಹಣವನ್ನು ಕದ್ದೊಯ್ದು. ಜೊತೆಗೆ ಅವನು ಅವಳಿಗೆ ಬೇಡದ ಉಡುಗೊರೆಯನ್ನೂ ನೀಡಿ ದೂರ ಹೋಗಿದ್ದ.

ಮುಗ್ಧೆ ಕೆಂಪಿಗೆ ತಾನು ಗರ್ಭಿಣಿಯೆಂದು ತಿಳಿಯಲೇ ಇಲ್ಲ. ಕೊನೆಗೆ ವಿಪರೀತ ಸುಸ್ತು ಎಂದು ಸರ್ಕಾರೀ ಆಸ್ಪತ್ರೆಯಲ್ಲಿ ತೋರಿಸಿದಾಗ ತಾನು ಸುಮಾರು ನಾಲ್ಕು ತಿಂಗಳ ಗರ್ಭಿಣಿಯೆಂದು ತಿಳಿದು ಅವಳಿಗಾದ ಆಘಾತ ಅಷ್ಟಿಷ್ಟಲ್ಲ. ತುಂಬಾ ನಿಶ್ಶಕ್ತಿಯ ಅವಳಿಗೆ ಗರ್ಭಪಾತ ಮಾಡಲೂ ವೈದ್ಯರು ಒಪ್ಪಲಿಲ್ಲ. ಹೀಗಾಗಿ ವಿಧಿಯಿಲ್ಲದೆ ತನ್ನ ಒಂಟಿ ಜೀವನದಲ್ಲಿ ಬಯಸದೆ ಬರುವ ಪುಟ್ಟ ಸಂಗಾತಿಗಾಗಿ ಕಾಯುತ್ತ ಜೀವನ ನಿರ್ವಹಣೆ ಮಾಡುತ್ತಿದ್ದಳು. ಮುಂದೇನು? ಎಂಬ ಬಹು ದೊಡ್ಡ ಪ್ರಶ್ನೆ ಅವಳ ಮುಂದಿದ್ದರೂ ಅನಿವಾರ್ಯವಾಗಿ ಆ ಬಗ್ಗೆ ಯೋಚಿಸಿದೆ ಏನಾದರಾಗಲಿ ಎಂಬ ನಿರ್ಲಿಪ್ತ ನಿಲುವನ್ನು ತಾಳಿದ್ದಳು. ಸಿರಿ ಪಾರ್ಟಿ ಹಾಲಿನಲ್ಲಿ ಕೆಲಸಕ್ಕೆ ಸೇರಿದ ಮೇಲೆ ಅವಳಿಗೆ ಊಟಕ್ಕೆ ತೊಂದರೆಯಿರಲಿಲ್ಲ. ಸಂಪಾದಿಸಿದ ಹಣವನ್ನು ಜತನದಿಂದ ಮುಂದೆ ಒದಗುವ ಖರ್ಚಿಗಾಗಿ ಕೂಡಿಡುತ್ತಿದ್ದಳು.

ಈಗ ಕೆಂಪಿ ಸುಮಾರು ಏಳು ತಿಂಗಳ ಗರ್ಭಿಣಿ. ಗರ್ಭಿಣಿಯೆಂದು ಅವಳಿಗೆ ಉಪಚಾರ ಮಾಡುವವರು ಯಾರೂ ಇಲ್ಲ. ದುಡಿದು ಸಂಪಾದಿಸದಿದ್ದರೆ ಅವಳಿಗೆ ಉಪವಾಸವೇ ಗತಿ.

ಅಂದು ಸಿರಿ ಪಾರ್ಟಿ ಹಾಲ್‌ನಲ್ಲಿ ಸುಧಾಳ ಸೀಮಂತ. ಸೋಫಾ ಮೇಲೆ ಆಸೀನಳಾಗಿದ್ದ ಸುಧಾಗೆ ಚೊಚ್ಚಲು ಸಂಭ್ರಮ. ಹಸಿರು ಸೀರೆ ಉಟ್ಟು, ಸರ್ವಾಲಂಕಾರ ಭೂಷಿತೆಯಾಗಿ ಚೆಲುವೆ ಸುಧಾ ಸಿರಿದೇವಿಯಂತೆಯೇ ಶೋಭಿಸುತ್ತಿದ್ದಳು. ಮುಖದಲ್ಲಿ ಸಂಭ್ರಮ ಸಂತೃಪ್ತಿ ತುಂಬಿ ತುಳುಕುತ್ತಿತ್ತು.

ಪಾರ್ಟಿ ಹಾಲಿನ ತುಂಬ ಬಂಧು ಬಳಗ ಸೇರಿ ಬಳೆ ತೊಡಿಸುವ ಸಂಭ್ರಮದ ಕ್ಷಣಕ್ಕಾಗಿ ಕಾಯುತ್ತಿದ್ದರು. ಸುಧಾಳ ತಾಯಿ ಸವಿತಾ ಮತ್ತು ಅವಳ ಅಕ್ಕ ಸಹನಾ ಮೊದಲು ಸುಧಾಗೆ ಅರಿಶಿನ ಕುಂಕುಮ ನೀಡಿ, ಘಮಘಮಿಸುವ ಮಲ್ಲಿಗೆಯನ್ನು ಮುಡಿಸಿದರು. ಬಗೆಬಗೆಯ ತಿಂಡಿಯ ತಟ್ಟೆಗಳನ್ನು ಅವಳ ಕೈಯಿಂದ ಮುಟ್ಟಿಸಿ, ಟೇಬಲ್ ಮೇಲಿಟ್ಟರು. ನಂತರ ಸುಧಾಳ ಎರಡೂ ಕೈಗಳಿಗೆ ಹಸಿರು ಬಳೆ ತೊಡಿಸಿ, ನಂತರ ಬಂಗಾರದ ಬಳೆಗಳನ್ನೂ ತೊಡಿಸಿ ಸಂತಸಪಟ್ಟರು. ನೆರೆದಿದ್ದ ಹೆಂಗಳೆಯರೂ ಸುಧಾಗೆ ತಮಗೆ ತೋರಿದ ಉಡುಗೊರೆಗಳನ್ನು, ತಿಂಡಿಗಳನ್ನೂ ನೀಡಿದರು. ಕಾರ್ಯಕ್ರಮದ ಅಂತ್ಯದಲ್ಲಿ

ಸುಧಾಗೆ ಆರತಿ ಎತ್ತಿದ ನಂತರ ಹೆಂಗಳೆಯರಿಗೆ ಅರಿಶಿನ, ಕುಂಕುಮ ಮಲ್ಲಿಗೆ ಹೂವು, ಹಸಿರು ಬಳೆಗಳನ್ನು, ತಾಂಬೂಲವನ್ನೂ ಕೊಟ್ಟ ನಂತರ ಸಂಭ್ರಮದ ಅಂದಿನ ಸೀಮಂತದ ಕಾಯರ್ಕ್ರಮ ಮುಗಿಯಿತು. ನಂತರ ಊಟದ ಕಾರ್ಯಕ್ರಮ.

ಊಟ ಮುಗಿಯುತ್ತಿದ್ದಂತೆ ಅಲ್ಲಿದ್ದ ಟೇಬಲ್‌ಗಳನ್ನು ಒರೆಸಲು ಮೂರು ನಾಲ್ಕು ಜನ ಕೆಲಸದವರು ಬಂದರು. ಅವರಲ್ಲಿ ಗರ್ಭಿಣಿ ಕೆಂಪಿ ಕೂಡ ಒಬ್ಬಳು. ಇಷ್ಟು ಹೊತ್ತೂ ಕೆಂಪಿ ಮರೆಯಲ್ಲಿ ನಿಂತು ಸೀಮಂತದ ಸಂಭ್ರಮವನ್ನು ಸವಿಯುತ್ತಿದ್ದಳು. ಆ ಸ್ಥಾನದಲ್ಲಿ ತನ್ನನ್ನು ಕಲ್ಪಿಸಿಕೊಂಡು ಖುಷಿಪಟ್ಟಳು. ಆದರೆ, ಎರಡು ಹೊತ್ತು ಹೊಟ್ಟೆ ತುಂಬಾ ತಿನ್ನಲು ಕಷ್ಟಪಡಬೇಕಾದ ಪರಿಸ್ಥಿತಿಯಲ್ಲಿ ಸೀಮಂತ ಎಂಬ ಕಾರ್ಯಕ್ರಮವೊಂದಿದೆ ಎಂಬುದು ಇಲ್ಲಿಯವರೆಗೆ ಅವಳಿಗೆ ತಿಳಿದಿರಲಿಲ್ಲ.

ಟೇಬಲ್ ಒರೆಸುತ್ತಿದ್ದ ಗರ್ಭಿಣಿಯನ್ನು ದೂರದಿಂದಲೇ ಗಮನಿಸಿದ ಸುಧಾ ತಾಯಿಯನ್ನು ಕರೆದು, 'ಅಮ್ಮ ನೋಡು, ಆ ಹುಡುಗಿಯೂ ಬಸುರಿ, ಚಿಕ್ಕವಳು ಬೇರೆ. ಅವಳಿಗೂ ಆಸೆಯಿರಬಹುದು. ಅವಳಿಗೂ ಅರಿಶಿನ, ಕುಂಕುಮ, ತಾಂಬೂಲ ಕೊಡು' ಎಂದು ಹೇಳಿದಾಗ, ಸವಿತಾ ಕೂಡ ಅವಳನ್ನು ಗಮನಿಸಿ, 'ಹೌದು ಸುಧಾ. ಅವಳಿಗೂ ಏನಾದರೂ ಕೊಡ್ತೀನಿ ಇರು' ಎಂದು ಹೇಳಿ ಕೆಂಪಿಯನ್ನು ಕರೆದು. 'ಬಾಮ್ಮ, ಇಲ್ಲಿ ಕೂತ್ಕೋ' ಎಂದು ಅಕ್ಕರೆಯಿಂದ ಕುರ್ಚಿ ತೋರಿಸಿದಾಗ ಕೆಂಪಿಗೆ ಅತೀವ ಸಂಕೋಚ. 'ಯಾಕ್ರಮ್ಮಾ' ಎಂದು ಕೇಳಿದಳು. 'ಒಂದ್ಐದು ನಿಮಿಷ ಕೂತ್ಕೊ, ಬರ್ತೀನಿ' ಎಂದು ಹೇಳಿ, ಸವಿತಾ ಇರಲಿ, ಒಂದು ವೇಳೆ ಬೇಕಾಗಬಹುದು ಎಂದು ತಂದಿದ್ದ ಒಂದು ಹಸಿರು ಬಣ್ಣದ ಸಿಂಥೆಟಿಕ್ ಸೀರೆ, ಅರಿಶಿನ ಕುಂಕುಮ, ಹಸಿರು ಬಳೆಗಳು, ಹಣ್ಣುಗಳು, ಹೂವು, ತಿಂಡಿಯ ಪ್ಯಾಕೆಟ್‌ಗಳನ್ನು ದೊಡ್ಡ ತಟ್ಟೆಯಲ್ಲಿ ತಂದು ಕೆಂಪಿಗೆ ನೀಡಿದಾಗ ಆಕೆಯ ಕಣ್ಣಲ್ಲಿ ಆಶ್ಚರ್ಯ, ಆನಂದ, ಸಂಭ್ರಮದ ಭಾವ ಕಂಡು ಸವಿತಾಳ ಹೃದಯ ತುಂಬಿ ಬಂತು. ಇದಕ್ಕೆ ಕಾರಣಳಾದ ಮಗಳು ಸುಧಾಳ ಹೃದಯವಂತಿಕೆಯಿಂದ ಮನಸ್ಸು ತೃಪ್ತಿಯಿಂದ ಬೀಗಿತು.

ಅಲ್ಲಿಗೆ ಕೆಂಪಿಯ ಕಷ್ಟ ಕಳೆಯಿತು. ಮುಂದೆ ಅವಳು ಸುಧಾ ಮನೆಯಲ್ಲಿ ಕೆಲಸಕ್ಕೆ ಸೇರಿ, ಸುಧಾಳ ಮಗಳಿಗೆ ಆಯಾಳಾಗಿ ಅವರ ಮನೆಯಲ್ಲಿ ಕೆಲಸ ಮಾಡುತ್ತಾ ನೆಮ್ಮದಿಯಾಗಿ ತನ್ನ ಮಗಳನ್ನೂ ಸಾಕಿದಳು.

***





ನೇಪಾಳದ ಢಾಕಾ ಟೋಪಿ ಪ್ರಸಂಗ

– ಮಹಾಬಲ

ಕಳೆದ ವರ್ಷ ನೇಪಾಳಕ್ಕೆ ಪ್ರವಾಸ ಹೋಗಿದ್ದಾಗ ಕಠಮಂಡುವಿನ ವಿವಿಧ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿ ಮುಗಿಸಿ ಅಲ್ಲಿನ ಪ್ರಸಿದ್ಧ ದರ್ಬಾರ್ ಚೌಕದಲ್ಲಿ ಒಂದೆಡೆ ಪತ್ನಿಸಮೇತನಾಗಿ ವಿರಮಿಸುತ್ತಿದ್ದೆ. ಸಹಪ್ರವಾಸಿಗರು ಶಾಪಿಂಗ್‌ನಲ್ಲಿ ಮುಳುಗಿದ್ದು ಅವರೆಲ್ಲ ವಾಪಸಾಗಲು ಇನ್ನೂ ಸಮಯವಿತ್ತು.

ಆಗ ಅಲ್ಲಿಗೆ ಟೋಪಿಗಳನ್ನು ಮಾರಾಟ ಮಾಡುವ ಮುದುಕನೊಬ್ಬ ಬಂದ. ತೇಪೆ ಹಾಕಿದ್ದ ಮಾಸಲು ಕೋಟು, ತಲೆಯಲ್ಲಿ ನೇಪಾಳಿಯರ ವಿಶೇಷ ಗುಲಾಬಿ ಬಣ್ಣದ ಢಾಕಾ ಟೋಪಿ. ತನ್ನ ಸಂಗ್ರಹದಲ್ಲಿದ್ದ ಟೋಪಿಗಳನ್ನು ನನ್ನ ಮುಂದೆ ಹಿಡಿದು ಕೊಂಡುಕೊಳ್ಳಲು ವಿನಂತಿಸಿದ.

ಅದೇಕೋ ನನ್ನನ್ನು ನೇಪಾಳೀಯರು ಧರಿಸುವ ಬಣ್ಣಬಣ್ಣದ, ವಿಭಿನ್ನ ವಿನ್ಯಾಸದ ಢಾಕಾ ಟೋಪಿ ಬಹುವಾಗಿ ಆಕರ್ಷಿಸಿದೆ. ೧೯೮೬ರಲ್ಲಿ ಬೆಂಗಳೂರಿನಲ್ಲಿ ನಡೆದಿದ್ದ ಎರಡನೆಯ ಸಾರ್ಕ್ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದ ನೇಪಾಳದ ದೊರೆ ಬೀರೇಂದ್ರ (ಪೂರ್ಣ ಹೆಸರು ಬೀರೇಂದ್ರ ಬಿಕ್ರಮ ಷಹದೇವ) ಅಂಥ ಟೋಪಿ ಧರಿಸಿ ಮಿಂಚಿದ್ದು ಇನ್ನೂ ಮನಸ್ಸಿನಲ್ಲಿ ಹಸಿರಾಗಿತ್ತು. ನಮ್ಮ ಪ್ರವಾಸದುದ್ದಕ್ಕೂ ಇಂಥ ವರ್ಣಮಯ ಟೋಪಿಗಳನ್ನು ಧರಿಸಿದವರನ್ನೇ ಸಾಕಷ್ಟು ಸಂಖ್ಯೆಯಲ್ಲಿ ಕಂಡೆವು.

"ಸಾಹೇಬರೆ, ಎರಡು ಟೋಪಿಯನ್ನಾದರೂ ಕೊಳ್ಳಿ. ವ್ಯಾಪಾರವಾದರೆ ನಮ್ಮ ಕುಟುಂಬಕ್ಕೆ ಊಟ. ಇಲ್ಲದಿದ್ದರೆ ಉಪವಾಸ" ಎಂದು ಬೇಡಿದ.

ನಾನು "ಬೇಡ, ನಮ್ಮ ಊರಲ್ಲಿ ಇದನ್ನು ಧರಿಸಲು ಆಗದು' ಎನ್ನುತ್ತಾ ಮಡದಿಯತ್ತ ನೋಡಿದೆ. ಅವಳು ಕಣ್ಣಿನಲ್ಲೇ ಅಸಮ್ಮತಿಯನ್ನು ಸೂಚಿಸಿದಳು. ಈಗಾಗಲೇ ಬೇರಬೇರೆ ರಾಜ್ಯಗಳಲ್ಲಿ, ದೇಶಗಳಲ್ಲಿ ಕೊಂಡಿರುವ, ನೀವು ಎಂದೂ ಧರಿಸದ ಐವತ್ತಕ್ಕೂ ಹೆಚ್ಚು ಟೋಪಿಗಳೇ ಕಪಾಟನ್ನು ಆಕ್ರಮಿಸಿವೆ. ಇವಕ್ಕೆಲ್ಲಿ ಜಾಗ? ಎನ್ನುವಂತಿತ್ತು ಅವಳ ನೋಟ.

ಕೊಳ್ಳುವ ಹಂಬಲವಾದರೂ ಮುಂದುವರೆಯಲು ಧೈರ್ಯವಾಗಲಿಲ್ಲ. ಆದರೆ ಆ ಮುದುಕ ಏನಾದರೂ ಮಾಡಿ ಎರಡು ಟೋಪಿಗಳನ್ನಾದರೂ ನನ್ನ ತಲೆಗೆ ಕಟ್ಟುವ ಹಠದಲ್ಲಿದ್ದ. ಪಾಪ ಅವನಿಗೆ ಅದು "ದೋ ರೋಟಿ ಕಾ ಸವಾಲ್".

ಈಗ ಢಾಕಾ ಟೋಪಿಯ ಇತಿಹಾಸವನ್ನೇ ನನ್ನ ಮುಂದೆ ಅನಾವರಣಗೊಳಿಸಿದ. ಅವನ ಪ್ರಕಾರ ಈ ಟೋಪಿ ಉಗಮಕ್ಕೆ ಢಾಕಾದಿಂದ ಆಮದಾದ ಬಟ್ಟೆ, ಭಾರತದಿಂದ ಬಂದ ಬಣ್ಣಗಳು ಮತ್ತು ನೇಪಾಳಿನ ಜನರ ನೇಯ್ಗೆಗಳ ಸಂಗಮ ಕಾರಣ .(ಈ ಕುರಿತು ಇನ್ನೂ ಹಲವು ಭಿನ್ನಭಿನ್ನ ಕತೆಗಳಿವೆ, ಇರಲಿ) ಕಪ್ಪು ಬಣ್ಣದ, ಕುಕ್ರಿ ಆಯುಧದ ಚಿಹ್ನೆ ಇರುವ ಟೋಪಿ ಕೆಲವು ಪಹಾಡಿಗಳು ಧರಿಸಿದರೂ ಬಣ್ಣದ ಬಗೆಬಗೆ ವಿನ್ಯಾಸದ ಟೋಪಿಗಳೇ ಅಧಿಕೃತವಾದುದು. ರಾಜವಂಶದವರು, ಅಧಿಕಾರಸ್ಥರು ಮುಂತಾದವರೆಲ್ಲ ಇದನ್ನೇ ಧರಿಸುತ್ತಾರೆ. ನೇಪಾಳದ ಬಹುಪಾಲು ಜನರು ಪಾಸ್‌ಪೋರ್ಟ್‌ಗೂ ಈ ಟೋಪಿಯನ್ನೇ ಧರಿಸುತ್ತಾರೆ. ಶುಭಸಮಾರಂಭಗಳಲ್ಲಿ ಈ ಬಣ್ಣದ ಢಾಕಾಟೋಪಿ ಧರಿಸುವುದು ಕಡ್ಡಾಯ ಎಂದೆಲ್ಲಾ ಹೇಳಿ ಯಾವ್ಯಾವ ವಿಶ್ವ ಪ್ರಸಿದ್ಧರು, ಕ್ರಿಕೆಟ್ ತಾರೆಯರು, ಒಲಿಂಪಿಕ್ ಪದಕ ಗೆದ್ದವರು ಇದನ್ನು ಧರಿಸಿ ಮೆರೆದಿದ್ದಾರೆ ಎಂಬ ಯಾದಿಯನ್ನೇ ನೀಡಿದ.

ಕೊನೆಯ ಅಸ್ತ್ರವಾಗಿ, "ನೀವೊಮ್ಮೆ ಧರಿಸಿ ನೋಡಿ, ಒಪ್ಪಿಗೆಯಾದರೆ ಮಾತ್ರ ಕೊಂಡುಕೊಳ್ಳಿ" ಎಂದ. ಅವನ ಈ ಎಲ್ಲ ಕಸರತ್ತುಗಳ ಹಿಂದೆ ಅವನ ಬಡತನವೇ ಢಾಳಾಗಿ ಎದ್ದು ಕಾಣುತ್ತಿತ್ತು.

ಒಂದು ಗುಲಾಬಿ ಬಣ್ಣದ, ಸುಂದರ ಜ್ಯಾಮಿತೀಯ ವಿನ್ಯಾಸದ ಟೋಪಿಯೊಂದನ್ನು ನಮ್ಮ ಸನ್ಮಾನ ಸಮಾರಂಭಗಳಲ್ಲಿ ಮೈಸೂರು ಪೇಟ ಇರಿಸುವಂತೆ ಹಾಕಿಯೇಬಿಟ್ಟ.

“ವಾಹ್ ಏನು ಸಾಬ್, ನೀವು ನಮ್ಮ ಸ್ವರ್ಗೀಯ ದೊರೆ ಬೀರೇಂದ್ರ ತರಹಾನೇ ಇದ್ದೀರಿ. ಏನು ಹೇಳ್ತೀರಿ ಮೇಮ್ಸಾಬ್” ಎಂದು ನನ್ನ ಮಡದಿಯನ್ನು ಪ್ರಶ್ನಿಸಿದ.

“ಹೌದು, ಚೆನ್ನಾಗಿದೆ”, ನನ್ನ ಮಡದಿ ಹೇಳಿದಾಗ, “ಅವರು ಒಪ್ಪಿದ್ದಾರೆ. ಈಗಲಾದರೂ ಕೊಂಡುಕೊಳ್ಳಿ” ಎಂದ ಅವನು.

ನನಗೆ ಅವನಿಂದ ತಪ್ಪಿಸಿಕೊಳ್ಳಬೇಕಾಗಿತ್ತು (ಢಾಕಾ ಟೋಪಿಯ ಆಸೆಯೂ ಬಲವಾಗಿತ್ತು ಅನ್ನಿ). ಅದಾವ ವಿಷಗಳಿಗೆಯೋ ಏನೋ, ಒಂದಕ್ಕೆ ನೂರು ರೂಪಾಯಿಯಂತೆ ನಾಲ್ಕು ಟೋಪಿ ಕೊಂಡುಕೊಂಡೆ. ಆ ಮುದುಕ ಹಿಗ್ಗಿನಿಂದ ನಮ್ಮಿಬ್ಬರಿಗೂ ನಮಿಸಿ ಹೋದ.

“ಅಂತೂ ಅವನು ಎರಡು ಟೋಪಿ ಕೊಳ್ಳಿ ಅಂದರೆ ನಾಲ್ಕು ತೊಗೊಂಡಿರಿ. ಉಳಿದ ಮೂರು ಯಾರಿಗೆ” ಎಂದು ಮಡದಿ ಎಂದಾಗ, “ಇನ್ನೂ ತೀರ್ಮಾನಿಸಿಲ್ಲ” ಎಂದೆ.

ಸ್ವಸ್ಥಳಕ್ಕೆ ವಾಪಸಾದ ಮೇಲೆ ಒಂದು ದಿನ ಬೆಳಗಿನ ವಾಕಿಂಗ್ ಹಾಗೂ ಕಾಫಿಕಟ್ಟೆಯ ಸಭೆಗೆ ನಾನು ಹತ್ತು ವರುಷದಿಂದ ಬಳಸುತ್ತಿರುವ ಕಪ್ಪು ವೇಸ್ಟ್ ಕೋಟು ಜತೆಗೆ ನೇಪಾಳಿ ಢಾಕಾ ಟೋಪಿ ಧರಿಸಿ ಹೊರಟೆ. ಪಾರ್ಕಿನ ಪ್ರವೇಶದಲ್ಲೇ ಭೇಟಿಯಾದ ಮಿತ್ರ ಗೋಪಿ ನನ್ನನ್ನು ವಿಷದವಾಗಿ ನೋಡಿ, “ಇದೇನಿದು ಹೊಸ ಅವತಾರ? ಆದರೂ ಪರವಾಗಿಲ್ಲ ಒಂಥರಾ ಚೆನ್ನಾಗಿದೆ" ಎಂದು ಮಿಶ್ರ ಪ್ರತಿಕ್ರಿಯೆ ನೀಡಿದರು. ಮುಂದೆ ಸಿಕ್ಕ ಮತ್ತೊಬ್ಬ ಗೆಳೆಯ ವಿಶ್ವ ಈ ವೇಷ ನೋಡಿ ಸಂತಸಪಟ್ಟು ಒಂದು ಸೆಲ್ಫೀ ತೆಗೆದುಕೊಂಡು ಫೇಸ್ ಬುಕ್ ಗೋಡೆಗೆ ದಾಖಲಿಸಿದರು.

ಕೆಲವೇ ಕ್ಷಣಗಳಲ್ಲಿ, “ಓಹೋ ಚೆನ್ನಾಗಿದೆ”, “ಯಾವಾಗ ಹೋಗಿದ್ದೆ?”, “ಯಾರು ಹಾಕಿದ್ದು ಟೋಪಿ?”, ನನಗೂ ಒಂದು ಬೇಕಿತ್ತು”. ಇಂಥ ಕಮೆಂಟುಗಳು ದಾಳಿಮಾಡಿದುವು.

ಇದರಿಂದ ಉತ್ತೇಜಿತನಾದ ನಾನು ಅಂದಿನಿಂದ ನಿತ್ಯ ಬೆಳಿಗ್ಗೆ ಢಾಕಾಟೋಪಿ ಹಾಕಲು ಆರಂಭಿಸಿದೆ. ಪರಿಚಿತರೂ ಒಮ್ಮೆ ಅನುಮಾನದಿಂದ ನೋಡಿ ನಾನೇ ಎಂದು ಖಾತರಿಯಾದ ಮೇಲೆಯೇ ಮಾತನಾಡಿಸತೊಡಗಿದರು.

ಒಂದು ದಿನ ಬೆಳಿಗ್ಗೆ ತನ್ನ ಮಗನನ್ನು ಶಾಲೆಯ ವ್ಯಾನಿಗೆ ಕಳಿಸಲು ನಿಂತಿದ್ದ ಮಹಿಳೆಯೊಬ್ಬಳು, “ಅಲ್ನೋಡು ವಿಶಾಲ್, ಗೂರ್ಖಾ ಮಾಮಾ ನಮಸ್ತೆ ಮಾಡು” ಎಂದು ಮಗನಿಗೆ ಹೇಳಿದಾಗ ನಮಸ್ಕಾರವನ್ನು ಸ್ವೀಕರಿಸಲೋ ಅಥವಾ ನಾನು ಗೂರ್ಖಾ ಅಲ್ಲ ತಿಳಿಸಲೋ ಎಂಬ ಗೊಂದಲದಲ್ಲಿ ಬಿದ್ದೆ.

ನಮ್ಮ ಮನೆಯ ಹತ್ತಿರವೇ ಒಂದು ದೊಡ್ಡ ಮಾಲ್ ಇತ್ತು. ಒಮ್ಮೆ ಅಲ್ಲಿ ಏನನ್ನೋ ಕೊಳ್ಳಲು ಇದೇ ವೇಷದಲ್ಲಿ ಹೋದಾಗ ಬಾಗಲಲ್ಲಿದ್ದ ಸೆಕ್ಯೂರಿಟಿ ನನ್ನನ್ನು ನೇಪಾಳಿ ಭಾಷೆಯಲ್ಲಿ ಮಾತನಾಡಿಸಿದ. ನನಗೆ ಅವನ ಮಾತು ಅರ್ಧಂಬರ್ಧ ಅರ್ಥವಾಗಿ “ನಾನು ನೇಪಾಳಿ ಅಲ್ಲ” ಎಂದೆ. ಅವನು, “ಓ ಕ್ಷಮಿಸಿ, ಈ ಟೋಪಿಯಲ್ಲಿ ನೀವು ನೇಪಾಳಿ ಹಾಗೇ ಕಾಣುತ್ತೀರಿ” ಎಂದ.

ಮತ್ತಷ್ಟು ಅವಾಂತರಗಳು, ಅಪಾರ್ಥಗಳು ಆಗದಿರಲೆಂದು ಅಂದೇ ಆ ಢಾಕಾ ಟೋಪಿಯನ್ನು ಮಡಿಸಿ ಕಪಾಟಿನಲ್ಲಿ ಇತರ ಟೋಪಿಗಳ ಜನಾನಾಕ್ಕೆ ಸೇರಿಸಿದೆ. ಮತ್ತೇನು ಮಾಡಲು ಸಾಧ್ಯವಿತ್ತು?

***

ಭಾವಚಿತ್ರ

– ಸುಜಾತಾ ರವೀಶ್. ಮೈಸೂರು

ಕಲೆಗಳಲಿ ಪರಮಕಲೆ ಜೀವನದ ಲಲಿತಕಲೆ
ಕಲಿಸದನಳವಲ್ಲ ಬಾಹ್ಯಬೋಧನೆಯಿಂ॥
ಒಲಿದೊಲಿಸಿಕೊಳುವ ಲೌಕಿಕನಯದ ಸೊಗಸ ನೀಂ
ತಿಳಿವುದೊಳಹದದಿಂದ –ಮಂಕುತಿಮ್ಮ॥

ನನ್ನ ಮುಖ ಹೊತ್ತಿಗೆಯ ಪೇಜ್ ನೋಡಿದವರಿಗೆ ನನ್ನ ಫೋಟೋ ಹುಚ್ಚಿನ ಬಗೆಗೆ ಸ್ವಲ್ಪವಾದರೂ ಅರ್ಥವಾಗುತ್ತದೆ. ಪ್ರತಿಯೊಂದು ಘಟನೆಯನ್ನೂ ಫೋಟೋವಾಗಿ ಸಂಗ್ರಹಿಸಿಡುವ ಹವ್ಯಾಸ ನನ್ನದು. ನನ್ನದೇ ಫೋಟೋಗಳಿರಬಹುದು, ದೃಶ್ಯ, ವಸ್ತುಗಳಿರಬಹುದು, ಮಾಡಿದ ಅಡುಗೆ ಇರಬಹುದು, ಹೋದ ಜಾಗ ಇರಬಹುದು ಎಲ್ಲವೂ ನನ್ನ ಮೊಬೈಲ್ ಕ್ಯಾಮೆರಾದಲ್ಲಿ ಬಂಧಿಗಳಾದರೇನೇ ನನಗೆ ಸಮಾಧಾನ. ಕ್ಯಾಮರಾ ಗ್ಯಾಲರಿ ತುಂಬಿತು ಎಂದಾಗ ಅದನ್ನು ಬೇರೆಡೆಗೆ ಸಾಗಿಸಿ ಸಂಗ್ರಹಿಸುವ ಪ್ರಯತ್ನ. ಅಂತೂ ಇದು ನಿತ್ಯ ನಿರಂತರದ ಕರ್ಮ. ಕರ್ಮ ಅಂದೊಡನೆ ಅದೇನು ಬೇಸರದ ವಿಷಯ ಅಲ್ಲ ಬಿಡಿ, ಖುಷಿ ಕೊಡುವ ಸಂಗತಿಯೇ...

ಆದರೆ ಇದೆಲ್ಲ ಈಗ ಒಂದು ಎಂಟುಹತ್ತು ವರ್ಷಗಳಿಂದ ಈಚೆಗೆ ಆಗಿರುವ ಬೆಳವಣಿಗೆ. ಅದಕ್ಕೆ ಮುಂಚೆ ಫೋಟೋ ಎಂದರೆ ಅದೊಂದು ಸುದೀರ್ಘ ಕ್ರಿಯೆ. ಸ್ಟುಡಿಯೋಗೆ ಹೋಗಿ ಫೋಟೋ ತೆಗೆಸಿಕೊಳ್ಳುವುದೇ ಅಪರೂಪದ ವಿಷಯ. ಇನ್ನು ಕ್ಯಾಮರಾ ಅಂತೂ ಬರೀ ವೃತ್ತಿಪರರು ಇಲ್ಲವೇ ಭಾರಿ ಶ್ರೀಮಂತರ ಬಳಿ ಮಾತ್ರ ಇದ್ದದ್ದು. ನಾವಂತೂ ಎರಡೂ ಅಲ್ಲ.

ಹಿಂದೆ ಹಳೆಯ ಮನೆಗಳ ಒಳಗೆ ಹೋದಾಗ ಮನೆಯ ಹಿರಿಯರ ಮತ್ತು ಮಕ್ಕಳ ಮದುವೆ ಅಥವಾ ಪದವಿ ಸ್ವೀಕಾರದ ಫೋಟೋಗಳು ಗೋಡೆ ತುಂಬಾ ರಾರಾಜಿಸುತ್ತಿದ್ದವು. ಕೆಲವು ಫೋಟೋಗಳಂತೂ ಆ ವ್ಯಕ್ತಿಯ ಅದೇ ಮೊದಲ ಅದೇ ಕೊನೆಯ ಫೋಟೋ. ಅಂತಹ ಮನೆಗಳಿಗೆ ಹೋದಾಗ ನನ್ನ ಕಣ್ಣಿಗೆ ಎಟುಕುವಷ್ಟು ಎತ್ತರದಲ್ಲಿ ಇದ್ದರೆ ಎಲ್ಲಾ ಫೋಟೋ ಗಳನ್ನು ಒಂದು ಸುತ್ತು ನೋಡಿಕೊಂಡು ಬರುವ ವಿಚಿತ್ರ ಚಾಳಿ ಇತ್ತು ನನಗೆ. ಫೋಟೋಗಳೆಂದರೆ ಏನೋ ಕುತೂಹಲ.

ಮನೆಯಲ್ಲೂ ಅಷ್ಟೇ ಅಪ್ಪ ಅಮ್ಮನ ಮದುವೆಯ ಫೋಟೋಗಳು. ಪುಟ್ಟ ಪುಟ್ಟ ಫೋಟೋಗಳ ಆಲ್ಬಮ್. ಅವರು ಮಡ್ರಾಸ್, ಹಂಪೆ, ಮಂತ್ರಾಲಯಕ್ಕೆ ಹೋದಾಗ ತೆಗೆಸಿದ ಫೋಟೋಗಳು. ಎಲ್ಲವನ್ನು ಹರಡಿ ನೋಡುತ್ತಾ ಕುಳಿತು ಕೊಳ್ಳುವುದರಲ್ಲಿ ಏನೋ ಖುಷಿ ನನ್ನದು. ಚಿಕ್ಕವಳಿದ್ದಾಗ ಅಪ್ಪ ಅಮ್ಮನ ಜೊತೆ ತೆಗೆಸಿದ ಫೋಟೋಗಳನ್ ಪದೇ ಪದೇ ನೋಡುತ್ತಾ ಇರುತ್ತಿದ್ದೆ ಎಂದು ಅಮ್ಮ ಹೇಳುತ್ತಿದ್ದರು. ಅದರಲ್ಲೂ ಅಮ್ಮನ ಕಪ್ಪು ಬಿಳುಪಿನ ಒಂದು ಪಾಸ್ಪೋರ್ಟ್ ಫೋಟೋ. ಅದನ್ನು ನೋಡೇ ನಿಮ್ಮಪ್ಪ ನನ್ನನ್ನ ಒಪ್ಪಿದ್ದು ಎಂದು ಅಮ್ಮ ಅನ್ನುವಾಗ ಅವಳ ಕಣ್ಣಲ್ಲಿನ ನಾಚಿಕೆಯ ಸೆಲೆ ಆಗ ಅರ್ಥವಾಗುತ್ತಿರಲಿಲ್ಲ. ಅಂದಿನ ಕಾಲದಲ್ಲಿ ಮದುವೆಗೆ ಗಂಡು ನೋಡಲು ಶುರು ಮಾಡುವ ಮೊದಲ ಕೆಲಸ ಹುಡುಗಿಯ ಪಾಸ್ಪೋರ್ಟ್ ಸೈಜಿನ ಫೋಟೋ ತೆಗೆಸುವುದು.

ಎಷ್ಟೋ ಪ್ರೇಮಪ್ರಸಂಗಗಳು ಪೋಷಕರಿಗೆ ಗೊತ್ತಾಗುತ್ತಿದ್ದುದು ಪುಸ್ತಕಗಳಲ್ಲಿ ಮುಚ್ಚಿಟ್ಟ, ಬಚ್ಚಿಟ್ಟ ಪ್ರಿಯತಮ ಅಥವಾ ಪ್ರಿಯತಮೆಯ ಭಾವಚಿತ್ರದಿಂದಲೇ...

ಮೈಸೂರಿನಲ್ಲಿ ಇದ್ದಿದ್ದರಿಂದ ವಸ್ತು ಪ್ರದರ್ಶನಕ್ಕೆ ಹೋದಾಗ ಸೋದರಿಯರು ಅಥವಾ ಜೊತೆಯಲ್ಲಿ ಬಂದ ಬೇರೆ ಮಕ್ಕಳು ಎಲ್ಲರೂ ಸೇರಿ ತೆಗೆಸಿದ ಫೋಟೋಗಳು ಅಂದಿನ ನೆನಪುಗಳ ಸಾಕ್ಷಿಯಾಗಿ ಇಂದಿಗೂ ಇವೆ. ಅವನ್ನೆಲ್ಲ ನೋಡಿದಾಗ ಹಳೆಯ ಖುಷಿಯ ದಿನಗಳು ನೆನಪಿಗೆ ಬಂದು ಸಂಭ್ರಮವೆನಿಸುತ್ತದೆ. ಇನ್ನು ಹೆಣ್ಣುಮಕ್ಕಳು ದೊಡ್ಡವರಾದಾಗ ಆರತಿ ಮಾಡುವ ಸಮಯದಲ್ಲಿ ಬೇರೆ ಬೇರೆ ವೇಷ (ಸರಸ್ವತಿ ಲಕ್ಷ್ಮಿ ಇತ್ಯಾದಿ) ಹಾಕಿಸಿ ಫೋಟೋ ತೆಗೆಸುತ್ತಿದ್ದ ಪದ್ಧತಿಯೂ ಇತ್ತು.

ಶಾಲೆಯಲ್ಲಿ ಪ್ರತಿವರ್ಷ ಗ್ರೂಪ್ ಫೋಟೋ ಅಂತ ತೆಗೆಸುತ್ತಿದ್ದರು. ಆದರೆ ಯಾವುದಾದರೂ ಒಂದು ವರ್ಷ ತೆಗೆದು ಕೊಳ್ಳುತ್ತಿದ್ದೆವು ಅಷ್ಟೇ. ಪ್ರತಿವರ್ಷ ಅದನ್ನು ತೆಗೆದುಕೊಳ್ಳುವಷ್ಟು ಆರ್ಥಿಕ ಪರಿಸ್ಥಿತಿ ಇರಲಿಲ್ಲ.

ಸ್ಟುಡಿಯೋಗೆ ಹೋಗಿ ಮೊಗ್ಗಿನ ಜಡೆಯ ಫೋಟೋ, ಕೃಷ್ಣನ ಜಡೆಯ ಫೋಟೋ ಇವೆಲ್ಲವನ್ನು ತೆಗೆಸುವುದು ಸಾಮಾನ್ಯ ಅಂದಿನ ದಿನಗಳಲ್ಲಿ. ಸ್ಟುಡಿಯೋದಲ್ಲಿ ಮತ್ತೆ ಪೌಡರ್ ಪೂಸಿ ಕಣ್ಕಪ್ಪು ಹಚ್ಚಿ ಬೆನ್ನಹಿಂದೆ ಕನ್ನಡಿ ಇಟ್ಟು ತೆಗೆಸುತ್ತಿದ್ದ ಫೋಟೋಗಳು ಬೇಸಿಗೆ ರಜೆಯ ಮುಖ್ಯ ಕಾರ್ಯಕ್ರಮವಾಗಿ ಪರಿವರ್ತಿತವಾಗುತ್ತಿತ್ತು. ಇಡೀ ಮಧ್ಯಾಹ್ನ ಕೂತು ಬೆನ್ನುನೋವು ಬರಿಸಿಕೊಂಡು ಹಾಕಿಸಿಕೊಳ್ಳುತ್ತಿದ್ದ ಮೊಗ್ಗಿನ ಜಡೆಯ ನೋವೆಲ್ಲಾ ಫೋಟೋ ನೋಡಿದಾಗ ಮಾಯವಾಗುತ್ತಿತ್ತು ಅನ್ನಿ.

ಮೊದಲೇ ಹೇಳಿದ ಮೊಗ್ಗಿನ ಜಡೆಯ ಫೋಟೋ ತೆಗೆಸಿಯಾಗಿತ್ತು. ಆದರೆ ಪಾಸ್ಪೋರ್ಟ್ ಸೈಜಿನ ಮೊಟ್ಟಮೊದಲ ಫೋಟೋ ತೆಗೆಸಿದ ಕಥೆ ಹೇಳ್ತೀನಿ. ಆಗೆಲ್ಲ ಏಳನೇ ತರಗತಿ ಪಬ್ಲಿಕ್ ಎಕ್ಸಾಮ್. ಅದರಲ್ಲಿ ನನಗೆ ಜಿಲ್ಲೆಗೆ 7ನೇ ರಾಂಕ್ ಬಂದಿತ್ತು. ಸ್ಕೂಲಿನವರಿಗೆ ನನ್ನ ಫೋಟೋ ಪೇಪರಿನಲ್ಲಿ ಹಾಕಿಸುವ ಅಭಿಲಾಷೆ. ಆದರೆ ನನ್ನ ಪಾಸ್ಪೋರ್ಟ್ ಸೈಜ್ ಫೋಟೋ ಇದುವರೆಗೂ ತೆಗೆಸಿರಲಿಲ್ಲವಲ್ಲ! ಎಲ್ಲಿಂದ ಬರುತ್ತೆ? ಅದಕ್ಕಾಗಿ ಫೋಟೋ ತೆಗೆಸುವ ಯಾತ್ರೆ ಶುರುವಾಯಿತು. ರೀಲ್ ಮುಗಿಯುವ ತನಕ ಫೋಟೋಗಳನ್ನು ಪ್ರಿಂಟ್ ಮಾಡಿ ಕೊಡುತ್ತಿರಲಿಲ್ಲ. ಹಾಗಾಗಿ ಒಂದಷ್ಟು ಸ್ಟುಡಿಯೋಗಳನ್ನು ಪ್ರದಕ್ಷಿಣೆ ಮಾಡಿ ಮರುದಿನ ಯಾರು ಫೋಟೋ ಕೊಡುತ್ತಾರೋ ಆ ಸ್ಟುಡಿಯೋದಲ್ಲಿ ಫೋಟೋ ತೆಗೆಸಿ ಬಂದಾಗಿತ್ತು. ಆ ಸುತ್ತಾಟದಲ್ಲಿ ಕೆದರಿದ ಮುಂದೆಲೆಗೆ ಸ್ಟುಡಿಯೋದ ಬಾಚಣಿಗೆಯಲ್ಲಿ ಸವರಣೆ, ಬಾಡಿದ ಮುಖಕ್ಕೆ ಅಲ್ಲಿದ್ದ ಪೌಡರ್ ಕಣ್ ಕಪ್ಪಿನ ಸರ್ವಿಸ್. ಅಂತೂ ಫೋಟೋ ತೆಗೆಸಿಯಾಗಿತ್ತು. ಕಾಪಿ ತೆಗೆದುಕೊಂಡು ಬಂದು ಪೇಪರಿಗೂ ಕೊಟ್ಟಾಗಿತ್ತು. ನಂತರ ಕಾಲೇಜಿನ ದಿನಗಳಿಗೆ ಫೋಟೋ ಕಡ್ಡಾಯವಾದ್ದರಿಂದ ಪಿಯುಸಿಯಲ್ಲಿ, ಡಿಗ್ರಿಯಲ್ಲಿ, ನಂತರ ಉದ್ಯೋಗ ಬೇಟೆಗೆ ಫೋಟೋ ತೆಗೆಸುವುದು ಸಾಮಾನ್ಯವಾಗಿ ಹೋಗಿತ್ತು. ಕೆಲವೊಂದು ಫೋಟೋಗಳನ್ನು ಸ್ಟುಡಿಯೋದವರು ಗಲ್ಲಾ ಪೆಟ್ಟಿಗೆಯ ಗಾಜಿನ ಕೆಳಗೆ ಹಾಕಿರುತ್ತಿದ್ದರು ಅದರಲ್ಲಿ ನಮ್ಮ ಫೋಟೋ ಇದ್ದರೆ ನಮ್ಮದು ವಿಶ್ವಸುಂದರಿಯ ರೇಂಜ್! ಒಂದೆರಡು ಬಾರಿ ನನ್ನ ಫೋಟೋ ಅಲ್ಲಿ ಸ್ಥಳ ಕಂಡಿತ್ತು. ಈಗ ನೆನೆಸಿಕೊಂಡರೆ ನಗೆ ಬರುತ್ತೆ.

ಇನ್ನು ಮದುವೆಗಳಲ್ಲಿ ಫೋಟೋ ತೆಗೆಸುವುದು ಸಾಮಾನ್ಯದ ವಿಷಯ. ಮದುವೆ ಖರ್ಚಿನಲ್ಲಿ ಒಂದು ಭಾಗ ಇದಕ್ಕೇ ಮೀಸಲಿರುತ್ತಿತ್ತು. ಆನಂತರ ವೀಡಿಯೋಗಳು ಬಂದವು. ಈಗಂತೂ prewedding shoot ಎಲ್ಲಾ ಸೇರಿ ಊಟದ ಖರ್ಚಷ್ಟೇ ಫೋಟೋ ಖರ್ಚೂ ಬರುತ್ತೆ.

ಮದುವೆ ಫೋಟೋ ಅಂದಾಗ ನೆನಪಾಯಿತು. ನಾವು ಹೈಸ್ಕೂಲಿನಲ್ಲಿದ್ದಾಗ ದೊಡ್ಡಮ್ಮನ ಮಗಳ ಮದುವೆಯಾಯಿತು. ನಾವು ಮೂರು ಜನ ಕಸಿನ್ಸ್‌ಗಳದೇ ತುಂಬಾ ಓಡಾಟ. ಆ ಫೋಟೋಗ್ರಾಫರ್ ಕ್ಯಾಮರಾ ಫ್ಲಾಷ್ ನಮ್ಮ ಮೇಲೆ ಬಹಳ ಸಲ ಬಿದ್ದಿತ್ತು. ನಮ್ಮ ಫೋಟೋಗಳನ್ನೇ ತೆಗೆದಿದ್ದಾನೆ ಅನ್ನೋ ಭಾವನೆ (ಭ್ರಮೆ) ನಮಗ. ಆದರೆ ಅದು ಬರೀ ಫ್ಲಾಷ್ ಅಂತ ತಿಳಿದದ್ದು ಮದುವೆ ಆಲ್ಬಮ್ ಬಂದಾಗಲೇ. ನಮ್ಮ ನಿರೀಕ್ಷೆಗಳೆಲ್ಲಾ ಠುಸ್ ಪಟಾಕಿ.

ಅಷ್ಟು ಹೊತ್ತಿಗೆ ಬಣ್ಣದ ಫೋಟೋಗಳು ಕಾಲಿಟ್ಟಿದ್ದವು. ಗೆಳತಿಯರ ತಂಡಗಳು ಪಿಯುಸಿ ಮುಗಿದ ನಂತರ ಹೋಗಿ ನಮ್ಮ ಆಪ್ತ ವಲಯದವರೆಲ್ಲ ಸೇರಿ ಫೋಟೋ ತೆಗೆಸಿಕೊಂಡಿದ್ದು ನೆನಪು.

ಕ್ಯಾಮರಾದಲ್ಲಿ ನಮಗೆ ಬೇಕಾದಂತೆ ಫೋಟೋ ತೆಗೆದುಕೊಂಡಿದ್ದೆಂದರೆ ಡಿಗ್ರಿಯಲ್ಲಿ ಇದ್ದಾಗ. ನಮ್ಮ ಸೆಕ್ಷನ್ ಅವರೆಲ್ಲ ಊಟಿಗೆ ಹೊರಟ ಪ್ರವಾಸದಲ್ಲಿ ನಮ್ಮ ಸಹಪಾಠಿ ಅವರ ಮನೆಯಲ್ಲಿದ್ದ ಕ್ಯಾಮೆರಾ ತಂದಿದ್ದ. ಎಲ್ಲರೂ ಖರ್ಚು ಸಮಾನವಾಗಿ ಹಂಚಿಕೊಂಡು ನಮಗೆ ಬೇಕಾದ ಫೋಟೋಗಳನ್ನು ಪ್ರಿಂಟ್ ಮಾಡಿಸಿಕೊಂಡಿದ್ದೆವು. ಊಟಿ, ಚಾಮುಂಡಿ ಬೆಟ್ಟ, ಅರಮನೆ ಆವರಣ., ಆಗ ಅದು ಕೊಟ್ಟ ಖುಷಿ ಅವರ್ಣನೀಯ. ಈಗಲೂ ಆಲ್ಬಮ್ ತೆಗೆದು ಅದೆಲ್ಲಾ ನೋಡುವಾಗ ಅಂದಿನ ದಿನಗಳ ಮರುಕಳಿಕೆ ಆಗುವುದಂತೂ ಸತ್ಯ.

ಕೆಲಸಕ್ಕೆ ಸೇರಿದ ನಂತರ ಮೊದಲ ಬೋನಸ್ಸಲ್ಲಿ ಕ್ಯಾಮರಾ ಕೊಂಡಿದ್ದು. ನಮ್ಮ ಫೋಟೋಗಳನ್ನು ತೆಗೆದು ತೆಗೆದು ಸುಸ್ತಾಗಿ ಈಗ ವಿಶ್ರಾಂತಿ ತೆಗೆದುಕೊಳ್ತಿದೆ. ಡಿಜಿಟಲ್ ಕ್ಯಾಮರಾ ಬರುವ ತನಕ ರವೀಶ್ ಊರವರ ಎಲ್ಲಾ ಸಮಾರಂಭಕ್ಕೂ ಸಾಥ್ ಕೊಟ್ಟ ನಿಜ ಮಿತ್ರ ಅದು.

ಈಗ ಮೊಬೈಲ್ ಫೋಟೋಗ್ರಫಿ ಬಂದಮೇಲಂತೂ ಕ್ಲಿಕ್ ಮಾಡಲು ಜಿಪುಣತನವೇ ಮಾಡಬೇಕಿಲ್ಲ. ಸಾಕಷ್ಟು ತೆಗೆದು ಬೇಡದ್ದನ್ನು ಅಳಿಸಿದರಾಯಿತು. ಸಂಗ್ರಹಿಸಿಡಲು ಜಾಗ್ರತೆ ವಹಿಸಬೇಕು ಅಷ್ಟೇ. ಫೋಟೋ ಶಾಪ್ ಮಾಡಿದರಂತೂ ಕರೀ ಬೆಕ್ಕು ಬಿಳೀ ಬೆಕ್ಕು ಆಗಿಬಿಡುತ್ತೆ. ಪ್ರತಿಯೊಂದು ಸಂತೋಷದ ಸಣ್ಣ ಸಣ್ಣ ಘಟನೆಗಳು ಸೆರೆಯಾಗುತ್ತವೆ ಮುದ ನೀಡುತ್ತವೆ. ಅಂದಂದಿನ ಭಾವಗಳಿಗೆ ಸಾಕ್ಷೀಭೂತವಾಗಿ ನಿಲ್ಲುತ್ತವೆ. ಹಾಗೆ ಮಿತಿಮೀರಿದ ಸೆಲ್ಫಿ ಹುಚ್ಚು ಪ್ರಾಣಾಪಾಯಗಳಿಗೂ ಕಾರಣವಾಗುತ್ತಿದೆ.

ನಮ್ಮದೇ ಬದುಕಿನ ಕಾಲಘಟ್ಟದಲ್ಲಿ ನೋಡಿದಾಗ ಈ ಫೋಟೋಗಳ ವಿಷಯದಲ್ಲಿ ಆದ ತಾಂತ್ರಿಕ ಬೆಳವಣಿಗೆ ಬೆರಗುಗೊಳಿಸುತ್ತದೆ. ತಂತ್ರಜ್ಞಾನ ಮುಂದುವರೆದಂತೆ ಒಂದು ಕಾಲದ ಲಕ್ಷುರಿ ಮತ್ತೊಂದು ಕಾಲದ ಅಗತ್ಯವಾಗಿ ಮಾರ್ಪಡುವುದನ್ನು ನಾವು ನೋಡುತ್ತಲೇ ಇದ್ದೇವೆ. ಹಾಗೆಯೇ ಫೋಟೋ ಸ್ಟುಡಿಯೋ ಮುಂತಾದ ಅಂದಿನ ಜೀವನೋಪಾಯದ ದಾರಿಗಳು ಇಂದು ಮುಚ್ಚಿ ಹೋಗುತ್ತಿರುವುದಕ್ಕೂ ನಾವು ಮೂಕಪ್ರೇಕ್ಷಕರಾಗಿ ನಿಂತಿದ್ದೇವೆ. ಒಂದು ದಾರಿ ಮುಚ್ಚಿದರೆ ಮತ್ತೊಂದು ದಾರಿ ತೆರೆಯುತ್ತಾ ಹೋಗುತ್ತಿರುವುದಂತೂ ಸತ್ಯ. ಕಾಲಾಯ ತಸ್ಮೈ ನಮಃ ಅಲ್ಲವೇ?

ಇಲ್ಲಿ ನನ್ನ ಕವನದ ಸಾಲುಗಳು ನೆನಪಾಗುತ್ತವೆ.

ನೆನಪಿನ ಸರಕಿಗೆ ಇದುವೇ ಸಂದೂಕ
ಪ್ರತಿಬಾರಿಯೂ ಸ್ಮೃತಿಪುಳಕದ ಜಳಕ
ಅಗಲಿದವರ ನೆನಸುತ ಕಣ್ಣಲಿ ನೀರು
ಹರ್ಷದ ಸವಿ ಕ್ಷಣಗಳ ಸಂತಸ ಪನ್ನೀರು

ಹಳೆಯ ಅಲ್ಬಮ್, ಮೊಬೈಲು, ಫೋಟೋಗಳನ್ನು ತಿರುವಿಹಾಕಿದಾಗ ಸವಿನೆನಪುಗಳ ಜೊತೆ ಈಗ ನಮ್ಮೊಂದಿಗೆ ಇಲ್ಲದವರ ನೆನಪುಗಳು ಕಾಡುತ್ತವೆ. ಆದರೆ ಸಾಂಗತ್ಯದ ಸಿಹಿ ಸ್ಮರಣೆಗಳಷ್ಟೇ ಉಳಿದ ಭಾಗ್ಯ. ಮುಂದೆ ನಮ್ಮ ಫೋಟೋಗಳೂ ಹೀಗೆಯೇ ಅಲ್ವಾ ಎಂದೆನಿಸಿದಾಗ ಜೀವನದ ನಶ್ವರತೆಯ ವಿಷಾದ ಭಾವ ಹೆಪ್ಪುಗಟ್ಟುತ್ತದೆ. ಆದರೆ ಅದೇ ಸ್ಥಾಯಿಯಾಗದೆ ಎಲ್ಲವನ್ನೂ ಕೊಡವಿಕೊಂಡು ಮತ್ತೆ ಮುಂದುವರಿಯುತ್ತದೆ. ಇದುವೇ ಜೀವ ಇದೇ ಜೀವನ ಅಲ್ಲವೇ?

***



ಸ್ವಗತ

– ಮಾಲತಿ ಶ್ರೀನಿವಾಸನ್

ಬೆಳಗಿನ ಜಾವ ಮಲಗಿದ್ದ ಹಾಗೇನೆ ಸುಮತಿ ತಲೆಯಲ್ಲಿ ವಿಚಾರಮಂಥನ ಶುರುವಾಯಿತು.

"ಅಯ್ಯೋ ನಾಲ್ಕು ಗಂಟೆ ಆಗೋಯ್ತು, ಒಲೆ ಉರಿ ಹಾಕ್ಬೇಕು, ಸೌದೆ ಹಸಿದಾದರೆ ಬರಿ ಫಜೀತಿ. ಮಧು ಕ್ಯಾರಿಯರ್‌ಗೆ ಪಲಾವ್ ಬೇಕು ಅಂತ ಬೇರೆ ಕೇಳಿದ್ದಾನೆ, ಇದೊಂದು ವರ್ಷ ಮನೇಲಿ ಇರ್ತಾನೆ. ಆಮೇಲೆ ಮುಂದಿನ ಡಿಗ್ರಿ ಓದಿಗೆ ಎಲ್ಲಿ ಸೇರ್ತಾನೆ ಏನೋ. ನನ್ನ ಕಾಲೇಜಿನ ಕೆಲಸ ಬೇರೆ, ಮಧ್ಯಂತರ ಪರೀಕ್ಷೆಗೆ ಪ್ರಶ್ನೆ ಪತ್ರಿಕೆ ತಯಾರು ಮಾಡಬೇಕು, ಮತ್ತೆ ನಾಳೆ ಟೂರ್ ಹೊರಡೋ ಇವರ ಬಟ್ಟೆ ಬರೆ ಸರಿ ಮಾಡಬೇಕು. ಕಾಲೇಜಿಂದ ಬರ್ತಾ ಮರೀದೆ ಅತ್ತೆ ಬ್ಲಡ್ ಶುಗರ್ ರಿಪೋರ್ಟ್ ಬೇರೆ ತರಬೇಕು, ನೂರಾರು ಯೋಚನೆಗಳು ತಲೆಯನ್ನು ಅದುಮಿದಹಾಗೆ ಅನಿಸಿ, ದಿಗ್ಗನೆ ಹಾಸಿಗೆ ಮೇಲೆ ಎದ್ದು ಕುಳಿತಳು ಸುಮತಿ.

ಎದುರಿಗೆ ಕನ್ನಡಿಯಲ್ಲಿ ಕಂಡ ಮುಖ ನೋಡಿ ತಬ್ಬಿಬ್ಬಾಯಿತು ಒಂದು ನಿಮಿಷ ಎಲ್ಲಿದ್ದೇನೆ ನಾನು. ಅರೆ! ಮನೆಯೆಲ್ಲಾ ನಿಶಬ್ದ. ಅತ್ತೆಯ ಬೆಳಗಿನ ಸುಪ್ರಭಾತದ ದನಿ ಇಲ್ಲ, ಮಕ್ಕಳ ಸದ್ದಿಲ್ಲ. ಸಣ್ಣಗೆ ಗೊರಕೆ ಹೊಡೆಯುತ್ತಾ ಮಲಗಿದ್ದ ಪತಿ ನೋಡಿ ಜೋರಾಗಿ ನಗಬೇಕು ಎನಿಸಿತು. ಮಾಗಿಯ ಚಳಿ ಬೆಳಗಿನ ಜಾವದ ಗತಕಾಲದ ಕನಸು. ಚಳಿಗೆ ಬೆಚ್ಚಗೆ ಹೊದ್ದು ಮಲಗಿದಾಗ ಭೂತ ಭವಿಷ್ಯತ್ತು ಎಲ್ಲಾ ಒಂದಾಗಿ ಕಾಡಿದಂತನಿಸಿ ಸುತ್ತಲೂ ನೋಡಿದಾಗ, ಗೋಡೆಯನ್ನಲಂಕರಿಸಿದ ಮಗ ಸೊಸೆ ಮೊಮ್ಮಕ್ಕಳ ಚಿತ್ರ ಕಣ್ಣನ್ನು ಮಂಜಾಗಿಸಿತು.

ದಿಂಬನ್ನು ಅಪ್ಪಿ ಗಂಡನನ್ನು ಒತ್ತರಿಸಿ ಮತ್ತೆ ಮಲಗಿದಾಗ ಹಳೆಯ ಗತಕಾಲದ ಆ ಪುಟ್ಟ ಮನೆಯ ನೆನಪು ಕಾಡಿತ್ತು. ಪುಟ್ಟ ಪಡಸಾಲೆ, ಆದಕ್ಕೆ ಅಂಟಿಕೊಂಡಂತೆ ದೊಡ್ಡದಾದೊಂದು ನಡುಕೋಣೆ, ಮಲಗಲು ಪುಟ್ಟ ಕೋಣೆ ಪಕ್ಕದಲ್ಲಿ ಅಡುಗೆಮನೆ. ನಾದಿನಿ ಮೈದುನರಿಲ್ಲದ ಅತ್ತೆ ಮಾವ ಗಂಡ ಹೆಂಡತಿಯ ಪುಟ್ಟ ಸಂಸಾರ. ಅತ್ತೆ ಶಾರದಮ್ಮ ಶ್ರಮಜೀವಿ. ದಾಯಾದಿಗಳಿಂದ ಗಂಡನ ಪ್ರಾಣ ಉಳಿಸಲು ಹಳ್ಳಿಯಲ್ಲಿದ್ದ ಆಸ್ತಿ ಮನೆ ಎಲ್ಲ ಬಿಟ್ಟುಕೊಟ್ಟು, ಅವರು ಕೈಲಿಟ್ಟ ಅಲ್ಪಸ್ವಲ್ಪ ಹಣದಲ್ಲಿ ಬೆಂಗಳೂರಿನಲ್ಲಿ ಜನನಿಬಿಡ ಸ್ಥಳದಲ್ಲಿ ಪುಟ್ಟ ಮನೆ ಮಾಡಿದ್ದರು. ಮಾವ ರಾಮರಾಯರು ಖಾಸಗಿ ಸಂಸ್ಥೆಯಲ್ಲಿ ಲೆಕ್ಕಪತ್ರ ಬರೆಯುತ್ತಿದ್ದರು. ಯಾವುದಕ್ಕೂ ಎಟುಕದ ಸಂಪಾದನೆ. ತಾಳ್ಮೆ, ಜಾಣತನದಿಂದ ಮಗನನ್ನು ಓದಿಸಿದ್ದರು. ವಿಜ್ಞಾನದಲ್ಲಿ ಆಸಕ್ತಿ, ಸ್ನಾತಕೋತ್ತರ ಪದವಿ ಪಡೆದ ಮಾಧು, ಖಾಸಗಿ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದ.

ಅಕ್ಕನ ಮಗಳಿಗಾಗಿ ವರಾನ್ವೇಷಣೆಗೆ ಹೊರಟ ಸುಮತಿಯ ತಾಯಿ ಶಾರದಮ್ಮನನ್ನು ಸಂಪರ್ಕಿಸಿದ್ದರು. ಜಾತಕ ಸರಿ ಬರಲಿಲ್ಲ ಅಂತ ಹೇಳಿದ ಶಾರದಮ್ಮನವರು ಸುಮತಿಯನ್ನು ಮಾಧುವಿಗೆ ತಂದುಕೊಳ್ಳುವ ಪ್ರಸ್ತಾಪ ಮುಂದಿಟ್ಟರು. ಮಾಧುವಿನ ತಂದೆಯ ಆರೋಗ್ಯ ಅಷ್ಟು ಸರಿಯಾಗಿರಲಿಲ್ಲ. ಅದುದರಿಂದ ಸುಮತಿಯನ್ನು ಅವರ ಮನೆಗೆ ಕರೆದುಕೊಂಡು ಬರಲು ಕೇಳಿದಾಗ ಅತ್ತೆಯವರನ್ನು ಕೇಳುತ್ತೇನೆ ಅಂತ ಮಾತು ಹಾರಿಸಿದ್ದರು ಸುಮತಿಯ ತಾಯಿ.

ಈ ವಿಷಯ ಅತ್ತೆಯೊಡನೆ ಸುಮತಿಯ ತಾಯಿ ಹೇಳಿದಾಗ ಅವರು, "ನಮ್ಮ ಮನೆ ಹೆಣ್ಣುಮಕ್ಕಳು ಪ್ರದರ್ಶನದ ಗೊಂಬೆಯಾಗುವುದು ಸಾಧ್ಯವಿಲ್ಲ. ಅವಳನ್ನ ಹಾಗಲ್ಲ ಕರ್ಕೊಂಡು ಹೋಗುವುದು ಬೇಡ, ಬೇಕಿದ್ರೆ ಅವರೇ ಬರ್ಲಿ". ಅತ್ತೆಯ ಕಟ್ಟುನಿಟ್ಟಿನ ಮಾತು. ಸರಿ ಅಂತ ಸುಮ್ಮನಾಗಿದ್ದರು ಸುಮತಿಯ ಅಮ್ಮ.

ಆದರೆ ಶಾರದಮ್ಮ ಸುಮ್ಮನಿರಲಿಲ್ಲ. ಸುಮತಿಯ ಬಗ್ಗೆ ಅವರ ಸ್ನೇಹಿತೆಯ ಮಗಳು ಸುಮತಿಯ ಅಧ್ಯಾಪಕಿಯಿಂದ ವಿಷಯ ಸಂಗ್ರಹಿಸಿ, ತನ್ನ ಸ್ನೇಹಿತೆಯೊಡನೆ ಒಂದು ದಿನ ಸುಮತಿಯ ಮನೆಗೆ ದಿಢೀರ್ ಅಂತ ಹೊರಟರು.

ಅವರನ್ನು ಆದರಿಸಿದ ಸುಮತಿಯ ತಾಯಿ ಆಗತಾನೆ ಕಾಲೇಜು ಮುಗಿಸಿ ಬಂದಿದ್ದ ಮಗಳಿಗೆ, "ನೋಡು ನಿನ್ನ ನೋಡೋಕೆ ಬಂದಿದ್ದಾರೆ. ಒಬ್ಬನೇ ಮಗ, ಚೆನ್ನಾಗಿ ಓದಿದ್ದಾನೆ ಹುಡುಗ. ಗಲಾಟೆ ಮಾಡದೆ ಸುಮ್ಮನೆ ಹೋಗಿ ಕೂತ್ಕೋ" ಅಂತ ಹೇಳಿದರು. ಅಜ್ಜಿ ಅಮ್ಮನ ಕೋಪಕ್ಕೆ ಹೆದರಿ ಸುಮತಿ ಸೀರೆ ಸರಿ ಮಾಡಿಕೊಂಡು ಹೊರಗೆ ಬಂದಾಗ, ಅವಳನ್ನು ನಗುತ್ತಾ ನೋಡಿದರು ಶಾರದಮ್ಮ. ನೀಳ ಜಡೆ ಮಾಟವಾದ ಮೈಕಟ್ಟು, ಸ್ವಲ್ಪ ಪೀಚೆನಿಸಿದರೂ ಮಕ್ಕಳಾದರೆ ಸರಿ ಹೋಗ್ತಾಳೆ, ನನ್ನ ಮಾಧುಗೆ ಸರಿಯಾದ ಜೋಡಿ" ಅನಿಸಿತು ಅವರಿಗೆ.

ಮುಂದಿನದೆಲ್ಲ ಕನಸಿನಂತೆ ನಡೆದಿತ್ತು ಸುಮತಿಯ ಜೀವನದಲ್ಲಿ. ಪರೀಕ್ಷೆ ಮುಗಿಯುತ್ತಿದ್ದಂತೆ ಮಾಧುವಿನೊಡನೆ ಭೇಟಿ, ನಂತರ ಒಪ್ಪಿಗೆ, ತಿಂಗಳೊಳಗೆ ಮದುವೆ.

.

ಸಮಾನ ಮನಸ್ಕರಾದ ಮಾಧು, ಸುಮತಿ ಇಬ್ಬರಿಗೂ ಕಲಿಕೆಯಲ್ಲಿದ್ದ ಆಸಕ್ತಿ, ಅಧ್ಯಾಪಕ ವೃತ್ತಿಯ ಒಲವು ಇಬ್ಬರನ್ನೂ ಹತ್ತಿರ ಸೆಳೆದಿತ್ತು. ವರುಷದೊಳಗೆ ಹುಟ್ಟಿದ ಮಗ ಮಧುಕರ. ನಂತರ ನಾಲ್ಕು ವರ್ಷಕ್ಕೆ ಮಗಳು ಮಾಧುರಿಯ ಆಗಮನ. ಮಕ್ಕಳಿಬ್ಬರ ವಿದ್ಯಾಭ್ಯಾಸ, ಅತ್ತೆಮಾವಂದಿರ ಆರೈಕೆ, ಮತ್ತೆ ಅವರ ಅಗಲುವಿಕೆ, ಮಕ್ಕಳ ಮದುವೆ, ಮೊಮ್ಮಕ್ಕಳ ಆಗಮನ ಎಲ್ಲರ ಜೀವನದಲ್ಲಿ ನಡೆಯುವ ಘಟನೆಗಳೇ. ಈ ಮುಸ್ಸಂಜೆಯಲ್ಲಿ ಈಗ ನಿವೃತ್ತ ಜೀವನ.

ನಿವೃತ್ತಿ ಎಲ್ಲಿ ನಮಗೆ? ಮನ ಆಲೋಚಿಸಿತು. ಕೆಲಸದಲ್ಲಿದ್ದಾಗಲೇ ಬಿಡುವಿತ್ತು. ಈಗ ಈ ಇಳಿವಯಸಿನಲ್ಲಿ ತಮ್ಮದಾಗಿಸಿಕೊಂಡ ಹವ್ಯಾಸಗಳು, ಉಸಿರಾಡಲು ಪುರುಸೊತ್ತಿಲ್ಲ ಎಂಬ ಭ್ರಮೆ ಹುಟ್ಟಿಸಿತ್ತು ಅವಳಿಗೆ. ನಿಜವಾಗಲೂ ಕೆಲಸ ಜಾಸ್ತಿಯಾಯಿತೆ ಅಥವಾ ಮಾಡುವ ಗತಿ ನಿಧಾನಿಸಿದೆಯೋ? ಮನ ಆಲೋಚಿಸುತ್ತಿತ್ತು. ಎರಡನೆಯದು ಸಮಂಜಸ ಅನಿಸಿತು. ವಯಸ್ಸು ಆದಂತೆ ಕೆಲಸ ಮಾಡುವ ಗತಿ ನಿಧಾನಿಸುತ್ತಿರುವುದು ನಿಜ. ‘‘ಬೇಡದ್ದನ್ನೆಲ್ಲ ಈ ವಯಸ್ಸಲ್ಲೇಕೆ ಸುಮ್ಮನೆ ಹಚ್ಚಿಕೊಳ್ಳುವುದು’’, ಗಂಡನನ್ನು ಛೇಡಿಸಿದಾಗ ಸಿಗುತ್ತಿದ್ದು ಒಂದೇ ಉತ್ತರ, "ಸುಮ್ನೆ ಕೂತ್ರೆ ತಲೆ ಬಿಸಿಯಾಗುತ್ತದೆ, ಜೀವನ ಮುಂದೆ ಸಾಗಲ್ಲ, ಓಡ್ತಾ ಇರಬೇಕು ಕಣೆ" ಅಂದಾಗ, ಸಾಕಪ್ಪ ಈ ಮನುಷ್ಯನ ಹಿಂದೆ ಓಡಿ ಓಡಿ ಸಾಕಾಯ್ತು ನಂಗೆ. ಐದು ದಶಕಗಳಲ್ಲಿ ಅದೇ ಹುರುಪು ಅದೇ ಹುಮ್ಮಸ್ಸು ಇವರಿಗೆ ಅಂತ ಮನಸ್ಸು ಪಿಸುಗುಟ್ಟಿತು. ದಶಕಗಳ ನಂತರ ಸಿಕ್ಕ ಈ ಏಕಾಂತ. ಇಬ್ಬರ ಸ್ವತಂತ್ರ್ಯ ಜೀವನ. ಈ ವ್ಯವಸ್ಥೆ ಬದಲಾಯಿಸುವುದು ಅಷ್ಟು ಸುಲಭಾನೇ? ಇದು ಬಿಡದ ನಂಟು.

ಹೊರದೇಶ ಸೇರಿರುವ ಮಕ್ಕಳ ಹತ್ತಿರ ಹೋಗಿ ನಾಲ್ಕು ದಿನ ಇದ್ದು ಸಂತೈಸುವುದು ಹಿತ. ನಾಲ್ಕು ದಿನ ಇದ್ದು ಹೋಗುವ ಹಿರಿಯರು ಎಂದು ತಾಳ್ಮೆ, ಪ್ರೀತಿಯಿಂದ ನೋಡುವ ಮಕ್ಕಳು, ಸದಾ ಅಲ್ಲೇ ಇರಲು ಹೋದರೆ ಹೇಗೆ ಪ್ರತಿಕ್ರಿಸುತ್ತಾರೋ? ಯೋಚಿಸಬೇಕಾದ ವಿಷಯ. ಹೋದಾಗೆಲ್ಲ ಸಂತಸದ ಹೊಳೆ ಹರಿಸಿ ಊರೂರು ಸುತ್ತಿಸಿ ಮುದ ನೀಡುತ್ತಿದ್ದ ಮಕ್ಕಳು, ಮೊಮ್ಮಕ್ಕಳ ಬಗ್ಗೆ ಸುಮತಿಗೆ ಪ್ರೀತಿ, ಹೆಮ್ಮೆ ಇತ್ತು. ಆದರೂ ಅಲ್ಲಷ್ಟು ಇಲ್ಲಷ್ಟು ಹಂಚಿಹೋದ ಜೀವನ ತಮಿಬ್ಬರದು, ಸ್ವಲ್ಪ ಓದು, ಸ್ವಲ್ಪ ಸಂಗೀತ, ಸ್ವಲ್ಪ ಬರಹ, ಬಿಟ್ಟುಬಿಡದ ಯೋಗಾಭ್ಯಾಸ, ಯಾವುದನ್ನೂ ಸರಿಯಾಗಿ ಮಾಡಲಿಲ್ಲ ಅನ್ನುವ ಭಾವ ಸದಾ ಮನಸ್ಸಿನಲ್ಲಿ.

"ಸುಮಾ, ಬೆಳಗಾಯಿತು ಕಾಫಿ ಎಲ್ಲೇ" ಪತಿಯ ದನಿ ಮತ್ತೆ ಅವಳನ್ನು ವಾಸ್ತವಕ್ಕೆ ಸೆಳೆದಾಗ ದಿಂಬು ದೂರ ಎಸೆದು, ಯೋಚನೆಗಳಿಗೆ ಕಡಿವಾಣ ಹಾಕಿ ಅಡುಗೆಮನೆಗೆ ಕಡೆಗೆ ಓಡಿದಳು ಸುಮತಿ.

***

ವಿಭಕ್ತಿ ಪ್ರತ್ಯಯ ಹಾಗೂ ಕಾರಕಗಳು

– ಗಣಪತಿ ಹೆಗಡೆ

ವಿಭಕ್ತಿ ಪ್ರತ್ಯಯ ಎಂದರೆ ಸ್ವತಂತ್ರವಾದ ಅರ್ಥವಿಲ್ಲದ, ನಾಮಪದ ಅಥವಾ ಸರ್ವನಾಮಗಳ ಮೂಲರೂಪದ (ನಾಮಪ್ರಕೃತಿ) ಜೊತೆಗೆ ಸೇರಿ, ಅವುಗಳ ಮತ್ತು ಕ್ರಿಯಾಪದದ ನಡುವಿನ ಸಂಬಂಧವನ್ನು ತಿಳಿಸುವ ಅಕ್ಷರ ಅಥವಾ ಅಕ್ಷರಗಳ ಸಮೂಹ. ಈ ವಿಭಕ್ತಿ ಪ್ರತ್ಯಯಗಳು ನಾಮಪದಗಳು ವಾಕ್ಯದಲ್ಲಿ ಕರ್ತೃ, ಕರ್ಮ, ಕರಣ ಮುಂತಾದ ಕಾರಕಗಳನ್ನು ಸೂಚಿಸುತ್ತವೆ.

"ರಾಮನು ತನ್ನ ಕಾಲಿನಿಂದ ಚೆಂಡನ್ನು ಒದೆದನು". ಎಂಬಲ್ಲಿ ರಾಮ, ತಾನು, ಕಾಲು, ಚೆಂಡು ಇವು ನಾಲ್ಕು ನಾಮಪ್ರಕೃತಿಗಳು (ನಾಮಪದಗಳಲ್ಲ). 'ಒದೆದನು' ಎನ್ನುವ ಕ್ರಿಯಾಪದದ ಜೊತೆ ಈ ನಾಮಪ್ರಕೃತಿಗಳನ್ನು ಇದ್ದ ಹಾಗೇ ಬರೆದರೆ ಅರ್ಥವಾಗುವುದಿಲ್ಲ. ಈ ನಾಲ್ಕೂ ನಾಮಪ್ರಕೃತಿಗಳ ಜೊತೆ 'ಉ, ಅ, ಇಂದ, ಅನ್ನು' ಹೀಗೆ ಸ್ವತಂತ್ರವಾದ ಆದರೆ ಸ್ವಂತ ಅರ್ಥವಿಲ್ಲದ ಅಕ್ಷರ ಅಥವಾ ಅಕ್ಷರ ಸಮೂಹವನ್ನು 'ವಿಭಕ್ತಿ ಪ್ರತ್ಯಯ' ಎನ್ನುತ್ತಾರೆ.

"ಚಿತ್ರಕಾರ ಹಾಳೆ ಕುಂಚ ಚಿತ್ರ ಬಿಡಿಸಿದನು", ಎನ್ನುವಲ್ಲಿ 'ಉ, ಅಲ್ಲಿ, ಇಂದ, ಅನ್ನು ಎನ್ನುವ ವಿಭಕ್ತಿ ಪ್ರತ್ಯಯಗಳನ್ನು ಸೇರಿಸಿದಾಗ ಮಾತ್ರ "ಚಿತ್ರಕಾರನು ಹಾಳೆಯಲ್ಲಿ ಕುಂಚದಿಂದ ಚಿತ್ರವನ್ನು ಬಿಡಿಸಿದನು" ಎನ್ನುವ ಸಮಂಜಸವಾದ ಅರ್ಥ ಸ್ಫುರಣವಾಗುತ್ತದೆ.

ಹೀಗೆ 'ವಿಭಕ್ತಿ ಪ್ರತ್ಯಯಗಳು ಎಂದರೆ ನಾಮಪದಗಳು ಅಥವಾ ಸರ್ವನಾಮ ಪದಗಳ ಜೊತೆಗೆ ಸೇರಿ, ವಾಕ್ಯದಲ್ಲಿ ಅವುಗಳ ಕರ್ತೃ, ಕರ್ಮ, ಕರಣ (ಆಯುಧ ಅಥವಾ ಉಪಕರಣ) ಮುಂತಾದ ಸಂಬಂಧವನ್ನು ಸೂಚಿಸುವ ಅಥವಾ ಕ್ರಿಯಾಪದ ದೊಂದಿಗೆ ನಾಮಪದಗಳ ಸಂಬಂಧವನ್ನು ತಿಳಿಸುವ ಅಕ್ಷರಗಳ ಸಮೂಹಗಳಾಗಿವೆ. ಇವುಗಳು ಸ್ವತಂತ್ರ ಪದಗಳಲ್ಲ, ಆದರೆ ನಾಮಪ್ರಕೃತಿಗಳಿಗೆ ಸೇರಿ ಪೂರ್ಣ ನಾಮಪದವನ್ನು ರೂಪಿಸುತ್ತವೆ.

ವಿಭಕ್ತಿ ಪ್ರತ್ಯಯಗಳ ಕಾರ್ಯ:

ಉಪಯೋಗ: ಒಂದು ವಾಕ್ಯದಲ್ಲಿ ನಾಮಪದಗಳು ಮತ್ತು ಕ್ರಿಯಾಪದಗಳ ನಡುವಿನ ಸಂಬಂಧವನ್ನು ವ್ಯಕ್ತಪಡಿಸಲು ವಿಭಕ್ತಿಗಳು ಬಳಕೆಯಾಗುತ್ತವೆ.

ಕಾರ್ಯ: ನಾಮಪ್ರಕೃತಿಗಳಿಗೆ ವಿಭಕ್ತಿ ಪ್ರತ್ಯಯಗಳು ಸೇರುವುದರಿಂದ ಆ ಪದವು ಒಂದು ಪೂರ್ಣ ನಾಮಪದವಾಗಿ ಬದಲಾಗುತ್ತದೆ.

ಇದು ಏಕೆ ಮುಖ್ಯ?:

ವಿಭಕ್ತಿಗಳನ್ನು ಅರ್ಥಮಾಡಿಕೊಳ್ಳುವುದರಿಂದ ವಾಕ್ಯಗಳನ್ನು ಸರಿಯಾಗಿ ರಚಿಸಲು ಮತ್ತು ಭಾಷಾ ಕೌಶಲವನ್ನು ಸುಧಾರಿಸಲು ಸಹಾಯವಾಗುತ್ತದೆ. ಇದು ಪ್ರಾಥಮಿಕ ಶಾಲೆಯಿಂದ ಪದವಿ ಮಟ್ಟದವರೆಗೆ ಮತ್ತು ಸಾರ್ವತ್ರಿಕವಾಗಿ ಸಾಹಿತ್ಯಾಸಕ್ತರಿಗೆ ಉಪಯುಕ್ತವಾಗಿದೆ.

ವಿಭಕ್ತಿ ಪ್ರತ್ಯಯಗಳು, ವಾಕ್ಯವು ಪೂರ್ಣಾರ್ಥವನ್ನು ಹೊಂದಲು ಬೇರೆ ಬೇರೆ ನಾಮಪ್ರಕೃತಿಗಳಿಗೆ ಅನುಕೂಲವಾದ ಸಂಬಂಧವನ್ನು ತಿಳಿಸಿ ಕ್ರಿಯೆಗೆ ಹೇಗೆ ಸಹಕಾರಿಯಾಗುತ್ತದೆ ಎನ್ನುವುದರ ಮೇಲೆ ಅವಲಂಬಿಸಿವೆ.

ನಾಮಪ್ರಕೃತಿಗಳಿಗೆ ಸೇರಿ ನಾಮಪದವಾಗುವಾಗ ಈ ವಿಭಕ್ತಿಪ್ರತ್ಯಯಗಳು ಒಂದು ನಿಶ್ಚಿತವಾದ ಸಂಬಂಧವನ್ನು ವಿವರಿಸುತ್ತವೆ. ಈ ಸಂಬಂಧವನ್ನೇ ಕಾರಕಗಳು ಎನ್ನುತ್ತಾರೆ.

ಕಾರಕಾರ್ಥಗಳನ್ನು ವಿವರಿಸುವುದು:

ಯಾರು	ಕರ್ತೃ
ಯಾರನ್ನು	ಕರ್ಮ
ಯಾವುದರಿಂದ	ಕರಣ (ಕಲ್ಲಿನಿಂದ ಹೊಡೆದನು)
ಯಾರಿಗೆ	ಸಂಪ್ರದಾನ
ಯಾವುದರಿಂದ	ಅಪಾದಾನ (ಮರದಿಂದ ಬಿದ್ದಿತು)
ಯಾರ	ಸಹಸಂಬಂಧ (ಕಾರಕವಲ್ಲ)
ಯಾವುದರಲ್ಲಿ	ಅಧಿಕರಣ

ಕರ್ತೃ, ಕರ್ಮ, ಕರಣ, ಸಂಪ್ರದಾನ, ಅಪಾದಾನ, ಅಧಿಕರಣ ಮುಂತಾದವು ಕಾರಕಾರ್ಥಗಳನ್ನು ವಿಭಜಿಸಿ ಹೇಳುತ್ತವೆ.

ವಿಭಕ್ತಿ ಪ್ರತ್ಯಯಗಳು ಏಳಾದರೂ ಕಾರಕಗಳು ಆರು ಅಂತಲೇ ಗುರುತಿಸುತ್ತಾರೆ. ಷಷ್ಠೀ ವಿಭಕ್ತಿ ಪ್ರತ್ಯಯ ಕ್ರಿಯೆಗೆ ನೇರವಾಗಿ ಸಂಬಂಧಿಸಿರದೇ ಇದ್ದುದರಿಂದ ಕಾರಕ ಅಂತ ಅನಿಸಿಕೊಳ್ಳುವುದಿಲ್ಲ.

ಹಳಗನ್ನಡ ಹಾಗೂ ಹೊಸಗನ್ನಡದಲ್ಲಿ ವಿಭಕ್ತಿ ಪ್ರತ್ಯಯಗಳು:

ನಾಮ ಪ್ರಕೃತಿ: ರಾಮ.

ವಿಭಕ್ತಿ ಕಾರಕಾರ್ಥ ಪ್ರತ್ಯಯಗಳು			ನಾಮಪದ	
	ಹೊಸ ಕನ್ನಡ	ಹಳ ಕನ್ನಡ	ಹೊಸ ಕನ್ನಡ	ಹಳ ಕನ್ನಡ
ಪ್ರ. ಕರ್ತೃ	ಉ	ಮ್	ರಾಮನು	ರಾಮಂ
ದ್ವಿ. ಕರ್ಮ	ಅನ್ನು	ಅಮ್	ರಾಮನನ್ನು	ರಾಮನಂ
ತೃ. ಕರಣ	ಇಂದ	ಇಂ	ರಾಮನಿಂದ	ರಾಮನಿಂ
ಚ. ಸಂಪ್ರದಾನ	ಇಗೆ, ಗೆ, ಕ್ಕೆ	ಅಂಗೆ	ರಾಮನಿಗೆ	ರಾಮಂಗೆ
ಪಂ. ಅಪಾದಾನ	ದೆಸೆಯಿಂದ	ಅತ್ತಣಿಂ	ರಾಮನ ದೆಸೆಯಿಂದ	ರಾಮನತ್ತಣಿಂ
ಷ. ಸಹಸಂಬಂಧ	ಅ	ಅ	ರಾಮನ	ರಾಮನ
ಸ. ಅಧಿಕರಣ	ಅಲ್ಲಿ	ಒಳ್	ರಾಮನಲ್ಲಿ	ರಾಮನೊಳ್

ಸಾಮಾನ್ಯವಾಗಿ ನಾಮಪ್ರಕೃತಿಯ ಜೊತೆ ಪ್ರಥಮಾ ವಿಭಕ್ತಿ 'ಉ' ಸೇರುವುದರಿಂದ ಬೇರೆ ನಾಮಪದವಾಗುತ್ತದೆ. (ಅಲ್ಲಿ ಬೇರೊಂದು ಅಕ್ಷರವು ಆಗಮವಾಗುತ್ತದೆ).

(ರಾಮ+ಉ=ರಾಮನು)

(ಸುಂದರಿ+ಉ=ಸುಂದರಿಯು)

ಆದರೆ ಕೆಲವೊಂದು 'ಉ' ಕಾರಾಂತ ನಾಮಪ್ರಕೃತಿಯ ಜೊತೆ ಪ್ರಥಮಾ ವಿಭಕ್ತಿ 'ಉ' ಸೇರುವುದರಿಂದ ನಾಮಪದ ಬದಲಾಗುವುದಿಲ್ಲ.

(ಮಾತು+ಉ=ಮಾತು)

(ಬೇರು+ಉ=ಬೇರು)

(ಸೂರು+ಉ=ಸೂರು)

ಇಂತಹ ಉಕಾರಾಂತ ನಾಮಪ್ರಕೃತಿಯ ಜೊತೆ ಉಳಿದ ವಿಭಕ್ತಿ ಪ್ರತ್ಯಯಗಳೂ ಸೇರಿದಾಗ ಆಗುವ ನಾಮಪದಗಳು.

ಮಾತು+ಉ = ಮಾತು

ಮಾತು+ಅನ್ನು = ಮಾತನ್ನು

ಮಾತು+ಇಂದ = ಮಾತಿಂದ (ಕೆಲವರು ಮಾತಿನಿಂದ ಅಂತ ಹೇಳುತ್ತಾರೆ. ಆದರೆ ಅದು ಸರಿಯಲ್ಲ)

ಮಾತು+ಇಗೆ = ಮಾತಿಗೆ

ಮಾತು+ಇಂದ = ಮಾತಿಂದ

ಮಾತು+ಅ = ಮಾತ

ಮಾತು+ಅಲ್ಲಿ = ಮಾತಲ್ಲಿ (ಮಾತಿನಲ್ಲಿ ×)

(ಇಲ್ಲಿ ಎಲ್ಲವೂ ಸ್ವರಲೋಪವಾಗುತ್ತದೆ)

***

ನೋಡಬ್ಯಾಡ ನೋಡಬ್ಯಾಡ

– ಹಿಮನಾಥ

ನೋಡಬ್ಯಾಡ ನೋಡಬ್ಯಾಡ
ನೋಡಿ ಹೀಂಗ ನನ್ನನು ಕೊಲ್ಲಬ್ಯಾಡ

ಬಳುಕಿ ಬಳುಕಿ ನೀನು ನಡೆಯಬ್ಯಾಡ
ನಡೆದು ಹೀಂಗ ಡವಡವ ತರಬ್ಯಾಡ
ನೀ ಹೀಂಗ ನಡೆದರೆ ನನ್ನ ನೋಡುತ
ನಾ ಹ್ಯಾಂಗ ನಿಲಬೇಕು ಕಾಲಮ್ಯಾಗಾ ||ನೋ||

ಮಿಟುಕಲಾಡಿ ಹೆಣ್ಣು ನೀ ಹಾಡಿಯೊಳಗ
ಕಣ್ಣು ಮಿಟುಕಿಸ್ ಬ್ಯಾಡ ನೀನು ನೋಡಿ ನನ್ನ
ಕರೆಂಟು ಹೊಡಿತೈತೆ ದೇಹದೊಳಗ
ಸುಮ್ನೆ ನೆಟ್ಗೆ ನಡೀಲಿಕ್ಕೆ ಬರೋದಿಲ್ಲವಾ ||ನೋ||

ಮೂಗು ಎಷ್ಟು ನೀಳವೈತಿ ಗಲ್ಲವೆಷ್ಟು ಚೂಪೈತಿ
ಗುಲಾಬಿ ಕೆನ್ನೆ ನಯವಾಗೈತಿ ತುಟಿ ಎಷ್ಟು ಕೆಂಪೈತಿ
ನನ್ನ ಕತ್ತು ತಿರುಗೂದಿಲ್ಲ ಕಣ್ಣರೆಪ್ಪೆ ಮುಚ್ಚೋದಿಲ್ಲ
ಹೀಂಗ ಯಾಕೆ ನನ್ನನು ಮರುಳ ಮಾಡುತಿ ||ನೋ||

ಸೆರಗ ಸರಿಸದಿರಾಗಾಗ ಮಾಟಗಾತಿ
ತೆಳು ನಡುವ ಬಳುಕಿಸ್ಬೇಡ ಅಂದಗಾತಿ
ತೋರ್ಣಕಂಬದ್ ಕಾಲುಗಳ ಸರಸಗಾತಿ
ಝುಣಕ್ಝುಣಕ್ ಗೆಜ್ಜೆಗಳಲಿ ಕುಣಿಯಬೇಡ ||ನೋ||

***

ಧೀಮಂತ ಭದ್ರಣ್ಣ

– ಟಿ. ಎಸ್. ಶ್ರವಣ ಕುಮಾರಿ

ನಮ್ಮ ಭದ್ರಣ್ಣ ಅಂತಿಂಥವರಲ್ಲ; ಅವರಂಥವರು ಬಹಳಷ್ಟಿಲ್ಲ. ಯಾರಿವರು... ಅಂದ್ರಾ? ಅದನ್ನ ಹೇಳೋಕೇ ಬಂದೆ. ಇವರು ಜಯನಗರ ಎರಡನೇ ಬ್ಲಾಕ್ ಶಾಖೆಯಲ್ಲಿ ನಾನು ಕೆಲಸ ಮಾಡ್ತಿದ್ದಾಗ ಸಹೋದ್ಯೋಗಿಯಾಗಿದ್ದವರು ಮತ್ತು ಆ ಶಾಖೆಯ ಕಾರ್ಮಿಕ ಸಂಘದ ಮುಖಂಡರೂ ಕೂಡಾ. ಇಷ್ಟು ಮಾತ್ರಾ ಹೇಳಿದರೆ ಅವರ ಬಗ್ಗೆ ಏನನ್ನೂ ಹೇಳಿದಂತಾಗಲಿಲ್ಲ; ನಾನಾದರೂ ಎಷ್ಟನ್ನು ಹೇಳಲು ಸಾಧ್ಯ? ಕುರುಡ ಮುಟ್ಟಿದ ಆನೆಯಂತೆ ನನ್ನ ಅರಿವಿನ ವ್ಯಾಪ್ತಿಗೆ ಬಂದಷ್ಟನ್ನು ಹೇಳುತ್ತಿದ್ದೇನೆ ಅಷ್ಟೇ.

ನೋಡಿದ ಕೂಡಲೇ ಗೌರವ ಮೂಡಿಸುವ ವ್ಯಕ್ತಿತ್ವ; ಆಕರ್ಷಕ ರೂಪ; ಕುಳ್ಳೆಂದು ಹೇಳಲಾಗದ, ಎತ್ತರವೆಂದು ಬಣ್ಣಿಸಲಾಗದ ಮಟ್ಟಸವಾದ ಎತ್ತರ; ಗೌರವರ್ಣ; ಪುಟ್ಟ ಕಣ್ಣುಗಳು; ಗುಂಗುರು ಕೂದಲು; ತುಸು ದಪ್ಪಕ್ಕೆ ಹತ್ತಿರದ ಮೈಕಟ್ಟು; ಮುಖದಲ್ಲಿ ಸದಾ ಒಂದು ಮಂದಸ್ಮಿತ; ನಡಿಗೆಯಲ್ಲಿ ಗಜಗಾಂಭೀರ್ಯ; ನುಡಿ ಮೆಲುದನಿಯಾದರೂ ಎದುರಲ್ಲಿದ್ದವರನ್ನು ತನ್ನ ಪ್ರಭಾವಕ್ಕೆ ಎಳೆದುಕೊಳ್ಳುವಂತಹ ಮಾಂತ್ರಿಕ ಸ್ಪರ್ಷ. ಆಳಾಗಲೀ, ಅಧಿಕಾರಿಯಾಗಲೀ ಅವರೊಂದಿಗೆ ಗೌರವದಿಂದ ವ್ಯವಹರಿಸದಿರಲು ಸಾಧ್ಯವೇ ಇಲ್ಲ ಎನ್ನುವಂತಹ ರಾಜಕಳೆಯ ಒಂದು ಆಕರ್ಷಕ ವ್ಯಕ್ತಿತ್ವ.

ಆಗಿನ್ನೂ ಲೆಡ್ಜರುಗಳ ಕಾಲ. ಬ್ಯಾಂಕಿನಲ್ಲಿ ಟೆಲ್ಲರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದರು. ಕುಮಾರನ್ಸ್ ಚಿಲ್ಡ್ರನ್ ಹೋಂನ ಟಾಟಾ ಸಿಲ್ಕ್ ಫಾರಂ ಶಾಲೆಯಲ್ಲಿ ನಮ್ಮ ವಿಸ್ತರಿತ ಮುಂಗಟ್ಟೆಯೊಂದಿತ್ತು. ಅದಕ್ಕೆ ದಿನವೂ ಒಬ್ಬ ಅಧಿಕಾರಿ ಮತ್ತು ಒಬ್ಬ ಟೆಲ್ಲರ್ ಹೋಗಬೇಕಿತ್ತು. ಭದ್ರಣ್ಣ ಹೋಗುತ್ತಾರೆಂದರೆ ಅದು ಬರೀ ಟೆಲ್ಲರ್ ಮಾತ್ರಾ; ಹಾಗಾಗಿ ಅವರೇ ಖಾಯಮ್ಮಾಗಿ ಅಲ್ಲಿಗೆ ನಿಯೋಜಿತರಾಗಿದ್ದರು; ಅವರ ಅನುಪಸ್ಥಿತಿಯ ದಿನಗಳಲ್ಲಿ ಮಾತ್ರಾ ಇಬ್ಬರು. ಶಾಲೆಯ ಎಲ್ಲಾ ಶಿಕ್ಷಕರು, ಮಿಕ್ಕ ಉದ್ಯೋಗಿಗಳೂ ಮತ್ತು ಬಂದು ಹೋಗುವವರೆಲ್ಲರೂ ಅವರನ್ನು ವಿಸ್ತರಣಾ ಶಾಖೆಯ ವ್ಯವಸ್ಥಾಪಕರೆಂದೇ ತಿಳಿದಿದ್ದರು. ಆ ಶಾಲೆಯ ಪ್ರಾಂಶುಪಾಲರು ಬಲು ಶಿಸ್ತಿನ ಜೊತೆಗೆ ಜಿಗುಟಿನ, ದರ್ಪದ ಮಹಿಳೆ. ಅಲ್ಲಿನ ವ್ಯವಹಾರಗಳನ್ನು ಅದೆಷ್ಟು ಕುಶಲತೆಯಿಂದ ಭದ್ರಣ್ಣ ನಿಭಾಯಿಸುತ್ತಿದ್ದರೆಂದರೆ ಅವರಿರುವಷ್ಟು ಕಾಲವೂ ಒಂದೇ ಒಂದು ದೂರು ಆ ವಿಸ್ತರಣಾ ಮುಂಗಟ್ಟೆಯಿಂದ ಬಂದದ್ದಿಲ್ಲ.

ಭದ್ರಣ್ಣ ಜಯನಗರ ಎರಡನೇ ಬ್ಲಾಕ್ ಶಾಖೆಯನ್ನೇ ಆರಿಸಿಕೊಳ್ಳಲು ಮುಖ್ಯ ಕಾರಣ ಅದರ ವ್ಯವಹಾರದ ಸಮಯ ಬೆಳಗ್ಗೆ ಎಂಟೂವರೆಯಿಂದ ಮಧ್ಯಾಹ್ನ ಮೂರೂವರೆಯವರೆಗೆ ಆಗಿದ್ದದ್ದು. ಕನಕಪುರ ರಸ್ತೆಯಲ್ಲಿ ಹಾರೋಹಳ್ಳಿ ಸಮೀಪ ಅವರು ಒಂದಷ್ಟು ಜಾಗವನ್ನು ಕೊಂಡು ಅದನ್ನು ಬಾಳೆಯ ತೋಟವನ್ನಾಗಿ ಮಾಡಿದ್ದರು. ವಾರದಲ್ಲಿ ಮೂರ್‍ನಾಲ್ಕು ದಿನವಾದರೂ ಅಲ್ಲಿನ ಕೆಲಸಗಳ ನಿರ್ವಹಣೆಯ ಅಗತ್ಯವಿತ್ತು. ಇವರು ಅಂದಿನ ನಗದಿನ ಲೆಕ್ಕವನ್ನು ನಗದು ಅಧಿಕಾರಿಗೆ ಒಪ್ಪಿಸಿದ ತಕ್ಷಣವೇ ಅಲ್ಲಿಗೆ ದೌಡು. ಸಫಾರಿ ಸೂಟ್ ಹಾಕಿಕೊಂಡು ಬುಲೆಟ್ ಗಾಡಿಯಲ್ಲಿ ಗುಡುಗುಡು ಎಂದು ಕನಕಪುರ ರಸ್ತೆಯಲ್ಲಿ ಹೋಗುತ್ತಿದ್ದರೆ ದಾರಿಯುದ್ದಕ್ಕೂ ಹಳ್ಳಿಗರೆಲ್ಲರೂ ಯಾರೋ ಪೋಲೀಸ್ ಆಫೀಸರ್ ಇರಬೇಕು ಎಂದುಕೊಂಡು ಸೆಲ್ಯೂಟ್ ಹೊಡೆಯುತ್ತಿದ್ದರು!

ಹಾಗೆಂದು ದಿನವೂ ಅವರು ಬುಲೆಟ್ ಗಾಡಿಯಲ್ಲಿ ಬರುತ್ತಿರಲಿಲ್ಲ. ಶಾಖಾ ವ್ಯವಸ್ಥಾಪಕರು ಹಳೆಯ ಲ್ಯಾಂಬ್ರೆಟಾ ಸ್ಕೂಟರಲ್ಲಿ ಬಂದಿಳಿಯುತ್ತಿದ್ದಾಗ, ಇವರು, ಕಾರುಗಳೇ ಅಪರೂಪವಾಗಿದ್ದ ಆ ದಿನಗಳಲ್ಲಿ ಅಂಬಾಸಿಡರ್ ಕಾರಿನಲ್ಲಿ ಠಾಕೋಠೀಕಾಗಿ ಬಂದಿಳಿಯುತ್ತಿದ್ದರು. ಹಾಗೆ ಬರುವುದು ಇವರ ವರ್ಚಸ್ಸಿಗೆ ಒಂದಷ್ಟು ಶೋಭೆ ತರುತ್ತಿತ್ತಷ್ಟೇ; ಯಾರಿಗೂ ಅವರು ಶೋಕಿಗಾಗಿ ಕಾರು ತರುತ್ತಿದ್ದಾರೆ ಎಂದೆನಿಸುತ್ತಿರಲಿಲ್ಲ. ಬರುವಾಗಲೇ ಜೊತೆಗೊಂದಿಬ್ಬರು ನೆಂಟರೋ, ಪರಿಚಿತರೋ, ಸ್ನೇಹಿತರೋ ಜೊತೆ ಗೂಡಿರುತ್ತಿದ್ದರು. ಬ್ಯಾಂಕಿನ ಕಲಾಪ ಆರಂಭವಾಗುವಷ್ಟರಲ್ಲಿಯೇ ಅವರ ವ್ಯವಹಾರವನ್ನು ಮುಗಿಸಿಕೊಂಡು ಹೊರಡುತ್ತಿದ್ದರು.

ಹೀಗಿರುವಾಗ ಒಂದು ದಿನ ಅವರು ಕಾರನ್ನು ಪಾರ್ಕಿಂಗ್ ಜಾಗದಲ್ಲಿ ನಿಲ್ಲಿಸಿ ವಿಸ್ತರಣಾ ಮುಂಗಟ್ಟೆಗೆ ಹೋಗಿದ್ದರು. ನಮ್ಮ ಸಹೋದ್ಯೋಗಿಯೊಬ್ಬರು ತಡವಾಗಿ ಬಂದವರು ಇವರ ಕಾರಿನ ಹಿಂದೆ ಸ್ಕೂಟರನ್ನು ನಿಲ್ಲಿಸಲು ಹೋದಾಗ, ಕಾರನ್ನು ಯಾರೋ ಹಿಂದಕ್ಕೆ ತರುತ್ತಿದ್ದುದನ್ನು ನೋಡಿ ತಮ್ಮ ಸ್ಕೂಟರನ್ನು ಕಾರು ಹೋಗುವ ತನಕ ಪಕ್ಕಕ್ಕೆ ನಿಲ್ಲಿಸಿಕೊಂಡಿದ್ದು ನಂತರ ಸ್ಕೂಟರನ್ನು ನಿಲ್ಲಿಸಿ ಬಂದರು. ಭದ್ರಣ್ಣನಿಗಿದ್ದ ಅಪಾರ ಬಂಧು ಬಳಗ, ಸ್ನೇಹಿತರ ಭರಾಟೆ ಮತ್ತು ಸದಾ ಇತರರಿಗೆ ಸಹಾಯ ಮಾಡುವ ಅವರ ವ್ಯಕ್ತಿತ್ವವನ್ನು ಕಂಡವರಿಗೆ ಅಂತಹ ಯಾರಾದರೊಬ್ಬರು ಅವರ ಕಾರನ್ನು ತೆಗೆದುಕೊಂಡು ಹೋಗುವುದು ಅನಿರೀಕ್ಷಿತವೇನಾಗಿರಲಿಲ್ಲ. ಆದರೆ ಮಧ್ಯಾಹ್ನ ವಿಸ್ತರಣಾ ಮುಂಗಟ್ಟೆಯಿಂದ ಬಂದ ಭದ್ರಣ್ಣ, ಅಂದಿನ ನಗದಿನ ಪೆಟ್ಟಿಗೆಯನ್ನು ನಗದು ಅಧಿಕಾರಿಯ ವಶಕ್ಕೆ ಕೊಟ್ಟು ಊಟಕ್ಕೆ ಹೊರಡಲು ಕಾರಿನ ಬಳಿಗೆ ಹೋದರೆ ಕಾರೆಲ್ಲಿದೆ! ಪ್ರತ್ಯಕ್ಷದರ್ಶಿ ಸಹೋದ್ಯೋಗಿ ಕಾರನ್ನು ಯಾರೋ ತೆಗೆದುಕೊಂಡು ಹೋಗಿದ್ದನ್ನು, ಅದು ಅವರ ಬಂಧುಗಳೋ, ಸ್ನೇಹಿತರೋ ಇರಬೇಕೆಂದುಕೊಂಡು ತಾನೇ ಸ್ಕೂಟರನ್ನು ಪಕ್ಕಕ್ಕೆ ಸರಿಸಿ ನಿಲ್ಲಿಸಿಕೊಂಡು ಹೋಗಲು ಅನುವುಮಾಡಿಕೊಟ್ಟದ್ದನ್ನು ಹೇಳಿದಾಗ ಭದ್ರಣ್ಣನ ಪ್ರತಿಕ್ರಿಯೆ ಒಂದು ಮುಗುಳುನಗೆ. ಇಡೀ ಶಾಖೆಯ ಎಲ್ಲರೂ ಗೇಲಿ ಮಾಡಿ ನಕ್ಕರೂ ಅವರೊಂದಿಗೆ ನಕ್ಕರೇ ಹೊರತು ಬೇಜಾರಿನ, ಸಿಟ್ಟಿನ ಮಾತಿಲ್ಲ. ಹೋಗಿ ಪೋಲೀಸಿಗೆ ದೂರುಕೊಟ್ಟು ಬಂದರಷ್ಟೇ! ಒಂದು ಐದಾರು ತಿಂಗಳ ನಂತರ ಪಶ್ಚಿಮ ಘಟ್ಟದ ತಿರುವು ಗಳಲ್ಲೆಲ್ಲೋ ಅನಾಥವಾಗಿ ನಿಂತಿದ್ದ ಕಾರು ದೊರಕಿತಾದರೂ ಅವರಿಗೆ ಅದರ ಬಗೆಗಿನ ಮೋಹವೇ ಹೊರಟುಹೋಗಿತ್ತು.

ಕಾರಿನ ಬಗ್ಗೆಯೇ ಈ ಬಗೆಗಿನ ನಿರ್ಮಮಕಾರವಿದ್ದವರಿಗೆ ಒಮ್ಮೆ ಒಂದು ತಿಂಗಳು ಪ್ರತಿವಾರವೂ ಪೂಜೆಯ ಖಾತೆಗೆ ಋಣಿಕೆಯಾಗಬೇಕಿದ್ದ ಮೊತ್ತ ಅವರ ಖಾತೆಗೆ ಋಣಿಕೆಯಾಗಿದ್ದರ ಕಡೆಗೂ ಗಮನವಿರಲಿಲ್ಲ. ಅದನ್ನು ಗಮನಿಸಿದವರು ಸರಿಪಡಿಸಿ ಖಾತೆಗೆ ಹಾಕುತ್ತೇವೆಂದಾಗ, "ಅಯ್ಯೋ ಇರ್ಲಿಬಿಡಿ. ನಂಗೇ ಗೊತ್ತಿಲ್ದಂಗೆ ನಾಕು ವಾರ ಎಲ್ಲರಿಗೂ ಕೊಟ್ಟ ಪ್ರಸಾದದ ದುಡ್ಡುತಾನೇ ನನ್ನ ಖಾತೆಗೆ ಬಿದ್ದದ್ದು. ಆ ಹಿಂಪಡೆತ ಚೀಟಿಯನ್ನು ತನ್ನಿ. ನನ್ನ ಸಹಿ ಹಾಕಿ ಆಗಿರುವ ತಪ್ಪನ್ನು ಸರಿಪಡಿಸಿಬಿಡ್ತೀನಿ" ಎಂದು, ಹಾಗೆಯೇ ಮಾಡಿದರೆಂದು ಬೇರೆ ಹೇಳಬೇಕಿಲ್ಲವಲ್ಲ!

ವಿಷ್ಣುವರ್ಧನನ 'ಯಜಮಾನ' ಚಿತ್ರವನ್ನು ನೋಡಿದವರಿಗೆ ಅಂತಹ ಸ್ವಭಾವದವರು ಇರಲು ಸಾಧ್ಯವೇ ಅನ್ನಿಸಬಹುದೇನೋ. ಆದರೆ ಅಷ್ಟೊಂದು ವೈಭವೀಕರಿಸುವ ಮಟ್ಟಿಗಲ್ಲದಿದ್ದರೂ ಭದ್ರಣ್ಣನ ಸ್ವಭಾವ ಅಂತಹದೇ. ಯಾರಿಗೋ ಕಷ್ಟವೆಂದರೆ ಹಣದ ಸಹಾಯದಿಂದ ಹಿಡಿದು ಎಲ್ಲಾ ರೀತಿಯ ಸಹಾಯಗಳಿಗೂ ನಿಲ್ಲುತ್ತಿದ್ದರು. ಕೌಟುಂಬಿಕ ಕಲಹ, ಶಾಖೆಯೊಳಗಿನ ಆಂತರಿಕ ವೈಮನಸ್ಯ, ಪ್ರೇಮ ವಿವಾಹ, ಆರೋಗ್ಯ ಸಮಸ್ಯೆ ಎಲ್ಲಾ ವಿಷಯಗಳಲ್ಲಿಯೂ ಹಿರಿಯಣ್ಣನಂತೆ ನಿಲ್ಲುತ್ತಿದ್ದುದನ್ನು ನಾನು ನೋಡಿದ್ದೇನೆ. ಯಾವುದೋ ಶಾಖೆಯ ಪರಿಚಿತ ಸಹೋದ್ಯೋಗಿ ಏನೋ ಕಷ್ಟದಲ್ಲಿ ಸಿಲುಕಿಕೊಂಡಿದ್ದಾರೆಂದು ತಿಳಿದರೆ ಸಾಕು; ತಕ್ಷಣ ಅವರ ಸಹಾಯಕ್ಕೆ ಧಾವಿಸುತ್ತಿದ್ದರು. ವಾಪಸ್ಸು ಬಂದ ಮೇಲೆ 'ಎಷ್ಟಕ್ಕೆ ಬಿತ್ತು ಬ್ಲೇಡು?' ಎಂದು ಯಾರಾದರೂ ಕೇಳಿದರೆ ಸಿಗುತ್ತಿದ್ದದ್ದು ಮುಗುಳ್ನಗೆಯೊಂದಿಗೆ ಪಾಪ! ಎನ್ನುವ ಉದ್ಗಾರವಷ್ಟೇ. ಇನ್ನು ಬಂಧುಗಳ ಬಗ್ಗೆ ಹೇಳಬೇಕೆ! ಇಷ್ಟೆಲ್ಲಾ ದೇವರು ಚೆನ್ನಾಗಿಟ್ಟಿದ್ದರೂ ಅಹಂಕಾರದ ಮಾತು, ವರ್ತನೆ ಅವರ ಬಳಿಯೂ ಸುಳಿಯುತ್ತಿರಲಿಲ್ಲ. ಪ್ರತಿಯೊಬ್ಬರನ್ನೂ ಅವರಿಗೆ ಸಲ್ಲಬೇಕಾದ ಗೌರವದಿಂದಲೇ ಮಾತನಾಡಿಸುವ ಆದರ್ಶ ವ್ಯಕ್ತಿತ್ವ ಅವರದ್ದು. ಗೌರವ ಕೊಟ್ಟು ಗೌರವ ಪಡೆಯುವುದೆಂದರೇನು ಎನ್ನುವುದನ್ನು ಅವರಿಂದ ಕಲಿಯಬೇಕು.

ಎರಡು ಸಾವಿರನೇ ಇಸವಿಯಲ್ಲಿ ಬಂದ ಸ್ವಯಂನಿವೃತ್ತಿ ಯೋಜನೆಯಲ್ಲಿ ಸ್ವಯಂನಿವೃತ್ತಿ ಪಡೆದು ಸಂಪೂರ್ಣವಾಗಿ ಬೇಸಾಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಬೆಂಗಳೂರಿನಲ್ಲಿ ಮೂರ್‍ನಾಲ್ಕು ಮನೆಗಳಿದ್ದರೂ, ಜಮೀನಿನಲ್ಲೇ ಒಂದು ಮನೆಯನ್ನೂ ಕಟ್ಟಿಕೊಂಡರು. ಜಮೀನಿನ ಒಂದು ಭಾಗದಲ್ಲಿ ಪಂಚ ಮಹಾವೃಕ್ಷಗಳು ತಾನಾಗಿಯೇ ಬೆಳೆದವು ಎನ್ನುವ ಕಾರಣಕ್ಕೆ ಅಲ್ಲಿಯೇ ಒಂದು ದೇವಸ್ಥಾನವನ್ನೂ ಕಟ್ಟಿಸಿದರು. ಜ್ವರ ಬಂದದ್ದೇ ಒಂದು ನೆಪವಾಗಿ ಅವರ ಹೆಂಡತಿ ತೀರಿಕೊಂಡಿದ್ದರು. ಇದಾದ ಸ್ವಲ್ಪ ದಿನಕ್ಕೇ ಅವರಮ್ಮನೂ ತೀರಿಕೊಂಡಿದ್ದರು. ಕನಕಪುರಕ್ಕೆ ಹೋಗುವ ದಾರಿಯಲ್ಲೇ ಅವರ ಜಮೀನು. ಸದಾ ಕರೆಯುತ್ತಿದ್ದರೆಂದು ಒಮ್ಮೆ ಆ ಹಾದಿಯಲ್ಲಿ ಹೋಗುವಾಗ ಅವರ ಜಮೀನಿನ ಮನೆಗೆ ಭೇಟಿಕೊಟ್ಟೆ. ಅದೆಷ್ಟು ಸಂತೋಷವೋ! ಇಡೀ ಜಮೀನನ್ನು, ದೇವಸ್ಥಾನವನ್ನು, ಎಲ್ಲವನ್ನೂ ತೋರಿಸಿಕೊಂಡು ಬಂದರು. ಜಮೀನಿನ ಒಂದು

ಮೂಲೆಯ ಒಂದಷ್ಟು ಜಾಗದಲ್ಲಿ, 'ಇಲ್ಲೇ ನಮ್ಮನೆಯಾಕೆ, ನಮ್ಮಮ್ಮ ಇಬ್ಬರೂ ಶಾಂತವಾಗಿ ಮಲಗಿದ್ದಾರೆ' ಎಂದು ತೋರಿದಾಗ ಅವರ ಮುಖ ಪ್ರಶಾಂತವಾಗಿದ್ದರೂ ನನ್ನ ಕಣ್ಣುಗಳು ಹನಿಗೂಡಿದ್ದವು.

ಅಲ್ಲಿಂದ ಹೊರಡುವಾಗ ಬೆಳೆದಿದ್ದ ಬಾಳೆ ಹಣ್ಣನ್ನು, ತರಕಾರಿಯನ್ನೂ ಕೊಟ್ಟು, "ನಿಮಗೆ ಯಾವಾಗ ಬೇಕಾದರೂ ಸಿಟಿ ಲೈಫು ಬೇಸರ ಎನಿಸಿದರೆ ಸೀದಾ ಇಲ್ಲಿಗೆ ಬಂದ್ಬಿಡಿ. ಈ ಮನೆಯಲ್ಲಿ ಎಲ್ಲಾ ಅನುಕೂಲವಿದೆ. ನಾನಿದ್ರೂ ಪರವಾಗಿಲ್ಲ; ಇಲ್ಲದಿದ್ರೂ ಪರವಾಗಿಲ್ಲ; ಇವರಿಬ್ರೂ ಇಲ್ಲೇ ಇರ್ತಾರೆ" ಎಂದು ಒಬ್ಬ ದಂಪತಿಯನ್ನು ತೋರಿಸಿ, "ನಿಮಗೆಲ್ಲಾ ಅನುಕೂಲ ಮಾಡಿಕೊಡ್ತಾರೆ. ನೀವೇ ಬೇಕಾದ್ರೂ ಅಡುಗೆ ಮಾಡ್ಕೋಬಹುದು; ಇಲ್ಲಾಂದ್ರೆ ಅವ್ರೇ ಮಾಡಿಕೊಡ್ತಾರೆ. ಹಾಯಾಗಿ ಒಂದಷ್ಟು ದಿನ ಇಲ್ಲಿದ್ದು ಕಾಲ ಕಳ್ಕೊಂಡು ಹೋಗಿ" ಎಂದು ತುಂಬು ಅಂತಃಕರಣದಿಂದ ತೆರೆದ ಆಹ್ವಾನವನ್ನು ಕೊಟ್ಟರು. ಇಂದಿನ ದಿನಗಳಲ್ಲಿ ನೆಂಟರೂ, ಬಾಯಿಮಾತಿಗೂ ಈ ರೀತಿಯಲ್ಲಿ ಕರೆಯುವವರಿಲ್ಲ. ಅವರ ವಿಶ್ವಾಸಕ್ಕೆ ಏನು ಹೇಳಬಹುದು!

ಈಚೆಗೆ ಕೆಲದಿನಗಳಿಂದ ತುಂಬಾ ನೆನಪಿಗೆ ಬರುತ್ತಿದ್ದುದರಿಂದ ಎಷ್ಟೋ ವರ್ಷಗಳ ಬಳಿಕ ಇಂದು ಕರೆ ಮಾಡಿದೆ. "ಜ್ಞಾಪಕ ಇಟ್ಕೊಂಡು ಕರೆ ಮಾಡಿದಿರಲ್ಲಾ; ತುಂಬಾ ಖುಷಿಯಾಯ್ತು" ಎಂದರು. "ಯಾಕೋ ತುಂಬಾ ನೆನಪಿಗೆ ಬರ್‍ತಿದ್ರಿ. ಹಾಗಾಗಿ ಇವತ್ತು ಮಾತಾಡಿಯೇ ಬಿಡೋಣ ಅಂತ ಮಾಡ್ಬಿಟ್ಟೆ" ಎಂದೆ. "ಗಣಪತಿ ಹಬ್ಬದ ದಿನ ಇದ್ದಕ್ಕಿದ್ದಾಗೆ ಜ್ಞಾನ ತಪ್ಪಿ ಬಿದ್ಹೋದೆ. ಆವಾಗಿನಿಂದ ಏನಾಗಿದೆ ಅಂತ ತಿಳ್ಕಳಕ್ಕೆ ಆಸ್ಪತ್ರೆ ಸುತ್ತೋದೇ ಆಗಿದೆ. ನಿಮಗೆ ತುಂಬಾ ಅಂತಃಕರಣ. ಅದಕ್ಕೇ ನಾನು ನೆನಪಾಗಿದೀನಿ. ಮನೆಗೆ ಬರ್ರಿ. ಈಗ ದೂರ ಇಲ್ಲಪ್ಪ; ಜಮೀನಿಗೆ ಹತ್ರ ಆಗತ್ತೇಂತ ಇಲ್ಲೇ ವಾಜರಹಳ್ಳೀಲಿ ಇನ್ನೊಂದು ಮನೆ ಕಟ್ಕೊಂಡು ಅಲ್ಲಿಗೆ ಬಂದಿದೀನಿ. ಬನ್ನಿ, ಖುಸಿಯಾಗಿ ಒಂದಷ್ಟು ಮಾತಾಡೋಣ" ಎಂದರು. ಅಣ್ಣನ ಕರೆ ಕೇಳಿದಂತೆ ಸಂತೋಷವಾಗಿ ಮನ ತುಂಬಿ ಬಂತು.

***



ಮೈಸೂರು ದಸರಾ ಬೊಂಬೆ – ಡಾ. ಶುಭಶ್ರೀ ಪ್ರಸಾದ್ ಅವರ ಮನೆಯಲ್ಲಿ ಬೊಂಬೆ ಪ್ರದರ್ಶನ

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ಸಾಹಿತ್ಯ ದಾಸೋಹ – 241

ಅಧ್ಯಕ್ಷರ ಅನಿಸಿಕೆಗಳು



ಸ್ನೇಹಾ ಶಶಿಧರ್

ನಮಸ್ಕಾರ.

ಸಮನ್ವಯ ಸಮಿತಿ ಕನ್ನಡವೇ ಸತ್ಯ ಪ್ರತಿಷ್ಠಾನದ ನೋಡಿಯೋ ಸಾಹಿತ್ಯ ದಾಸೋಹದ ಇಂದಿನ ಕಂತಿಗೆ ನನ್ನನ್ನು ಅಧ್ಯಕ್ಷಳಾಗಿ ಆಯ್ಕೆ ಮಾಡಿದ ಎಲ್ಲರಿಗೂ ನನ್ನ ವಂದನೆಗಳು. ಸಾಹಿತ್ಯ ಕ್ಷೇತ್ರದಲ್ಲಿ ನನಗಿರುವ ಅತಿ ಚಿಕ್ಕ ಅನುಭವದಿಂದ ವಿಮರ್ಶೆಗಳನ್ನು ಬರೆದಿದ್ದೇನೆ. ಇಂದಿನ ದಾಸೋಹ ವೈವಿಧ್ಯತೆಯಿಂದ ಕೂಡಿದ್ದು ನಮ್ಮೆಲ್ಲರ ಪ್ರತಿಭೆಗೆ ಕನ್ನಡಿ ಎಂದರೆ ತಪ್ಪಲ್ಲ.

1. ಎರಡು ಕವನಗಳು – ಸಿಂಧು ಹರಿತಸ್

ಮೊದಲು ಸಿಂಧು ಹರಿತಸ್. ಇವರು ಎರಡು ಕವನವನ್ನು ಪ್ರಸ್ತುತಪಡಿಸಿದರು. ಬಹುಶಃ ಈ ವರ್ಷದ ಮಳೆಯಿಂದ ಉತ್ತರ ಭಾರತದಲ್ಲಿ ಸೃಷ್ಟಿಯಾದ ಅನಾಹುತಗಳ ಸಂಕೇತ. ಬಿಸಿಲು ಹೆಚ್ಚಾದರೂ ತಡೆಯದ ಮನುಷ್ಯ ಮಳೆಗಾಗಿ ಕಾಯುತ್ತಾನೆ. ಮಳೆ ಹೆಚ್ಚಾದರೂ ತಡೆಯೋದಿಲ್ಲ. ಹೆಚ್ಚಾದರೆ ಅಮೃತವೂ ವಿಷ. ಪ್ರಕೃತಿಯಿಂದ ದೂರ ಹೋಗುತ್ತಿರುವ ಮನುಷ್ಯನೇ ವಿಕೋಪಗಳಿಗೂ ಅವನೇ ಕಾರಣವಲ್ಲವೇ? ಸರಳ ಭಾಷೆಯಲ್ಲಿ ಯೋಚನೆಗೆ ಹಚ್ಚುವ ಕವಿತೆಗಳು. ಅಭಿನಂದನೆಗಳು ಸಿಂಧು.

2. 'ಹೀಗೊಂದು ಪ್ರೇಮ ಕತೆ' – ವಿಠ್ಠಲ ಇಜೇರಿ

ವಿಠ್ಠಲ್ ಇಜೇರಿ ಸರ್. ಅಮೆರಿಕನ್ ಪ್ರೇಮ ಕತೆ "ಅಪ್ಪೋಯಿಂಟ್ಮೆಂಟ್ ವಿಥ್ ಲವ್"ನ ಕನ್ನಡಾನುವಾದ. ಪತ್ರಗಳ ಮೂಲಕ ಹುಟ್ಟಿದ ಪ್ರೀತಿಯನ್ನು ಸಾಕಾರಗೊಳಿಸಲು ಪ್ರೇಮಿಗಳು ಮುಂದಾಗುತ್ತಾರೆ. ಪ್ರೇಯಸಿ ಅಲ್ಲೊಂದು ನೈತಿಕ ಪರೀಕ್ಷೆ ಒಡ್ಡುತ್ತಾಳೆ. ಕೊಂಚ ನಿರಾಶೆಯಾದರೂ, ನಮ್ಮ ನಾಯಕ ಪಾಸಾಗುತ್ತಾನೆ. "ಸುಂದರಿ ಎಂದು ಪ್ರೀತಿಸಿದರೆ, ಅವಳಿಗೆ ನಿರಾಶೆ. ಕುರೂಪಿ ಎಂದು ಪ್ರೀತಿಸಿದರೆ, ಇನ್ನು ಕಷ್ಟ." ಮಾರ್ಮಿಕವಾದ ವಿಷಯ. ಚಲನಚಿತ್ರಗಳಲ್ಲಿ ತೋರುವಹಾಗೆ, ಪ್ರೀತಿ ಕಣ್ಣಿಂದ ಹುಟ್ಟಲ್ಲ ಎಂದಿದ್ದಾರೆ. ಬಾಹ್ಯ ಸೌಂದರ್ಯಕ್ಕಿಂತ ಆಂತರ್ಯದ ಸೌಂದರ್ಯ ಮುಖ್ಯ ಎನ್ನುವುದು ಕತೆಯ ಸಾರ. ಹಾಗಂತ ನಮ್ಮ ನಾಯಕಿ ಸುಂದರಿಯೇ! ಚೆನ್ನಾಗಿದೆ ಸರ್. ಅಭಿನಂದನೆಗಳು.

3. ಸುಬ್ಲಕ್ಷ್ಮಿಯ ಉಬ್ಬುಹಲ್ಲು ಪುರಾಣ – ಉಷಾರಾಣಿ ಟಿ.ಆರ್.

ಉಷಾರಾಣಿಯವರ ಉಬ್ಬುಹಲ್ಲು ಪುರಾಣ. ಸುಲಲಿತವಾಗಿ ಓದಿಸಿಕೊಂಡು ಹೋಗುವ ಲಲಿತ ಪ್ರಬಂಧ. ವಕ್ರದಂತದ ಜೊತೆಗೆ ಉಚ್ಚಾರಣೆಯಿಂದ ಎಂಜಲ ಅಭಿಷೇಕ ಮಾಡುವ ಹರಿಕಥೆ ವಿದ್ವಾನ್, ಅವರಿವರ ಮಾತು ಕೇಳಿ, ಯಾರು ಏನೇ ಉಪಾಯ ಹೇಳಿದರೂ ಉಬ್ಬು ಹಲ್ಲು ಸರಿಪಡಿಸಿಕೊಳ್ಳುವ ಪ್ರಯತ್ನ ಮಾಡುತ್ತಾಳೆ. ಪಾಪ, ಗಟ್ಟಿಮುಟ್ಟಾದ ಹಲ್ಲುಗಳನ್ನು ಕೀಳಿಸಿಬಿಡುತ್ತಾಳೆ. ಒಂದು ಜನಪ್ರಿಯ ಹಿಂದಿ ಜಾಹಿರಾತು, "ಟೇಢಾ ಹೈ, ಪರ್ ಮೇರಾ ಹೈ" ಎನ್ನುವ ಹಾಗೆ ಬಿದ್ದು ಹೋಗುವ ಕೃತಕ ಹಲ್ಲಿನ ಸೆಟ್ ಗಿಂತ ವಕ್ರದಂತವೇ ಲೇಸು. ಉಷಾರಾಣಿ ಮೇಡಂಗೆ ಅಭಿನಂದನೆಗಳು.

ಸ್ನೇಹಾ ಶಶಿಧರ

ಓದಿದ್ದು ಇಂಜಿನಿಯರಿಂಗ್ ಪದವಿ. ಉದ್ಯೋಗ ನೀಡಿದ್ದು ಭಾರತೀಯ ಸ್ಟೇಟ್ ಬ್ಯಾಂಕ್. ಪ್ರಸಕ್ತ ಮೈಸೂರಿನಲ್ಲಿ ಕೆಲಸ.

ಸ್ನೇಹಾ ಶಶಿಧರ ಅವರಿಗೆ ಮನೆಯೇ ಮೊದಲ ಕನ್ನಡ ಶಾಲೆ. ಅವರು ಮೂಲತಃ ಶಾಲೆಯಲ್ಲಿ ಕಲಿತದ್ದು ಇಂಗ್ಲಿಷ್ ಮತ್ತು ಹಿಂದಿ. ಶಾಲೆಯಲ್ಲಿ ಅ, ಆ, ಇ, ಈ ಕಲಿಕೆ ಶೂನ್ಯ. ಕೆಲವು ವರ್ಷಗಳ ನಂತರ ತಾಯಿಯಿಂದ ಕನ್ನಡ ಅಕ್ಷರಗಳ ಕಲಿಕೆ, ಪದಬಂಧ, ಪದಜ್ಞಾನದತ್ತ ಸೆಳೆತ. ತಂದೆಯವರಿಂದ ಕತೆ, ಲೇಖನ ಬರೆಯಲು ಪ್ರೇರಣೆ. ಕೇವಲ ಕನ್ನಡದಲ್ಲಿ ಮಾತ್ರವಲ್ಲದೆ ಇಂಗ್ಲಿಷ್ ಹಾಗೂ ಹಿಂದಿಯಲ್ಲೂ ಇವರು ಸಾಹಿತ್ಯ ರಚಿಸಿದ್ದು, ಇವರ ಕತೆ, ಕವನ, ಲೇಖನಗಳು ಮೂರು ಭಾಷೆಯಲ್ಲೂ ಪ್ರಕಟವಾಗಿರುವುದು ವಿಶೇಷ.

ಸ್ನೇಹಾ ಅವರಿಗೆ ಕ್ಯಾಲಿಗ್ರಾಫಿಯಲ್ಲಿ ವಿಶೇಷ ಆಸಕ್ತಿ. ಇತ್ತೀಚೆಗೆ ರೂಢಿಸಿಕೊಂಡ ಹವ್ಯಾಸ ಜಾನಪದ ಕಂಸಾಳೆ ನೃತ್ಯ. ಇವರ ಕಂಸಾಳೆ ತಂಡ ಇತ್ತೀಚೆಗೆ ಮೈಸೂರು, ಬೆಂಗಳೂರು, ಶಿವಮೊಗ್ಗ ಮತ್ತು ಮಲೆಮಹದೇಶ್ವರ ಕ್ಷೇತ್ರದಲ್ಲಿ ಸಾರ್ವಜನಿಕ ಪ್ರದರ್ಶನ ನೀಡಿ ಮೆಚ್ಚುಗೆ ಗಳಿಸಿದೆ. ಸ್ನೇಹಾ ಅವರು ಇದೀಗ ಡೊಳ್ಳುವಾದನದ ಅಭ್ಯಾಸ ಕೂಡ ಮಾಡುತ್ತಿದ್ದಾರೆ.

***

4. 'ಸರಕಾರಿ ಸೀನ' – ಗೋಪಿನಾಥ್

ಗೋಪಿನಾಥ್ ಸರ್‌ರವರ 'ಸರಕಾರಿ ಸೀನ' ಎಂಬ ಒಂದು ಲಲಿತ ಪ್ರಬಂಧ. ಅಕ್ಕಪಕ್ಕದವರ ಎಲ್ಲ ಕೆಲಸಗಳಿಗೆ "ಸೀನನಿಗೆ ವಹಿಸಿದರೆ ಆಯಿತು" ಎಂಬ ಪಾತ್ರ. ಸು ಫ್ರಮ್ ಸೋ ಚಿತ್ರದ ರವಿ ಅಣ್ಣ ಪಾತ್ರಧಾರಿಯಂತೆ ಅಂದುಕೊಂಡೆ. ಆದರೆ, ಲೇಖಕರು ಕಥೆಗೆ ತಿರುವು ಕೊಟ್ಟು, ಇಬ್ಬರು ಕಥಾನಾಯಕಿಯರನ್ನು ಕರೆತಂದರು. ಇಬ್ಬರು ಹೆಂಡಿರ ಕಾಟದಿಂದ ಕಲ್ಲಾದ ಶ್ರೀಮನ್ನಾರಾಯಣನಂತೆ, ಇಬ್ಬರು ಹೆಂಗೆಳೆಯರ ಕಾಟದಿಂದ ಪಾರಾಗಲು ತನ್ನದೊಂದು ಕಟೌಟ್ ನಿಲ್ಲಿಸುತ್ತಾನೆ. ಒಳ್ಳೆಯ ಉಪಾಯ. ಹಾಸ್ಯಭರಿತ ಲೇಖನ. ಧನ್ಯವಾದಗಳು ಸರ್.

5. ಎರಡು ಕವನಗಳು– ಶೀಲಾ ಅರಕಲಗೂಡು

ಶೀಲಾ ಅರಕಲಗೂಡುರವರ ಮೊದಲನೆಯ ಕವನ– 'ಪರಿಸರಕ್ಕೊಂದು ನವ್ಯ ಭಾಷೆ'. ನಮ್ಮ ಸುತ್ತಮುತ್ತಲಿನ ಪ್ರಕೃತಿಯ ನಡುವೆ ಭಾಷೆಯೊಂದನ್ನು ಕಲಿತುಕೊ ಎನ್ನುತ್ತಾರೆ. ನಿಜಾ! ಗಿಡ, ಮರ, ಪ್ರಾಣಿ, ಪಕ್ಷಿಗಳಿಗೂ ಜೀವವಿದೆ. ಅದನ್ನು ಗುರುತಿಸಬೇಕೆಂಬುದು ಕವನದ ಆಶಯ. ಅಪ್ಪಿಕೋ ಚಳುವಳಿಯಂತಹ ಮಹತ್ತರವಾದ ಆಲೋಚನೆಗೆ ದಾರಿ ಮಾಡಿಕೊಡುವ ಕವಿತೆ.

ಇವರ ಇನ್ನೊಂದು ಕವನ 'ವಿಕಸಿತ ಭಾರತ'. ಸನ್ಮಾನ್ಯ ಪ್ರಧಾನಿಯವರ ಕನಸು ವಿಕಸಿತ ಭಾರತ. ಅದೇ ಶೀರ್ಷಿಕೆಯ ಕವಿತೆ, ನಮ್ಮ ದೇಶದ ಭವ್ಯ ಚರಿತ್ರೆ, ಆಚರಣೆಗಳು, ನದಿಗಳು ಎಲ್ಲದರಲ್ಲೂ ಹೆಮ್ಮೆ, ಸಾರ್ಥಕತೆ ಮೆರೆಸುವಂತಹ ಪ್ರಯತ್ನ. ಸೊಗಸಾದ ಕವಿತೆ. ಅಭಿನಂದನೆಗಳು ಮೇಡಂ.

6. 'ಶಿಕ್ಷಕ ಮತ್ತು ಶಿಕ್ಷಣ – ಮಕ್ಕಳ ಭವಿಷ್ಯಕ್ಕೆ ಹೂರಣ' – ಮಾನಸ ಕೆ.ಕೆ.

ಮಾನಸರವರ ಶಿಕ್ಷಣ ವ್ಯವಸ್ಥೆಯ ಬಗ್ಗೆ ಬರೆದ ವೈಚಾರಿಕ ಪ್ರಬಂಧ. ಪ್ರಾಯಶಃ ಶಿಕ್ಷಕರ ದಿನಕ್ಕೆಂದು ಬರೆದಿರಬೇಕು. ಇವರು ಹೇಳುವ ಹಾಗೆ ಕಾಲ ಬದಲಾಗುತ್ತಿದೆ. ಮಕ್ಕಳು ಬದಲಾಗುತ್ತಿದ್ದಾರೆ. ಇದರಿಂದ ಶಿಕ್ಷಕರ ಪಾತ್ರ ಇನ್ನಷ್ಟು ಕಠಿಣವಾಗಿದೆ. ಮೊದಲಿನ ಹಾಗೆ ಭಯ ಭಕ್ತಿ ಇಲ್ಲ. ಹಾಗೆಯೇ, ಶಿಕ್ಷಕರ ಮನಸ್ಥಿತಿಯೂ ಬದಲಾಗಿದೆ. ಆದರೂ, ಬೇರೆ ಯಾವುದೇ ವೃತ್ತಿಯನ್ನು ಬೆಳೆಸುವುದು ಶಿಕ್ಷಕರೇ. ಅವರೇ ಮಕ್ಕಳ ಭವಿಷ್ಯ ರೂಪಿಸುವಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತಾರೆ. ಕಬೀರ ದಾಸರೇ ಹೇಳುವಹಾಗೆ, ಗೋವಿಂದನನ್ನು ಪೂಜಿಸುವ ಮೊದಲು ಗುರುವನ್ನು ವಂದಿಸು ಎಂದು. ಉತ್ತಮವಾದ ಲೇಖನ. ಅಭಿನಂದನೆಗಳು ನಿಮಗೆ ಮಾನಸ ಮೇಡಂ.

7. 'ಮತ್ತೆ ಮಗುವಾಗುವ ಪ್ರಕ್ರಿಯೆ' – ನಾಗರತ್ನ ಚಂದ್ರಶೇಖರ್

ನಾಗರತ್ನ ಚಂದ್ರಶೇಖರರವರ ಅನುಭವ ಕಥನ. ಮಂಡಿ ಚಿಪ್ಪು ಬದಲಾವಣೆಯಂತಹ ಗಂಭೀರ ಶಸ್ತ್ರಚಿಕಿತ್ಸೆಯ ಬಗ್ಗೆ ವಿಸ್ತಾರವಾಗಿ ತಿಳಿಸಿದ್ದೀರಿ. ನಿಮ್ಮ ಧೈರ್ಯಕ್ಕೆ ನಮ್ಮದೊಂದು ಸಲಾಂ. ನೀವು ಆಸ್ಪತ್ರೆಯಲ್ಲಿ ಕಳೆದ ದಿನಗಳನ್ನು ಓದುವಾಗ ಬೇಸರವಾಗುತ್ತದೆ. ಮನೆಗೆ ವಾಪಸ್ಸು ಬಂದಾಗ ಆದ ಅನುಭವಗಳು, ಅದರಿಂದ ಜೀವನದ ಪಾಠ ಕಲಿಸುವಲ್ಲಿ ನಿಮ್ಮ ಲೇಖನ ಗೆದ್ದಿದೆ. ಮಗಳಿಗೆ ಕಬ್ಬಿಣ ಕಳಿಸು ಅಂದದ್ದು, ಗಂಡನೊಡನೆ ವಾದಿಸದೆ ಇರುವುದು, ಗೆಳೆಯರ ಬಳಗಕ್ಕೆ ಪುನಃ ಸೇರುವುದು, ಓದುತ್ತಿದ್ದರೆ, ನೀವು ಜೀವನವನ್ನು ಲವಲವಿಕೆಯಿಂದ ಸ್ವೀಕರಿಸಿದ್ದೀರಿ ಎಂದು ಭಾಸವಾಗುತ್ತದೆ. ಅಭಿನಂದನೆಗಳು ಮೇಡಂ.

8. 'ಹಿತವೀ ಬಾಹ್ಯ ಲೋಕ' – ಹೆಚ್. ಶ್ರೀಧರ ರಾವ್

ಶ್ರೀಧರ ರಾವ್ ಅವರ ಕವನ 'ಹಿತವೀ ಬಾಹ್ಯ ಲೋಕ'. ಪೂರ್ಣಾವಧಿಗೆ ಮುಂಚೆಯೇ ಹುಟ್ಟಿದ ಮಗುವ ಸ್ವಗತ. ನಾನು ಬೆಳೆದಿದ್ದೇನೆ, ಬಂದು ಬಿಡುತ್ತೇನೆ ಎಂದು ಆತುರಪಡುವ ಶಿಶುವಿನಲ್ಲಿ, ಹದಿಹರೆಯದ ಮಕ್ಕಳ ಮನಸ್ಥಿತಿ ತೋರುತ್ತದೆ. ನಮಗೆಲ್ಲ ಗೊತ್ತು, ಜಗತ್ತನ್ನೇ ಗೆಲ್ಲಬಲ್ಲೆ ಎಂಬ ದುಸಾಹಸಕ್ಕೆ ಕೈಹಾಕಿ ಎಡುವುತ್ತಾರೆ. ಶಿಶುವೂ ಹಾಗೆಯೇ, ಆತುರ ತೋರಿ, ಇನ್‌ಕ್ಯುಬೇಟರ್ ಪಾಲಾಗುತ್ತದೆ. ಅಮ್ಮನ ಆರತಿ ಶಾಸ್ತ್ರ, ಅಮ್ಮ ಓಡಾಡುವಾಗ ಪಡುವ ತೊಂದರೆ ಎಲ್ಲವನ್ನೂ ಸುಂದರವಾಗಿ ವರ್ಣಿಸಿದ್ದಾರೆ. ಒಬ್ಬ ಗಂಡಸಾಗಿ ಪ್ರಸವದ ಬಗ್ಗೆ, ತಾಯ್ತನದ ಬಗ್ಗೆ, ನಿಮ್ಮ ಸೊಸೆಯ ಬಗ್ಗೆ ನಿಮಗಿರುವ ಕಾಳಜಿ ನೋಡಿ, ಮನ ತುಂಬಿ ಬಂತು ಸರ್. ಅನಂತಾನಂತ ವಂದನೆಗಳು ನಿಮಗೆ.

9. 'ನೆಮ್ಮದಿ' – ಮಾಧುರಿ ಕೃಷ್ಣ

ಮಾಧುರಿ ಕೃಷ್ಣ ಅವರ 'ನೆಮ್ಮದಿ' ಎಂಬ ಅಪೂರ್ಣ ಪ್ರೇಮಕತೆ. ಮನಸ್ಸಿನಲ್ಲೇ ಪೋಷಿಸಿಕೊಂಡು ಬಂದ ಪ್ರೇಮಗಾಥೆ, ಗೆಳತಿ ನಿರಾಕರಿಸಿದ ಮೇಲೆ ತನ್ನ ಜೀವನವನ್ನು ಕಟ್ಟಿಕೊಂಡು ಸುಖ ಜೀವನ ನಡೆಸುತ್ತಾನೆ. ಆದರೂ ಅವಳ ನೆನಪು ಕಾಡುತ್ತಲೇ ಇರುತ್ತೆ. ಹಾಳು ಕೊಂಪೆಯಂತಿರುವ ಹಳ್ಳಿ ಜೀವನವನ್ನು ನಿರಾಕರಿಸಿ ಆಧುನಿಕತೆಗೆ ಮುಖ ಮಾಡುವ ಅವಳಿಗೂ ಪೂರ್ತಿ ಐವತ್ತು ವರ್ಷಗಳ ಕಾಲ ಅವನನ್ನು ಮರೆಯಲು ಸಾಧ್ಯವಾಗುವುದಿಲ್ಲ. ಪಾತ್ರಗಳು, ಸನ್ನಿವೇಶಗಳು ಕಣ್ಣಮುಂದೆ ಬಂದು ನಿಂತಂತೆ ಬರೆದಿದ್ದಾರೆ. ಅಚ್ಚುಕಟ್ಟು ವಿವರಣೆಗಳೊಂದಿಗೆ ಓದುತ್ತಲೇ ಇರಬೇಕೆನಿಸುತ್ತದೆ. ಚೆನ್ನಾಗಿದೆ. ಅಭಿನಂದನೆಗಳು ಮೇಡಂ.

10. 'ನೆನಪಿನ ಚೀಟಿ' – ರಾಧಿಕಾ ವಿ. ಗುಜ್ಜರ್

ರಾಧಿಕಾ ಗುಜ್ಜರ್ ರವರ ರಾಮಭದ್ರ ಎಂಬ ಹುಡುಗನ ಕಥೆ. ನಮಗೆ ಬೇಕಾದ ವಿಷಯಗಳನ್ನು ನೆನಪಿನಲ್ಲಿ ಇಟ್ಟುಕೊಳ್ಳಲು ನಮಗಾಗುವಂತಹ ಸಣ್ಣಪುಟ್ಟ ಉಪಾಯಗಳನ್ನು ಮಾಡಿಕೊಂಡರೆ, ಮರೆಯುವುದು ಕಡಿಮೆ. ಖಂಡಿತ! ನಾವು ಕೆಲವೊಂದು ಬಾರಿ ಕ್ಯಾಲೆಂಡರಿನಲ್ಲಿ ಗುರುತು ಮಾಡಿಕೊಳ್ಳುತ್ತೇವೆ. ಅಥವಾ ಈಗೆಲ್ಲ ಜಂಗಮವಾಣಿ ಅಂದರೆ ಮೊಬೈಲ್ನಲ್ಲಿ to–do–list ಮಾಡಿ ಇಟ್ಟುಕೊಂಡಿರುತ್ತೇವೆ. ಇಂದಿನ ಒತ್ತಡದ ಬದುಕಿನಲ್ಲಿ ಮರೆಯುವುದು ಸಹಜ. ಆದರೆ ಅದನ್ನು ಯಶಸ್ವಿಯಾಗಿ ನಿಭಾಯಿಸಿಕೊಂಡು ಹೋಗಬಹುದು. ಇದನ್ನೂ ಮಕ್ಕಳಿಗೂ ಹೇಳಿಕೊಟ್ಟರೆ, ಅವರಿಗೂ ಅನುಕೂಲವಾಗುತ್ತೆ. ಚಂದದ ಲೇಖನ. ಧನ್ಯವಾದಗಳು ಮೇಡಂ.

11. 'ಹಾನ್ಲೆ – ಲಡಾಖ್‌ನ ಒಂದು ವಿಸ್ಮಯ ಕಣಿವೆ' – ಗುರುರಾಜ ಶಾಸ್ತ್ರಿ

ಗುರುರಾಜ ಶಾಸ್ತ್ರಿಯವರ ಪ್ರವಾಸ ಕಥನ. ಹಾನ್ಲೆ ಎನ್ನುವ, ಲಡಾಕ್ ಪ್ರದೇಶದ ಒಂದು ಕಣಿವೆ. ಪ್ರಕೃತಿ ಸೌಂದರ್ಯದ ರಮಣೀಯ ವಿವರಣೆ ನೀಡಿದ್ದಾರೆ. ಅಲ್ಲಿ ಹೋದರೆ, ನಾವೇನನ್ನು ಅಪೇಕ್ಷಿಸಬಹುದು ಎಂದು ತಿಳಿಸಿಕೊಟ್ಟಿದ್ದಾರೆ. ಬೈಕ್ ಸವಾರರು, ಪಕ್ಷಿ ವೀಕ್ಷಕರು ಹಾಗೂ ನಕ್ಷತ್ರ ವೀಕ್ಷಕರಿಕೆ ಹೇಳಿಮಾಡಿಸಿದ ಜಾಗ. "ಹಿಮಾಲಯದ ಚಂದ್ರ" ಎಂಬ ಜಗತ್ತಿನ ಎರಡನೇ ದೊಡ್ಡ ಟೆಲಿಸ್ಕೋಪ್ ಇರುವ ವೀಕ್ಷಣಾಲಯ ಈ ಕಣಿವೆಯಲ್ಲಿರುವುದು ವಿಶೇಷ. ಅದರ ನಿಯಂತ್ರಣ

ಬೆಂಗಳೂರಿನಿಂದ ಎಂದು ತಿಳಿದು ಇನ್ನಷ್ಟು ವಿಶೇಷ ಎನಿಸಿತು. ಆದರೆ ನಿಮಗೆ ನಕ್ಷತ್ರ ವೀಕ್ಷಣೆಗೆ ಅವಕಾಶವಾಗಲಿಲ್ಲ ಎನ್ನುವ ಬೇಸರವಿದೆ. ಲೇಖನಕ್ಕಾಗಿ ಧನ್ಯವಾದಗಳು ಸರ್.

12. 'ಡಾ. ದ.ರಾ.ಬೇಂದ್ರೆಯವರ 'ಮುದುಕಿ' ಕವನ' – ಡಾ. ಸತ್ಯವತಿ ಮೂರ್ತಿ

ಡಾ.ಸತ್ಯವತಿ ಮೂರ್ತಿಯವರು ದ,ರಾ,ಬೇಂದ್ರೆಯವರ 'ಮುದುಕಿ' ಕವನದ ಭಾವಾರ್ಥ ನೀಡಿದ್ದಾರೆ. ನಿಮ್ಮ ವಿಶ್ಲೇಷಣೆ ಅರ್ಥಪೂರ್ಣವಾಗಿದೆ. ಮುದುಕಿ, ವಯಸ್ಸಾದ ಯಾರಿಗೂ ಬೇಡದ ಜೀವ ಅಂತ ಹೊರನೋಟಕ್ಕೆ ಕಾಣುವ ಕವನದಲ್ಲಿ ಆ ಮುದುಕಿ ಸಶಕ್ತಳು ಎಂದು ವಿವರಿಸಿದ್ದೀರಿ. ಯುವ ಪೀಳಿಗೆಗೆ ಸರಿದಾರಿ ತೋರುವ, ಪರಂಪರೆಯ ಬಗ್ಗೆ, ಧರ್ಮದ ಬಗ್ಗೆ, ತಿಳಿ ಹೇಳುವ ಹಿರಿಯರು ಪ್ರತಿ ಮನೆಯಲ್ಲಿ ಇರಬೇಕೆಂದು ನಿಮ್ಮ ಅಭಿಪ್ರಾಯ. ಹೆಣ್ಣನ್ನು "ಶಕ್ತಿ"ಗೆ ಹೋಲಿಸುತ್ತಾರೆ. ಪ್ರಾಯಶಃ ಅದರಿಂದಲೇ ಸ್ತ್ರೀಲಿಂಗ ಉಪಯೋಗಿಸಿರಬಹುದು ಎನ್ನಿಸುತ್ತದೆ. ಒಳ್ಳೆಯ ವಿಮರ್ಶೆ ಮೇಡಂ. ಅಭಿನಂದನೆಗಳು.

13. 'ಕೆಂಪಿ' – ಗಾಯತ್ರಿ ಮೂರ್ತಿ

ಗಾಯತ್ರಿ ಮೂರ್ತಿರವರ 'ಕೆಂಪಿ' ಕಥೆ. ಕೆಂಪಿ ಬಡವಿ. ಗಂಡ ಬಿಟ್ಟು ಹೋದಮೇಲೆ ನಿಂತ ಬೇಡದ ಗರ್ಭ. ಏನಾದರೂ ತಾಯಿ ತಾಯಿಯೇ. ಅವಳಿಗೂ ಆಸೆ ಆಕಾಂಕ್ಷೆಗಳಿರುತ್ತೆ. ಅದನ್ನು ಗುರುತಿಸಿದ ಇನ್ನೊಬ್ಬ ಬಸುರಿ ಹೆಣ್ಣು ಸುಧಾ. ಒಳ್ಳೆಯ ಆಲೋಚನೆ ಇರುವ, ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿವ ಕಥೆ. ಅಭಿನಂದನೆಗಳು ಮೇಡಂ.

14. 'ನೇಪಾಳದ ಢಾಕಾ ಟೋಪಿ' – ಮಹಾಬಲ

ಮಹಾಬಲ ಸರ್ ಅವರ 'ನೇಪಾಳದ ಢಾಕಾ ಟೋಪಿ'. ಮೊದಲು ಶೀರ್ಷಿಕೆ ನೋಡಿ, ಈಗಷ್ಟೇ ನೇಪಾಳದಲ್ಲಿ ಉಂಟಾಗಿರುವ ಉದ್ವಿಗ್ನ ಪರಿಸ್ಥಿತಿಯ ಬಗ್ಗೆ ಇರಬಹುದು ಎನಿಸಿತು. ಅನಂತರ, ಪ್ರವಾಸ ಕಥನ ಅಂದುಕೊಂಡೆ. ಓದುತ್ತಾ ಓದುತ್ತಾ ತಿಳಿದಿದ್ದು ಹಾಸ್ಯ ಪ್ರಸಂಗ ಅಂತ. ನೀವು ಟೋಪಿ ಕೊಂಡಿದ್ದು, ಹಾಕಿಸಿ ಕೊಂಡಿದ್ದು ಎರಡೂ ಚೆನ್ನಾಗಿದೆ. ಸುಗಮವಾಗಿ ಓದಿಸಿಕೊಂಡು ಹೋಗುವ ಕಥೆ–ವ್ಯಥೆ. ನಾವು ಹೊರದೇಶಕ್ಕೆ, ರಾಜ್ಯಕ್ಕೆ ಹೋದಾಗ ಏನೇನೋ ಕೊಳ್ಳುತ್ತೇವೆ. ಆದರೆ ಅದರ ಉಪಯೋಗ? ನಿಮ್ಮ ಬರಹ ಸೂಚ್ಯವಾಗಿದೆ. ಅಭಿನಂದನೆಗಳು ಸರ್.

15. 'ಭಾವಚಿತ್ರ' – ಸುಜಾತಾ ರವೀಶ್, ಮೈಸೂರು

ಸುಜಾತ ರವೀಶ್ ಅವರ 'ಭಾವಚಿತ್ರ' ಎಂಬ ಲಲಿತ ಪ್ರಬಂಧ. ಚಿತ್ರಗಳೊಂದಿಗೆ ಭಾವನೆಗಳನ್ನು ಸವಿವರವಾಗಿ ಬಣ್ಣಿಸಿದ್ದಾರೆ. ನೆನಪಿನ ಪುಟಗಳಲ್ಲಿ ಅವಿತು ಕೂತಿರುವ ಭಾವನೆಗಳಿಗೆ, ಮರೆಯಾದ ಕಥೆಗಳಿಗೆ ಜೀವ ತುಂಬುವುದೇ ಭಾವಚಿತ್ರಗಳು. ಒಂದೊಂದು ಚಿತ್ರಗಳು ಒಂದೊಂದು ಕಥೆ ಹೇಳುತ್ತವೆ. ಈಗಿನ ಇನ್ಸ್ಟಾಗ್ರಾಮ್, ಫೇಸ್ಬುಕ್, ಒಂದೊಂದು ಚಿತ್ರವನ್ನು ಸ್ಟೋರಿ ಎಂದು ಕರೆಯುತ್ತದೆ. ಓದಿಸಿಕೊಂಡು ಹೋಗುತ್ತಿರುವ ಪ್ರಬಂಧದಲ್ಲಿ, ಕೊನೆಯಲ್ಲಿ ಜೀವನ ನಶ್ವರ ಅಂತ ತಿಳಿ ಹೇಳಿ ಒಂದು ಝಲಕ್ ಕೊಡುತ್ತದೆ. ಉತ್ತಮವಾದ ಲೇಖನ. ಅಭಿನಂದನೆಗಳು ಮೇಡಂ.

16. 'ಸ್ವಗತ' – ಮಾಲತಿ ಶ್ರೀನಿವಾಸನ್

ಮಾಲತಿಯವರ ಸ್ವಗತ ಎನ್ನುವ ಕಥೆ. ಸ್ವಲ್ಪ ಹೆಚ್ಚು ಕಡಿಮೆ, ಎಲ್ಲ ಹೆಣ್ಣುಮಕ್ಕಳ ಜೀವನದ ಬವಣೆಯನ್ನು ಸೆರೆಹಿಡಿವ ಪ್ರಯತ್ನ. ಹೆಣ್ಣಿಗೆ ಕನಸಿನಲ್ಲೂ ನೆಮ್ಮದಿ ಇಲ್ಲ. ಕನಸಲ್ಲೂ ಧಾವಂತ, ಕೆಲಸ, ಜವಾಬ್ದಾರಿಗಳದ್ದೇ ಯೋಚನೆ. ಅತ್ತೆ, ಮಾವ, ಗಂಡ, ಮನೆ, ಮಕ್ಕಳು ಎಲ್ಲರಿಗೂ ಸ್ಪಂದಿಸಿದ ಜೀವ, ತನ್ನೊಳಗೆ ತಾನು ಹೊಕ್ಕಾಗ, ಸದಾ ಅಪೂರ್ಣತೆ ಕಾಡುತ್ತದೆ. ನೈಜವಾಗಿ ಬರೆದಿದ್ದೀರಿ ಮೇಡಂ. ಆ ಅಪೂರ್ಣತೆಯನ್ನು ಅನುಭವಿಸಲು ಬಿಡದೇ, ಕಾಫಿಗಾಗಿ ಗಂಡ ಕರೆದನೆಂದು ಹೋಗುತ್ತಾಳೆ. ಸರಳ ಕಥೆಯಾದರೂ ಯೋಚನೆಗೆ ದೂಡದೆ ಇರದು. ಅಭಿನಂದನೆಗಳು ಮೇಡಂ.

17. 'ವಿಭಕ್ತಿ ಪ್ರತ್ಯಯ ಹಾಗೂ ಕಾರಕಗಳು' – ಗಣಪತಿ ಹೆಗಡೆ

ಗಣಪತಿ ಹೆಗಡೆರವರ ವಿಭಕ್ತಿ ಪ್ರತ್ಯಯ. ವ್ಯಾಕರಣದ ಹೂರಣವಿರುವ ಲೇಖನ. ಸ್ವಂತ ಅರ್ಥವಿಲ್ಲದ ಆದರೆ ಇವುಗಳಿಲ್ಲದೆ ಪದಗಳಿಗೆ ಅರ್ಥವೇ ಹೊಂದುವುದಿಲ್ಲ. ವಿಭಕ್ತಿ ಪ್ರತ್ಯಯಗಳ ಬಗ್ಗೆ ಮಾಹಿತಿಯನ್ನು ಸುಲಭವಾಗಿ ಅರ್ಥವಾಗುವಂತೆ ತಿಳಿಸಿಕೊಟ್ಟಿದ್ದಾರೆ. ಬಳಸುವ ರೀತಿ, ಉದಾಹರಣೆಗಳೊಂದಿಗೆ ಚೆನ್ನಾಗಿ ವಿವರಿಸಿದ್ದಾರೆ. ಅಭಿನಂದನೆಗಳು ಸರ್.

18. ಎರಡು ಕವನಗಳು – ಹಿಮನಾಥ

'ಹಿಮನಾಥ' ಕಾವ್ಯನಾಮದ ಮಂಜುನಾಥರ ಎರಡು ಕವನಗಳು.– 'ಶಾಲೆಯ ಅಂಗಳದಲ್ಲಿ' ಮತ್ತು 'ನೋಡಲಾರೆ ನೋಡಲಾರೆ'. ಎರಡೂ ತಾನು ಇಷ್ಟಪಟ್ಟ ಹುಡುಗಿಯ ಕುರಿತು ಬರೆದ ಕವನಗಳು. ಮೊದಲನೆಯದರಲ್ಲಿ ಶಾಲೆಯಲ್ಲಿ ಚಿಗುರೊಡೆದ ಮುಗ್ಧ ಮನಸ್ಸಿನ ಪ್ರೇಮ. ಶಾಲೆ ಮುಗಿಯುತ್ತಲೇ ಕಾಣೆಯಾದ ಪ್ರೇಯಸಿ. ಎರಡನೆಯದು ಹದಿಹರೆಯದಲ್ಲಿ ಹೆಣ್ಣಿನ ವರ್ಣನೆ ಶೃಂಗಾರಭರಿತವಾಗಿ ಬರೆದಿದ್ದಾರೆ. ಎರಡು ಕವಿತೆಗಳೂ ಸುಂದರ ಕೃತಿಗಳು ಸರ್. ಸುಶ್ರಾವ್ಯವಾಗಿ ಹಾಡಿದ್ದೀರಿ ಕೂಡ. ಅಭಿನಂದನೆಗಳು ನಿಮಗೆ.

19. 'ಧೀಮಂತ ಭದ್ರಣ್ಣ' – ಶ್ರವಣ ಕುಮಾರಿ ಟಿ.ಎಸ್.

ಶ್ರವಣ ಕುಮಾರಿಯವರ 'ಭದ್ರಣ್ಣ' ಎಂಬುವವರ ವ್ಯಕ್ತಿಚಿತ್ರ. ಭದ್ರಣ್ಣ ಎನ್ನುವವರ ಜೊತೆ ನಾವು ಕೆಲಸ ಮಾಡಿದೆವೇನೋ ಎಂಬಂತೆ ಭಾಸವಾಗುತ್ತೆ. ಅವರನ್ನು ನೀವು ಚಿತ್ರಿಸಿದ ರೀತಿ, ನಮ್ಮ ಕಣ್ಣೆದುರೇ ಬಂದು ನಿಂತರೇನೋ ಎನಿಸುತ್ತದೆ. ಅವರ ಸ್ವಭಾವ, ನಿಷ್ಕಲ್ಮಶವಾದ ಆತ್ಮೀಯತೆಯನ್ನು ಗುರುತಿಸಿ, ನೀವು ಅವರ ಬಗ್ಗೆ ಬರೆದ ಲೇಖನ, ನಿಮ್ಮಲಿರುವ ಸಹಾನುಭೂತಿಗೆ ಸಾಕ್ಷಿ. ಉತ್ತಮವಾದ ಲೇಖನದಿಂದ ದಾಸೋಹವನ್ನು ಶ್ರೀಮಂತಗೊಳಿಸಿರುವುದಕ್ಕಾಗಿ ಅಭಿನಂದನೆಗಳು ಮೇಡಂ.

ಎಲ್ಲ ಲೇಖನಗಳನ್ನು ನನ್ನ ಚಿಕ್ಕ ಅನುಭವದ ಪರಿವಿಡಿಯಲ್ಲಿ ವಿಶ್ಲೇಸಿದ್ದೀನಿ. ಸಾಹಿತ್ಯ ಕ್ಷೇತ್ರದಲ್ಲಿ ಇನ್ನೂ ಬಹಳ ಕಿರಿಯಳು ನಾನು. ಏನಾದರೂ ತಪ್ಪಾಗಿದ್ದರೆ ಕ್ಷಮಿಸಿ. ಮತ್ತೆ ನನ್ನನ್ನು ತಿದ್ದಿ. ಅಧ್ಯಕ್ಷತೆಯ ದೊಡ್ಡ ಅವಕಾಶ ಕೊಟ್ಟ ಸಮಿತಿಗೆ ನನ್ನ ಹೃತ್ಪೂರ್ವಕ ವಂದನೆಗಳು.

***

ಸಮನ್ವಯ ಸಮಿತಿ, ಕನ್ನಡವೇ ಸತ್ಯ, ಸಾಹಿತ್ಯ ದಾಸೋಹ ವೇದಿಕೆ

ಸಂಪರ್ಕ ವಿಳಾಸ: ಶ್ರೀ ಬೆಂ.ಶ್ರೀ. ರವೀಂದ್ರ, 'ತವರು', 288, 3ನೆಯ ಮುಖ್ಯ ರಸ್ತೆ, 11ನೆಯ ಅಡ್ಡ ರಸ್ತೆ, 1ನೆಯ ಹಂತ, ವಸಂತ ವಲ್ಲಭ ನಗರ, ವಸಂತಪುರ, ಬೆಂಗಳೂರು – 560 061
ಚರವಾಣಿ: 9448994199 – ಇಮೇಲ್ ವಿಳಾಸ: bsrsbi1954@gmail.com

ಈ ಸಂಚಿಕೆಯ ಸಂಕಲನ, ವಿನ್ಯಾಸ : ಎಸ್. ಶೃಂಗೇಶ್ವರ ಶರ್ಮ
ಚರವಾಣಿ: 9448291329 – ಇಮೇಲ್ ವಿಳಾಸ: sringeswar.sharma@gmail.com

ಸಾಹಿತ್ಯ ದಾಸೋಹ 241 ನಡೆದ ದಿನಾಂಕ: 31 ಆಗಸ್ಟ್ 2025
ಸಂಚಿಕೆಯ ಬಿಡುಗಡೆ ದಿನಾಂಕ: 11 ಅಕ್ಟೋಬರ್ 2025

(ವಿವಿಧ ಲೇಖನಗಳಲ್ಲಿ ಬಳಸಿರುವ ಚಿತ್ರಗಳು – ಕೃಪೆ ಆಯಾ ಲೇಖಕರು ಮತ್ತು ಅಂತರ್ಜಾಲ)